# 6

# ದೇವರ ಬಾಧೆಪಟ್ಟ ಮಕ್ಕಳಂತೆ ವರ್ತಿಸುವದು (ಭಾಗ 3)

## (4:1-11)

### ಶರೀರ ಭಾವಕ್ಕೆ ವಿರುದ್ಧವಾಗಿ ನಿಮ್ಮನ್ನು ನೀವು ಆಯುಧವಾಗಿಸುವದು (4:1-3)

**1ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟದ್ದರಿಂದ ನೀವು ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ. ಯಾಕಂದರೆ ಶರೀರದಲ್ಲಿ ಬಾಧೆಪಟ್ಟವನು ಪಾಪದ ವಶದಿಂದ 2ತಪ್ಪಿಸಿಕೊಂಡವನಾಗಿ ಉಳಿದಿರುವ ತನ್ನ ಜೀವಮಾನಕಾಲದಲ್ಲಿ ಇನ್ನೂ ಮನುಷ್ಯರ ಅಭಿಲಾಷೆಗಳ ಪ್ರಕಾರ ಬದುಕದೆ ದೇವರ ಚಿತ್ತದ ಪ್ರಕಾರ ಬದುಕುವದಕ್ಕೆ ಪ್ರಯತ್ನ ಮಾಡುವನು. 3ನೀವು ಬಂಡುತನ ದುರಾಶೆ ಕುಡುತನದ ದುಂದೌತನ ಮಧ್ಯಪಾನಗೋಷ್ಠಿ ಅಹಸ್ಯವಾದ ವಿಗ್ರಹಾರಾಧನೆ ಈ ಮೊದಲಾದವುಗಳನ್ನು ನಡಿಸುವದರಲ್ಲಿಯೂ ಅನ್ಯಜನರಿಗೆ ಇಷ್ಟವಾದ ದುಷ್ಕೃತ್ಯಗಳನ್ನು ಮಾಡುವದರಲ್ಲಿಯೂ ಕಳೆದುಹೋದ ಕಾಲವೇ ಸಾಕು.**

3:13-18ರಲ್ಲಿ, ಅಪೊಸ್ತಲನು ತನ್ನ ಬಾಧೆಪಡುತ್ತಿರುವ ಓದುಗರನ್ನು ಸಂಬೋಧಿದ್ದಾನೆ. ಅವರ ಕಷ್ಟದ ದೃಷ್ಟಿಯು ಕ್ರಿಸ್ತ ಬಾಧೆಯ ಹಿನ್ನಲೆಯ ವಿರುದ್ಧ ಇರಬೇಕೆಂದು ಆತನು ಒತ್ತಾಯಿಸುತ್ತಿದ್ದಾನೆ. ನೋಹನ ದಿನಗಳಲ್ಲಿ ಯೇಸುವಿನಿಂದ ಮಾಡಲ್ಪಟ್ಟ ಘೋಷಣೆಯನ್ನು ಪೇತ್ರನ ಸಮಕಾಲೀನರು ಎದುರಿಸುತ್ತಿರುವ ತೀರ್ಪಿನಂತೆಯೇ ಈ ಜನರೂ ಕೂಡ ದೇವರ ನ್ಯಾಯತೀರ್ಪನ್ನು ಎದುರಿಸಿದ ಕರ್ತನ ಪ್ರೀತಿಯನ್ನು ಆತನ ಮನದಲ್ಲಿ ತರುವದಾಗಿದೆ. 3:19-22ರ ಪ್ರತ್ಯೇಕವಾದ ಹೇಳಿಕೆಯ ನಂತರ, ಅಪೊಸ್ತಲನು ಕ್ರಿಸ್ತನ ಬಾಧೆಯತ್ತ ಮರಳುತ್ತಾನೆ. ಕರ್ತನ ಬಾಧೆಯು ಅವರು ತಮ್ಮ ಸ್ವಂತ ಜೀವಿತದಲ್ಲಿ ಕಂಡುಕೊಂಡದ್ದರ ಬಗೆಗೆ ಬೋಧಿಸುವಂತದ್ದಾಗಿದೆ ಎಂದು ತನ್ನ ಓದುಗರು ತಿಳಿಯಬೇಕೆಂದು ಪೇತ್ರನು ಬಯಸುವವನಾಗಿದ್ದನು.

**ವಚನ 1.** ಯೇಸು "ಪಾಪಕ್ಕಾಗಿ ಸತ್ತನು" ಎಂದು ಪೇತ್ರನು 3:18ರಲ್ಲಿ ಹೇಳಿದ್ದಾನೆ. ಈಗ ಆತನು **ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟನು** ಎಂದು ಹೇಳುತ್ತಾನೆ. "ಬಾಧೆಪಡು" ಪದದ ಮೂಲಕ ಬಹುಶಃ ಪೇತ್ರನು ಕ್ರಿಸ್ತನ ಸಮಸ್ತ ದಿವ್ಯ ಅವತರಿಸುವಿಕೆಯನ್ನು ಸೂಚಿಸಿದ್ದಾನೆ. ಆತನ ಬಾಧೆಯು ಪೌಢ್ರತೆಯಲ್ಲಿ ಆತನ ಬೆಳೆಯುವಿಕೆಯನ್ನು ಆತನ ಸ್ವಂತ ಜನರ ಕೈಯಿಂದ ಆತನು ತಿರಸ್ಕರಿಸುವಿಕೆಯನ್ನು ಮತ್ತು ಜನಜಂಗುಳಿಯೊಡನೆ, ಅವರೊಡನೆ ಬೋಧಿಸುತ್ತಾ ಮತ್ತು ಸ್ವಸ್ಥಮಾಡುತ್ತಾ ಇರುವ ಉದ್ದನೆಯ ತಾಸುಗಳನ್ನು ಒಳಗೊಂಡಿರಬಹುದು. ಕ್ರೈಸ್ತನ ಬಾಧೆಯ ಎದುರಿಸುವಿಕೆಯಲ್ಲಿ, ಕ್ರಿಸ್ತನ ಬಾಧೆಯನ್ನು ಆತನ ಜನನದಿಂದ ಮರಣದವರೆಗಿನ ಆತನ ಅವರಿಗಾಗಿ ಉದಾಹರಣೆಯಾಗಿ ಇರಿಸಿರುವದನ್ನು ಪೇತ್ರನು ಅನ್ವಯಿಸುತ್ತಿದ್ದಾನೆ. ಎಲ್ಲಾ ವಿಷಯಗಳಲ್ಲಿ ಅವರು "ಅತನ ಹೆಜ್ಜೆಜಾಡನ್ನು ಅನುಸರಿಸಬೇಕು" (2:21). ಅವರು ಬಾಧೆಪಡುವಾಗ ಅವರು ಕರ್ತನೆಡೆಗೆ ನೋಡಬೇಕು ಮತ್ತು ಆತನ ಉದಾಹರಣೆಯಿಂದ ಧೈರ್ಯವನ್ನು ಪಡಿಯಬೇಕು. ಪೇತ್ರನ ಮಾತುಗಳನ್ನು ಅರಿತುಕೊಳ್ಳಲು ಇರುವ ಒಂದು ಸಾಧ್ಯತೆಯು ಇದಾಗಿದೆ ಆದರೆ ಅಲ್ಲಿ ಇನ್ನೊಂದು ಇದೆ.

ಪೇತ್ರನು ತನ್ನ ಓದುಗರ ಲಕ್ಷವನ್ನು ನಿರ್ದಿಷ್ಟವಾಗಿ ಕ್ರೂಜೆಯ ಮೇಲಿನ ಕ್ರಿಸ್ತ ವಿಮೋಚನಾ ಮರಣದೆಡೆಗೆ ಎಳೆಯುವದೇ ಇನ್ನೊಂದು ಸಾಧ್ಯತೆಯು ಆಗಿದೆ. ಈ ರೀತಿಯಲ್ಲಿ "ಶರೀರದಲ್ಲಿನ" ಕ್ರಿಸ್ತನ ಬಾಧೆಯ ಆಧಾರವು ಆತನು "ಪಾಪಕ್ಕಾಗಿ ಸತ್ತನು" ಎಂದು ಹೇಳುವದರ ಇನ್ನೊಂದು ರೀತಿಯಾಗಿದೆ (3:18). ಇದು ಪೇತ್ರನ ಅಂಶವಾಗಿದ್ದಾದರೆ, ಆತನ ಸೇವೆಯು ವಿಷಯವಾದಂಥದ್ದರಲ್ಲಿ ಆರಂಭದ ಸಮಯದಲ್ಲಿ ಆಗ ಇದು ಕ್ರಿಸ್ತನು ಅವರ ಮುಂದೆ ಇರಿಸಿದ ಉದಾಹರಣೆಯಾಗಿರುತ್ತಿದ್ದಿಲ್ಲ. ಬದಲಾಗಿ ತನ್ನ ಓದುಗರು ತಮ್ಮ ಹಿಂದಿನ ಪಾಪಮಯ ಜೀವಿತಕ್ಕೆ ಬೆನ್ನು ತಿರುಗಿಸುವ ಅವಶ್ಯಕತೆಯಿಂದ ಕ್ರಿಸ್ತ ವಿಮೋಚನಾ ಕಾರ್ಯದ ಪ್ರೇರಣೆಯನ್ನು ನೋಡಬೇಕೆಂದು ಅಪೊಸ್ತಲನು ಬಯಸಿದ್ದನು. ಯೇಸುವಿನ ಮಾನವ ಜೀವಿತದಲ್ಲಿ ಆತನ ಬಾಧೆಪಡುವಿಕೆಯನ್ನು ಸಹಿಸಿಕೊಳ್ಳುವಿಕೆಯು ಮತ್ತು ಶಿಲುಬೆಯ ದಿವ್ಯತೆಯ ಮಧ್ಯ ಸೂಕ್ಷ್ಮ ಅಂತರವನ್ನು ಮಾಡುವದು ಬಹುಶಃ ಇದು ಅನವಶ್ಯಕವಾದದಾಗಿದೆ. ನಾವು ಒಂದು ಆಯ್ಕೆಯನ್ನು ಮಾಡಿಕೊಂಡಿದ್ದಾದರೆ, ಪೇತ್ರನು ಕ್ರಿಸ್ತನ ವಿಮೋಚನೆಯ ಬಾಧೆಯನ್ನು ಮನದಲ್ಲಿ ಇರಿಸಿಕೊಂಡಿರುವದು ಸಂಭವನೀಯವಾಗಿದೆ. ಶಿಲುಬೆಯ ಮೇಲೆ ಕ್ರಿಸ್ತನ ಬಾಧೆಯು ಅಂತ್ಯಗೊಂಡಿದೆ, ಸಮಾಪ್ತಿಗೊಂಡಿದೆ ಮತ್ತು ಫಲವನ್ನು ತಂದಿದೆ. ಕ್ರಿಸ್ತನ ಪರಾರ್ಥಕ ಸಂಧಾನವು ಅಪೊಸ್ತಲನ ವಿಚಾರದ ಕೇಂದ್ರವು ಆಗಿದೆ (2:24; 3:18).

**ನೀವು ಸಹ ಆತನಿಗಿದ್ದ ಭಾವವನ್ನೆ ಹಿಡಿದುಕೊಳ್ಳಿರಿ** ಪದವು ಗ್ರೀಕ್ ಮಧ್ಯ ಸ್ವರದ ಕ್ರಿಯಾಪದದಿಂದ *(hoplizō)* ಭಾಷಾಂತರವಾಗಿದೆ. ಈ ಪದದ ಅರ್ಥವು "ನಿಮ್ಮನ್ನು ನೀವು ಸಿದ್ಧಮಾಡಿಕೊಳ್ಳಿರಿ" ಎಂದಾಗಿದೆ, ಆದರೆ ಆ ಪದವು ಸೇನೆಯ ಸಂಬಂಧವನ್ನು ಹೊಂದಿದೆ. ಸೇನೆಯ ಸಂದರ್ಭದಲ್ಲಿ ಇದು "ನಿಮ್ಮನ್ನು ನೀವು ಯುದ್ಧಕ್ಕಾಗಿ ಸಿದ್ಧಮಾಡಿಕೊಳ್ಳಿರಿ" ಎಂಬರ್ಥವನ್ನು ಹೊಂದಿತ್ತು. ಪದದ ಕ್ರಿಯಾಪದದ ರೂಪವು ಹೊಸ ಒಡಂಬಡಿಕೆಯಲ್ಲಿ ಮಾತ್ರ ಕಂಡಾಗ, ಪೌಲನಿಂದ ಬಳಸಲ್ಪಟ್ಟ ನಾಮಪದದ ರೂಪವು *hoplon* ಯುದ್ಧಕ್ಕಾಗಿ ಆತ್ಮೀಕ ಯುದ್ಧ ಸಾಮುಗ್ರಿಯನ್ನು ಸೂಚಿಸುವದಾಗಿದೆ (ರೋಮಾಪುರ 13:12; 2 ಕೊರಿಂಥ 6:7; 10:4).

ಪೇತ್ರನಿಗೋಸ್ಕರ, ಕ್ರಿಸ್ತೀಯ ಜೀವಿತವು ಶಾಂತತೆಗಿಂತಲೂ ಹೆಚ್ಚಾಗಿ ಕೆಟ್ಟದ್ದರೊಡನೆ ಹೋರಾಟವು ಆಗಿತ್ತು. ಇದು ಎಲ್ಲದ್ದರಲ್ಲಿ ಯುದ್ಧವನ್ನು ಒಳಗೊಂಡಿತ್ತು. ಪೌಲನು ಎಫೆಸ 6:11ರಲ್ಲಿ ಭಿನ್ನವಾದ ಪದವನ್ನು ಬಳಸಿದ್ದು ಅದರ ಅರ್ಥವು ಕೂಡಾ ಅದೇ ಆಗಿದೆ. "ಸೈತಾನನ ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ" (ನೋಡಿರಿ 1 ಥೆಸಲೋನಿಕ 5:8). ಕ್ರೈಸ್ತನು ಆಯುಧವನ್ನು *(ennoia)* ತನ್ನ ಅರಿತುಕೊಳ್ಳುವಿಕೆ, ಕ್ರಿಸ್ತನು ಒದಗಿಸಿದ ಆತ್ಮೀಕ ಸಂಪನ್ಮೂಲವನ್ನು ತನ್ನ ಮನದಲ್ಲಿ ಹೊಂದಿರುತ್ತಾನೆ. NASBಯಲ್ಲಿ **ಆತನಿಗಿದ್ದ ಭಾವವನ್ನೆ** ಎಂದು ಭಾಷಾಂತರವಾದ ಪದವು NIV "ಅದೇ ಭಾವನೆಯನ್ನು" ಎಂದಾಗಿದ್ದು ಮತ್ತು "ಅದೇ ಉದ್ದೇಶ" ಎಂದು NRSV ಯಲ್ಲಿ ಇದೆ. ವಿಶ್ವಾಸಿಗಳು ಕ್ರಿಸ್ತನು ತಮ್ಮ ಮುಂದೆ ಇರಿಸಿದ ಉದಾಹರಣೆಯನ್ನು ನೋಡುತ್ತಾ ತಮ್ಮ ಬಾಧೆಯತ್ತ ಅದೇ ಮನೋಭಾವದ ಮನಸ್ಸಿನಿಂದ ತಾವೇ ಆಯುಧವಾಗಿರುವವರಾಗಿದ್ದಾರೆ. ಯೇಸುವು ಕೊಟ್ಟಂಥ ಶಸ್ತ್ರಾಸ್ತ್ರ ಸೇನೆಯು ಅವರನ್ನು ಎದುರಿಸಿದ ದಿವ್ಯ ಬಾಧೆಯ ಮೂಲಕ ಸಹಿಸಿಕೊಳ್ಳಬಹುದಾಗಿದೆ.

ಯೇಸುವು ಉದಾಹರಿಸಿದ ಸಿದ್ಧತೆಯನ್ನು ಕ್ರೈಸ್ತನು ತಾನೇ ಹೊಂದಿರುವ ಅವಶ್ಯಕತೆಯು ಯಾಕಿದೆ ಎಂದು ವಿವರಿಸಲು, ಪೇತ್ರನು ಕೊನೆಯಾಗದ ಚರ್ಚೆಯ ಹುಟ್ಟಿನ ಪದವನ್ನು ಸೃಷ್ಟಿಸಿದ್ದು ಅದು ಯಾಕೆಂದರೆ ಶರೀರದಲ್ಲಿ ಬಾಧೆಪಟ್ಟವನು ಪಾಪದ ವಶದಿಂದ ತಪ್ಪಿಸಿಕೊಂಡವನಾಗಿರುವನು ಆಗಿದೆ. NIVಯ ಭಾಷಾಂತರವು ಅಕ್ಷರ ಸಹ ಆಗಿದೆ, ಆದರೆ ಇದು ಕಷ್ಟಕರವಾದ ಪ್ರಶ್ನೆಗಳನ್ನು ಎಬ್ಬಿಸುತ್ತದೆ. ಕ್ರೈಸ್ತರಾಗಿರುವದು ಎಂದರೆ ಒಬ್ಬನು ಬಾಧೆಯನ್ನು ಅನುಭವಿಸುವದು ಅವಶ್ಯವಾಗಿದೆ ಎಂದು ಪೇತ್ರನು

ಸೂಚಿಸುತ್ತಿದ್ದಾನೆಯೇ? ಕ್ರೈಸ್ತರು, ಸ್ವಭಾವದಿಂದ, ಪಾಪದಲ್ಲಿ ಇರುವದಿಲ್ಲ ಎಂದು ಆತನು ಸೂಚಿಸುತ್ತಿದ್ದಾನೆಯೇ? ಹೆಚ್ಚಿನ ಕ್ರೈಸ್ತರು ತಾವು "ಪಾಪದಿಂದ ಬಂದಿಸಲ್ಪಟ್ಟಿದ್ದಾರೆ" ಎಂದು ವಾದಿಸುವಷ್ಟು ಧೈರ್ಯವನ್ನು ಹೊಂದಿರುವದಿಲ್ಲ. ಜೀವಿತಕ್ಕೆ ನಿರ್ಧಿಷ್ಟತೆಯು ಬರಬೇಕಾಗಿದೆ. "ನಮ್ಮಲ್ಲಿ ಪಾಪವಿಲ್ಲ ಎಂದು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ ಮತ್ತು ಸತ್ಯವೆಂಬುದು ನಮ್ಮಲ್ಲಿ ಇಲ್ಲ" ಎಂದು ಯೋಹಾನನು ಬರೆಯುತ್ತಾನೆ (1 ಯೋಹಾನ 1:8). ಈ ಪರಿಗಣನೆಗಳು ಇದನ್ನು ಅನಿಷ್ಟತವನ್ನಾಗಿ ಮಾಡಿದ್ದು ಎಲ್ಲ ಕ್ರೈಸ್ತರು ಅಥವಾ "ಶರೀರದಲ್ಲಿ ಬಾಧೆಪಟ್ಟವರು" ಮಾತ್ರ ಒಂದು ಸಾರಿ ಕ್ರಿಸ್ತನನ್ನು ಹೊಂದಿಕೊಂಡರೆ ಅವರು ಎಂದಿಗೂ ಪಾಪಮಾಡರು ಎಂಬುದು ಅಪೊಸ್ತಲನ ಅರ್ಥವಾಗಿದೆ. ಸ್ಪಷ್ಟತೆಯ ದೃಷ್ಟಿಯಿಂದ ಒಂದು ರೀತಿಯಿಂದ ಅಕ್ಷರಸಹ ವ್ಯಾಖೆಯನ್ನು ತ್ಯಜಿಸಲು ಸಿದ್ಧವಿದೆ. "ಆತನು ಪಾಪದಿಂದ ಮಾಡಲ್ಪಟ್ಟ ತನ್ನ ದೇಹದಿಂದ ಬಾಧೆಯನ್ನು ಅನುಭವಿಸಿದ ಕಾರಣದಿಂದ" ಎಂದು ಭಾಷಾಂತರಿಸುವ ಅರ್ಥದಲ್ಲಿ ಪರಿಚ್ಛೇದವನ್ನು ಹಿಡಿಯುವ ಪ್ರಯತ್ನವು ಇದಾಗಿದೆ. "ಶರೀರದಲ್ಲಿ ಬಾಧೆಯನ್ನನುಭವಿಸುವವನು ಪಾಪದೊಡನೆ ಅಂತ್ಯಗೊಳಿಸುತ್ತಾನೆ" ಎಂಬ ಈ ರೀತಿಯಲ್ಲಿ NRSV ಭಾಷಾಂತರಿಸಿದೆ.

Wayne A. Grudem ರವರು "ಪಾಪದಿಂದ ವಿಮುಕ್ತರಾಗುವದು" ಎಂಬ ಪದವನ್ನು "ಒಳ್ಳೆಯದನ್ನು ಮಾಡುವದಕ್ಕಾಗಿ ಬಾಧೆಪಡುವಂತವರು ಮತ್ತು ಬಾಧೆಪಡುವದರಿಂದ ಇನ್ನೂ ದೇವರಿಗೆ ವಿಧೇಯರಾಗಿರುವವನ್ನು ಒಳಗೊಂಡದ್ದು ಪಾಪದೊಡನೆ ಸ್ಪಷ್ಟವಾದ ತಡೆಯನ್ನು ಮಾಡಿದೆ" ಎಂಬ ಈ ಪದಪುಂಜದ ಜೊತೆ ತೆಗೆದುಹಾಕಿದ್ದಾರೆ.[1] ಪಶ್ಚಾತ್ತಾಪಡುವದು ಒಂದಕ್ಕಿಂತಲೂ ಹೆಚ್ಚು ಸಾರಿಯ ಸಾಹಸವಾಗಿದೆ. ಇದರ ಅರ್ಥವು ಪಾಪದೊಡನೆಯ ಸ್ಪಷ್ಟವಾದ ತಡೆಯು ಆಗಿದೆ. ಇದು ರೋಮಾಪುರ 6:3-7ರಲ್ಲಿನ ವಿಚಾರಕ್ಕೆ ಸಮಾನವಾದದ್ದು ಆಗಿದೆ. ಒಬ್ಬನು ಕ್ರೈಸ್ತನ ಹಾಗೆ ಬಾದೆಪಟ್ಟಾಗ, ಪಾಪವು ಹಿಂದೆ ಇದ್ದಹಾಗೆ ಎಂದಿಗೂ ಅನ್ವಯವಾಗುವದಿಲ್ಲ. ಬಾಧೆಪಡುವದು ಶುದ್ಧಗೊಳಿಸುವದರ ಪರಿಣಾಮವು ಆಗಿದ್ದು (1:7) ಇದು ಸಹಜ ನಂಬಿಕೆಯೊಡನೆ ಹೊಂದಿಕೊಳ್ಳದೇ ಇರುವದು ಆಗಿರುತ್ತದೆ. ಒಂದರ್ಥದಲ್ಲಿ ಕ್ರೈಸ್ತರು ಪಾಪದಿಂದ ಬಂದಿಸಲ್ಪಡದೇ ಇದ್ದಾಗ, ನಂಬಿಕೆಗೆ ಅವರು ಬೆಲೆಯನ್ನು ತೆತ್ತಾಗ ಪಾಪದ ಅನ್ವಯವು ತನ್ನ ಹಿಡಿತವನ್ನು ಕಳೆದುಕೊಳ್ಳುತ್ತದೆ. ಎಂದಿಗೂ ತಿರುಗಿ ಕ್ರಿಸ್ತನ ಹೆಸರಿಗೋಸ್ಕರ ಬಾಧೆಪಡದವರು ದೇವರ ಚಿತ್ತವನ್ನು ಮೀರುವವರಲ್ಲಿ ಹಗುರವಾಗಿ ಪಾಲ್ಗೊಳ್ಳುವರು. ಕ್ರಿಸ್ತನ ಬಾಧೆಪಡುವಿಕೆ, ಕ್ರೈಸ್ತ ದೀಕ್ಷಾಸ್ನಾನ, ಮತ್ತು ಪರಿಶುದ್ಧ ಜೀವಿತ ಇವುಗಳು ಪೇತ್ರನ ವಿಚಾರದಲ್ಲಿ ಇದ್ದವು.

**ವಚನ 2.** ಕ್ರಿಸ್ತನಿಗಾಗಿ ಜೀವಿಸುವದು ಜೀವನಪೂರ್ತಿ ಒಡಂಬಡಿಕೆಯು ಆಗಿದೆ. ದೇವರ ಬಗ್ಗೆ ಅರಿಯದ ಆತ್ಮವು ಇರುವಾಗ, ಒಬ್ಬನ ಜೀವಿತವು ಶರೀರದ ಇಚ್ಛೆಗಳನ್ನು ಸಿಕ್ಕಾಪಟ್ಟೆ ಅನುಸರಿಸುತ್ತಿರುವಾಗಲೂ, ಸುವಾರ್ತೆಯನ್ನು ಕೇಳಿ ಅದಕ್ಕೆ ವಿಧೇಯವಾಗಿ, ಆತನು ಹೊಸ ಜೀವಿತವನ್ನು ಅಪ್ಪಿಕೊಳ್ಳುವನು. ಕ್ರೈಸ್ತನ ಜೀವಿತವು ಎರಡು ನಿಶ್ಚಿತ ಅವಧಿಯೊಳಗಡೆ ಬೀಳುವದು: (1) ಆತನ ಜೀವಿತವು ಆತನ ದೀಕ್ಷಾಸ್ನಾನದ ಪುನರುತ್ಪತ್ತಿಗೆ ಹಿಂದಿನದಾಗಿರುತ್ತದೆ ಮತ್ತು (2) ಮರುಹುಟ್ಟಿನ ನಂತರ ಆತನ ಜೀವನ (ನೋಡಿರಿ ಎಫೆಸ 4:22-24; ತೀತ 3:3-5). ತನ್ನ ಜೀವಿತವನ್ನು ಕ್ರಿಸ್ತನಿಗೆ ಕೊಡುವದನ್ನು ಹೊಂದಿರುವದು, ವಿಶ್ವಾಸಿಯು "ಪಾಪದಿಂದ ವಿಮುಕ್ತನಾಗಿರುವದು" ಆಗಿದೆ. ಆತನು ತನ್ನನ್ನು ತಾನು **ಉಳಿದಿರುವ ತನ್ನ ಜೀವಮಾನಕಾಲದಲ್ಲಿ ... ದೇವರ ಚಿತ್ತದ ಪ್ರಕಾರ ಬದುಕುವದಕ್ಕೆ ಪ್ರಯತ್ನಮಾಡುವನು** ಆಗಿದ್ದಾನೆ. ಹಿಂದಿನದು ಎಂದಿಗೂ ಬದಲಾಗದು. ಮುಂದೆ ಇದು ಅತಿಯಾಗಿ ಇರುವ ಅವಶ್ಯಕತೆಯಲ್ಲಿ ಇಲ್ಲ. ಇನ್ನೂ ಕ್ರೈಸ್ತನು ತನ್ನ ಹಳೆಯ ಮಾರ್ಗವು ಆತನ ಹಿಂದೆ ಇದ್ದರೂ ಕೂಡಾ ಆತನು ನಾಚಿಕೆಯಿಂದ ನೋಡುವವನಾಗಿರುತ್ತಾನೆ. ಭೂಮಿಯ ಮೇಲಿನ ಆತನ ಉಳಿದ ಸಮಯವು ನಿಮಿಷದಲ್ಲಿ ದಶಕದಲ್ಲಿ ಅಳೆಯಲ್ಪಟ್ಟರೂ ಇನ್ನೊಂದು ಸಂಗತಿಯಲ್ಲಿ

ಆತನು ಸಾಕಷ್ಟು ಶರೀರ ಭಾವವನ್ನು ಹೊಂದಿರುತ್ತಾನೆ. ಪಾಪವು ಜೀವಿತವನ್ನು ಕೆಳಕ್ಕಿಳಿಸುವದು ಮತ್ತು ಅಮಾನವೀಯವನ್ನಾಗಿಯೂ ಮಾಡುತ್ತದೆ.

ತನ್ನ ಜೊತೆ ವಿಶ್ವಾಸಿಗಳು ನಂಬಿಕೆಗೋಸ್ಕರ ಬಾಧೆಪಡುವಾಗ ಪೇತ್ರನು ಕಾಳಜಿಯುಳ್ಳವನಾಗಿದ್ದನು ಆದರೆ ಆತನು ಅವರು ಕೊನೇ ಪಕ್ಷ **ಇನ್ನೂ ಮನುಷ್ಯರ ಅಭಿಲಾಷೆಗಳ ಪ್ರಕಾರ ಬಗುಕದೇ** ಇರಲಿ ಎಂಬುದರ ಬಗ್ಗೆ ಕಾಳಜಿಯುಳ್ಳವನಾಗಿದ್ದನು. ಒಬ್ಬನ ನಡವಳಿಕೆಯ ಕಾರಣದಿಂದಲೇ ಬಾಧೆಗಳು ಬರುತ್ತವೆ. ಆ ಬೇಕುಗಳು ನಜರೇತಿನ ಯೇಸುವನ್ನು ತಿಳಿದಂಥವರಿಗೆ ಎಂದಿಗೂ ಕಾರಣವಾಗದು. ಕ್ರೈಸ್ತರು ತಮ್ಮ ವಿಶ್ವಾಸಿ ನೆರೆಯವರ ಮುಂದೆ ಆದರ್ಶಪ್ರಾಯವಾಗಿ ಜೀವಿಸಬೇಕೆಂದು ಅಪೊಸ್ತಲನು ಒತ್ತಾಯಿಸುವವನಾಗಿದ್ದಾನೆ. ಬಾಧೆಗಳು ಬಂದಾಗ, ಕ್ರೈಸ್ತರು ತಮ್ಮನ್ನು ಸಾತ್ವಿಕತೆ ಮತ್ತು ಒಳ್ಳೇಯತನಕ್ಕೆ ಸಮರ್ಪಿಸಿಕೊಂಡಾಗ ಇರುವವುಗಳಾಗಿವೆ. ಈ ಪತ್ರದಲ್ಲಿ ವಿಷಯವು ಮೇಲಕ್ಕೆ ಬರುವುದಾಗಿದೆ. ಸರಕಾರವು ಮತ್ತು ನ್ಯಾಯಾಲವು ಅನ್ಯಾಯವಾಗಿರಬಹುದು, ಆದರೆ ಪೇತ್ರನು ವಿಶ್ವಾಸಿಗಳಿಗೆ "ಎಲ್ಲರನ್ನೂ ಸನ್ಮಾನಿಸಿರಿ, ಸಹೋದರರನ್ನು ಪ್ರಿತಿಸಿರಿ, ದೇವರಿಗೆ ಭಯಪಡಿರಿ, ಅರಸನನ್ನು ಸನ್ಮಾನಿಸಿರಿ" ಎಂಬ ಜವಾಬ್ದಾರಿಯನ್ನು ಕೊಡುತ್ತಾನೆ (2:17). ದಾಸರು ಕೆಟ್ಟದ್ದಾಗಿ ನಡೆಸಿಕೊಳ್ಳುವದಕ್ಕೆ ವಸ್ತುವಾಗಿದ್ದರು, ಆದರೆ ಪೇತ್ರನು "ತಪ್ಪುಮಾಡಿ ಗುದ್ದು ತಿನ್ನುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದರಿಂದೇನು ಕೀರ್ತಿ?" ಎಂದು ಬರೆಯುತ್ತಾನೆ (2:20). ಅವಿಶ್ವಾಸಿಗಳು ಕ್ರೈಸ್ತರನ್ನು ಪ್ರತಿಯೊಂದು ನಂಬತಕ್ಕ ಅಪರಾಧಗಳಿಗೆ ಅನ್ಯಾಯವಾಗಿ ನಿಂದಿಸುವವರಾಗಿದ್ದು, ಇನ್ನೂ ಅಪೊಸ್ತಲನು "ಕೆಟ್ಟನಡತೆಯುಳ್ಳವರಾಗಿ ಬಾಧೆಪಡುವುದಕ್ಕಿಂತ ಒಳ್ಳೆಯ ನಡತೆಯುಳ್ಳವರಾಗಿಯೇ ದೇವರ ಚಿತ್ತವಿದ್ದರೆ ಬಾಧೆಪಡುವದೇ ಲೇಸು" ಎಂದು ಕಾರಣಕೊಡುತ್ತಾನೆ (3:17). ನಂತರ ಪೇತ್ರನು "ನಿಮ್ಮಲ್ಲಿ ಯಾವನಾದರೂ ಕೊಲೆಗಾರನು ಕಳ್ಳನು ದುಷ್ಟನು ಪರಕಾರ್ಯಗಳಲ್ಲಿ ತಲೆಹಾಕುವವನು ಆಗಿದ್ದು ಶಿಕ್ಷಾಪಾತ್ರನಾಗಬಾರದು" ಎಂದು ಹೇಳುವವನಾಗಿದ್ದಾನೆ (4:15).

ಗ್ರೀಕ್ ಪದವಾದ *sarx*ವನ್ನು "ಕೆಟ್ಟ ಮಾನವೀ ಇಚ್ಛೆಗಳು ಎಂದು NIVಯ ಭಾಷಾಂತರಿಸಿದೆ. ಇನ್ನೊಂದೆಡೆಯಲ್ಲಿ ಇದು "ಪಾಪಮಯ ಸ್ವಭಾವವನ್ನು" ಭಾಷಾಂತರಿಸಿದೆ. ಭಾಷಾಂತರಕಾರರು ಇಂಗ್ಲೀಷ್ ಓದುಗರು ಉಪಮೆಯನ್ನು ಅರಿತುಕೊಳ್ಳುವಲ್ಲಿ ಬಲು ಕಡಿಮೆ ಸಾಮರ್ಥ್ಯವನ್ನು ಹೊಂದಿದ್ದಾರೆ ಎಂಬ ಬಿರುದನ್ನು ಕೊಟ್ಟಿರುವದು ದುರಾದೃಷ್ಟವಾಗಿದೆ. ಸ್ಪಷ್ಟವಾಗಿ, ಪೌಲ ಮತ್ತು ಪೇತ್ರ ಇಬ್ಬರೂ *sarx* ಪದವನ್ನು ಶಾರೀರಕವಾಗಿ, ಪಾಪಮಯವಾದ್ದನ್ನು ಹೊಂದಿದ ಇಚ್ಛೆಗಳು ಎಂಬರ್ಥಕೊಡುವ ಪದಗಳನ್ನು ಬಳಸಿದ್ದಾರೆ. ನಾವು ಉಪಮೆಗಳು ಇರುವದಕ್ಕೆ ಅವಕಾಶ ಕೊಟ್ಟಿದ್ದಾದರೆ, ಇಂಗ್ಲೀಷ್ ಓದುಗನು ತನ್ನಷ್ಟಕ್ಕೆ ತಾನೇ "ಶರೀರ" ಎಂಬುದು ಗ್ರೀಕ್ ಓದುಗರಿಗೆ ಯಾವ ಅರ್ಥವನ್ನು ಕೊಡಬಲ್ಲದು ಎಂಬುದನ್ನು ಅರಿತುಕೊಳ್ಳಲು ಸಮರ್ಥನನ್ನಾಗಿಸಬಹುದು ಎಂದು ಒಬ್ಬನು ಆಶಿಸಬಹುದು. "ಶಾರೀರಕವಾಗಿ" ಎಂಬುದನ್ನು ಸಂಪೂರ್ಣ ತತ್ವಜ್ಞಾನದ ಶಿಕ್ಷಣವು ಬಯಕೆಯ ಕೇಂದ್ರಿಕೃತವಾದ ಇಚ್ಛೆ ಎಂದು ಓದುವದು ಅಲ್ಪವಾಗಿ ಅವಶ್ಯವಿರುವದು ಆಗಿದೆ. ತನ್ನ ಓದುಗರು ತಮ್ಮ ಹಿಂದಿನ ಜೀವಿತದಿಂದ ಶಾರೀರಕ ಅಭಿಲಾಷೆಯ ಜೀವಿತದಿಂದ ಹಿಂದಕ್ಕೆ ತಿರುಗಿಕೊಳ್ಳಬೇಕು ಮತ್ತು ದೇವರ ಚಿತ್ತವನ್ನು ಮಾಡುವ ಜೀವಿತದ ಮೇಲೆ ಕೇಂದ್ರೀಕರಿಸುವದನ್ನು ನೆನಪಿಡಬೇಕು ಎಂದು ಪೇತ್ರನು ಬಯಸುವವನಾಗಿದ್ದಾನೆ.

**ವಚನ 3.** ಇಸ್ರಾಯೇಲ್ ದೇವರನ್ನು ಆರಾಧಿಸುವ ಯೆಹೂದಿಯಾಗಲೀ ಅಥವಾ ಕ್ರೈಸ್ತನಾಗಲೀ ಗ್ರೀಕೋ ರೋಮನ್ ಜಗತ್ತಿನಲ್ಲಿ ಯಾವುದೇ ದೊಡ್ಡ ಆದರವನ್ನು ಹೊಂದಿರಲಿಲ್ಲ. ಅವರು ಒಳ್ಳೆಯ ಕಾರಣಗಳನ್ನು ಹೊಂದಿದ್ದರು. ಪ್ರತ್ಯಕ್ಷವಾಗಿ, ಪೇತ್ರನ ಓದುಗರ ದೊಡ್ಡ ಸಂಖ್ಯೆಯು ಯೆಹೂದ್ಯೇತರ ಹಿನ್ನಲೆಯಿಂದ ಕಿಸ್ತನೆಡೆಗೆ ಬಂದವರಾಗಿದ್ದರು. ಕ್ರೈಸ್ತರಾಗುವದಕ್ಕಿಂತ ಮುಂಚೆ, ಅವರು ಗ್ರೀಕೋರೋಮನ್ ಜೀವಿತದ ಮೂಸೆಯಲ್ಲಿ

ಸಂಪೂರ್ಣವಾಗಿ ಪಾಲುತೆಗೆದುಕೊಂಡವರಾಗಿದ್ದರು. ಅವರು ಅದರ ಲೈಂಗಿಕ ಶಿಷ್ಟಾಚಾರಗಳನ್ನು ಮತ್ತು ಅದರ ಸಾರ್ವಜನಿಕ ಹಬ್ಬಗಳನ್ನು ಅಲಂಗಿಸಿಕೊಂಡವರು ಆಗಿದ್ದರು. ಅವರು ಕ್ರೈಸ್ತರಾದಾಗ ಅವರ ಹಳೆಯ ಜಗತ್ತು ಅವರೊಡನೆ ಸಂಘರ್ಷಕ್ಕೆ ಇಳಿಯಿತು. ಸ್ನೇಹಿತರು ಮತ್ತು ಕುಟುಂಬದವರು ಅವರು ಹೇಗೆ ಯಾವಾಗಲೂ ಹೇಗೆ ಜೀವಿಸಿದ್ದರೋ ಅದೇ ರೀತಿ ಇರಬೇಕೆಂದು ಬಯಸಿದರು. ಕೆಲವರಂತೂ ತಮ್ಮ ಹಳೆಯ ಜೀವಿತವನ್ನು ನಿಧಾನವಾಗಿ ಬಹಿಷ್ಕರಿಸತೊಡಗಿದ್ದರು. **ಅನ್ಯಜನರಿಗೆ ಇಷ್ಟವಾದ ಕಾರ್ಯಗಳನ್ನು ಮಾಡುವುದರಲ್ಲಿಯೂ ಕಳೆದುಹೋದ ಕಾಲವೇ ಸಾಕು** ಎಂದು ಪೇತ್ರನು ಹೇಳುವಾಗ ಆತನ ಮಾತುಗಳು ಕೊಂಕು ನುಡಿಯ ಮೇಲೆ ವಿಷಾಲವಾದಂಥದ್ದು ಆಗಿತ್ತು. ಸಂತೃಪ್ತತೆಯು ವಾಸ್ತವಿಕವಾದದ್ದಾಗಿದೆ. "ನೀನು ಅದನ್ನು ಬಹುಕಾಲದಿಂದ ಮಾಡುತ್ತಿದ್ದಿ" ಎಂದು ತಂದೆತಕಾಯಿಗಳು ಮಗುವಿಗೆ ಹೊಡೆದ್ದಾದರೆ ಇದರ ಅರ್ಥವು ಬಹುಕಾಲಕ್ಕಿಂತಲೂ ಹೆಚ್ಚಿನದು ಆಗಿದೆ. ಇದರ ಅರ್ಥದಲ್ಲಿ ನಾವು ಪೇತ್ರನ ಮಾತುಗಳನ್ನು ಅರ್ಥೈಸಿಕೊಳ್ಳಬೇಕು. "ಕಳೆದುಹೋದ ಕಾಲವೇ ಸಾಕು" ಎಂದು ಆತನು ಹೇಳುವಾಗ ಇದು ಕೊಡಬೇಕಾದದ್ದಕ್ಕಿಂತಲೂ ಸಾಕಷ್ಟದ್ದಾಗಿದೆ ಎಂಬರ್ಥವನ್ನು ಕೊಡುತ್ತದೆ. "ಅನ್ಯಜನರಿಗೆ ಇಷ್ಟವಾದ ಕಾರ್ಯಗಳನ್ನು" ಮುಂದುವರೆಸುವದಕ್ಕೆ ಕ್ರೈಸ್ತರಿಗೆ ಯಾವ ಕಾರಣಗಳು ಇಲ್ಲ.

ಯೆಹೂದ್ಯರಿಗೆ "ಅನ್ಯಜನರು" ಎಂದರೆ ಯೆಹೂದ್ಯನಲ್ಲದವನೇ ಆಗಿದ್ದನು. ಯೇಸು ಶಿಷ್ಯರನ್ನು "ಹನ್ನೆರಡು ಮಂದಿಯನ್ನು ನಿಯೋಗವಾಗಿ" ಕಳುಹಿಸುವಾಗ, ಆತನು ಅವರಿಗೆ ಅನ್ಯಜನಗಳ ಕಡೆಗೆ ಹೋಗಬೇಡಿರಿ ಎಂದು ಹೇಳುತ್ತಾನೆ (ಮತ್ತಾಯ 10:5). ಅವರು ಅನ್ಯಜನರಿಗೆ ಬೋಧಿಸಬಾರದು ಎಂಬುದು ಆತನ ಅರ್ಥದಲ್ಲಿ ಸ್ಪಷ್ಟವಾಗಿದೆ. ಹೇಗೋ, ನಿಜ ಇಸ್ರಾಯೇಲರಾಗಿರುವದನ್ನು ಸಭೆಯು ತಾನೇ ಅರಿತುಕೊಂಡಿತ್ತು ಹೀಗೆ, "ಅನ್ಯ ಜನಗಳಂತೆ ಕಾಮಾಭಿಲಾಶೆಗೆ ಒಳಪಡದೆ" ಎಂದು ಪೌಲನು ಥೆಸಲೋನಿಕದವರಿಗೆ ಬರೆಯುವಾಗ (1 ಥೆಸಲೋನಿಕ 4:5), ಆತನ ಗ್ರೀಕ್ ಕ್ರೈಸ್ತ ಓದುಗರು ಪೌಲನು ಸೂಚಿಸಿದಂಥಹ ಕ್ರಿಸ್ತನನ್ನು ಅಂಗೀಕರಿಸದೆ ಅನ್ಯಜನರಾಗಿರುವ ತಮ್ಮ ಜೊತೆ ಗ್ರೀಕ್‌ರನ್ನು ಅರಿತುಕೊಳ್ಳುವಂತದ್ದಾಗಿತ್ತು. ದೀಕ್ಷಾಸ್ನಾನದಲ್ಲಿ ಕ್ರಿಸ್ತನನ್ನು ಧರಿಸಿಕೊಂಡ ನಂತರವೂ ಅವರು ಇನ್ನೂ ಗ್ರೀಕ್ ಜನಾಂಗವಾಗಿಯೇ ಉಳಿದಿದ್ದರು, ಆದರೆ ಅವರು ಅನ್ಯಜನಾಂಗವಾಗಿರಲಿಲ್ಲ. ಅನ್ಯಜನರು ಕ್ರೈಸ್ತರಲ್ಲದವರು ಆಗಿದ್ದಾರೆ. ಪೇತ್ರನು ಪೌಲನು 1 ಥೆಸಲೋನಿಕ 4:5ರಲ್ಲಿ ಮಾಡಿದಂತೆಯೇ "ಅನ್ಯಜನರು" ಎಂಬ ಪದವನ್ನು ಬಳಸಿದ್ದಾನೆ. ಈ ಪದವನ್ನು ನಾವು ಭಾಷಾಂತರಿಸುವ ಮಾರ್ಗದಲ್ಲಿ ಈ ಎಲ್ಲಾ ಸೂಚನೆಗಳು ಇರುವವು ಆಗಿವೆ. ಕ್ರೈಸ್ತನಲ್ಲದವ ಇಂಗ್ಲೀಷ್ ಪದದಲ್ಲಿ "ಅವಿಶ್ವಾಸಿ" ಎಂದಾಗಿದೆ ಹೊರತು "ಅನ್ಯಜನರು" ಅಲ್ಲ. NIVಯು 1 ಪೇತ್ರ 4:3ರಲ್ಲಿ "ಅವಿಶ್ವಾಸಿಗಳು" ಎಂದು ಭಾಷಾಂತರಿಸಿದಾಗ ಇದು ಒಳ್ಳೆಯ ಕಾರಣವಾಗಿತ್ತು.

1 ಪೇತ್ರ 2:1ರಲ್ಲಿ ವಿಶ್ವಾಸಿಯು ಹಿಂದಕ್ಕೆ ಬಿಡಬಹುದಾದ ಗುಣಗಳ ಪಟ್ಟಿಯನ್ನು ಅಪೊಸ್ತಲನು ಕೊಟ್ಟಿದ್ದಾನೆ. 4:2ರಲ್ಲಿ ಆತನು ಗಣನೀಯವಾಗಿ ಭಿನ್ನವಾದ ಪಟ್ಟಿಯನ್ನು ಕೊಟ್ಟಿದ್ದಾನೆ. ಹಿಂದಿನ ಪರಿಚ್ಛೇದದಲ್ಲಿ ಇದು ಕ್ರಿಸ್ತಿಯ ಸಮುದಾಯದಲ್ಲಿರುವ ಪಾಪವಾಗಿದ್ದು ಈಗ ವಿಷಯವಾಗಿದೆ. 4:3ರಲ್ಲಿ ಅವಿಶ್ವಾಸಿಯ ಜೀವನ ಶೈಲಿಯು ಪರಿಗಣನೆಯ ಅಡಿಯಲ್ಲಿ ಇರುವಂಥದ್ದಾಗಿದೆ. ಪಾಪಗಳ ಪಟ್ಟಿಯನ್ನು ಪೇತ್ರನು ಅವಿಶ್ವಾಸಿಯ ಜೀವಿತದ ಗುಣಲಕ್ಷಣಗಳನ್ನು ಅದಕ್ಕೆ ಸಮಾನವಾದ ಪಟ್ಟಿಯನ್ನು ಪತ್ರಿಕೆಯಲ್ಲಿ ಮುಂದಿಟ್ಟಿದ್ದಾನೆ. 4:3ರಲ್ಲಿ ರೋಮಾಪುರ 13:13 ಮತ್ತು ಗಲಾತ್ಯ 5:19-21ರಲ್ಲಿ, ಮದಬರಿಸುವಂಥ ಅಭ್ಯಾಸಗಳು (ಕುಡಿತನ ಮತ್ತು ಲೈಂಗಿಕ ವ್ಯಭಿಚಾರ) ಪ್ರಬಲವಾಗಿವೆ. ಪ್ರತಿಯೊಂದು ಪದಗಳ ಸೂಕ್ಷ್ಮ ಪರೀಕ್ಷೆಯು ಸಹಾಯಕಾರಿಯಾಗಿದೆ.

**ವಿಷಯಾಸಕ್ತ** *(aselgeia)* ಅಂದರೆ ಆತ್ಮಸಂಯವನ್ನು ತ್ಯಜಿಸುವದೇ ಆಗಿದೆ. ಇದು ನಡತೆಯನ್ನು ಹೇಳುವದಾಗಿದ್ದು ದೇವರು ಅಥವಾ ಮನುಷ್ಯನು ಯೋಗ್ಯವಾದಂಥ

ಅಥವಾ ಒಪ್ಪಿಕೊಳ್ಳಬಹುದಾದ ನಡೆತೆಯ ಬಗೆಗೆ ಯಾವುದೇ ಕಾಳಜಿಯಿಲ್ಲದ್ದನ್ನು ಅದು ತೋಲಿಸುವದಾಗಿದೆ. ಒಬ್ಬನು ತನ್ನ ಪಶುಸಾದೃಶ್ಯದ ಇಚ್ಚೆಗೆ ಕೊಟ್ಟಾಗ ಈ ಪಾಪ ಪ್ರಜ್ಞೆಯು ಆತನಿಗಿರುತ್ತದೆ. **ಕಾಮ** *(epithumia)* ತಾನೇ ಒಂದು ಸಾಮಾನ್ಯ ಪದವಾಗಿದೆ. ಇದು ಒಳ್ಳೆಯ ಅಥವಾ ಕೆಟ್ಟ ಇಚ್ಚೆಗಳನ್ನು ಸೂಚಿಸಬಹುದು. 1 ಪೇತ್ರ 4:3ರಲ್ಲಿ ಭಾಷಾಂತರವಾದಂಥ "ಕಾಮ" ಎಂಬ ಪದವನ್ನು ಒಪ್ಪಿಕೊಳ್ಳುವ ಒಂದೇ ಸಂದರ್ಭವು ಇದಾಗಿದೆ. ಕೆಲ ಇಚ್ಛೇಗಳು ಒಳ್ಳೆಯವು ಆಗಿರುತ್ತವೆ. NASB ಯು ಅದೇ ಗ್ರೀಕ್ ಪದವನ್ನು ಫಿಲಿಪ್ಪಿ 1:23ರಲ್ಲಿ "ಅಭಿಲಾಷೆ" ಎಂದು ಭಾಷಾಂತರಿಸಿದ್ದು "ಇಲ್ಲಿಂದ ಹೋಗಿ ಬಿಟ್ಟು ಕ್ರಿಸ್ತನ ಜೊತೆಯಲ್ಲಿ ಇರಬೇಕೆಂಬುದೇ ನನ್ನ ಅಭಿಲಾಷೆ" ಎಂದಿದೆ. ಪೇತ್ರನು ಬಳಸಿದ ಈ ಪದದ ಅರ್ಥವು ಕೆಟ್ಟ ಇಚ್ಚೆಗಳು ಎಂದಾಗಿದ್ದು, ವಿಶೇಷವಾಗಿ ಅವುಗಳು ಲೈಂಗಿಕ ಸ್ವಭಾವವು ಆಗಿರುತ್ತದೆ. **ಕುಡಿಕತನ** *(oinophlugia)* ಅಲ್ಪ ವ್ಯಾಖ್ಯಾನವು ಇದಕ್ಕೆ ಅವಶ್ಯವಿದೆ. ಹೊಸ ಒಡಂಬಡಿಕೆಯಲ್ಲಿ ನಿರ್ಧಿಷ್ಟ ಗ್ರೀಕ್ ಪದವು ಅತಿಯಾದ ಮಧ್ಯಪಾನ ಸೇವನೆಗೆ ಬಳಕೆಯಾದದ್ದು ಇದೊಂದೆ ಸಮಯದಲ್ಲಿ. ಪ್ರಾಚೀನಕಾಲದಲ್ಲಿ ಮತ್ತು ಆಧುನಿಕ ಕಾಲದಲ್ಲಿ ಲೈಂಗಿಕ ಅನೈತಿಕತೆ, ವ್ಯಭಿಚಾರದ ಜೀವಿತ, ಮಧ್ಯಪಾನದ ಸೇವನೆ ಇವೆಲ್ಲವೂ ಜೊತೆಯಾಗಿದ್ದವು.

ಕುಡಿಕತನ *(kōmos)* ಗ್ರೀಕ್ ದೇವರಿಗೆ ಹಬ್ಬಗಳಲ್ಲಿ ಸಮರ್ಪಿಸಿದ ಬಾರಿ ಮೋಜನ್ನು ಸೂಚಿಸುವುದಾಗಿದೆ. Dionysus ಆರಾಧನೆಯು ನಿರ್ಧಿಷ್ಟವಾಗಿ ಅಂಥ ಸಂಗತಿಗಳನ್ನು ಸೂಚಿಸುವುದಾಗಿದೆ. ಮೋಜಿನ ಸಮಯ ಆತನ ಕೈಯಲ್ಲಿದ್ದಾಗ ಕ್ರೈಸ್ತನನ್ನು ತನ್ನ ಆಯ್ದುಕೊಳ್ಳಬೇಕು ಎಂದು ಆತನಿಗೆ ನೆನಪಿಸುವುದಾಗಿದೆ. ಮಧ್ಯಪಾನಗೋಷ್ಟಿ *(potos)* ಈ ಪದವು ಹಿಂದಿನದಕ್ಕೆ ಬಲು ಹತ್ತಿರವಾಗಿದೆ ಆದರೆ ಅದರ ಧಾರ್ಮಿಕ ಸಂಬಂಧಗಳು ಇಲ್ಲದಾಗಿದೆ. ಈ ಪದವು ಇಲ್ಲಿ ಕೇವಲ ಹೊಸ ಒಡಂಬಡಿಕೆಯಲ್ಲಿ ಮಾತ್ರ ಬಳಸಲ್ಪಟ್ಟಿದೆ, ಆದರೆ ಲೌಕಿಕ ಜಗತ್ತಿನಲ್ಲಿ ಮಧ್ಯವು ದಾರಾಳವಾಗಿ ಸಿಕ್ಕುವ ಔತಣಕೂಟಗಳನ್ನು ಸೂಚಿಸುವುದಾಗಿದೆ. ಮಧ್ಯಪಾನ ಸೇವಿಸುವದು, ಮತ್ತು ಲೈಂಗಿಕ ಅತ್ಯಾಚಾರಗಳು ಹತ್ತಿರ ಸಂಬಂಧವಿರುವದನ್ನು ಮತ್ತೇ ಗಮನಿಸುವದು ಉಚಿತವಾಗಿದೆ. ವಿಶ್ವಾಸಿಗಳು ಅಲಕ್ಷಿಸಬೇಕಾದ ದುರ್ಗಣಗಳ ಪಟ್ಟಿಯನ್ನು **ಅಸಹ್ಯಕರವಾದ ವಿಗ್ರಹರಾಧನೆಯೊಂದಿಗೆ** ಪೇತ್ರನ ಓದುಗರ ಜೀವನದ ಸುತ್ತಲು ಚೆನ್ನಾಗಿ ಹೆಣೆಯಲ್ಪಟ್ಟಿತು. ಅವರು ವಿಗ್ರಹಾರಾಧನೆಯಿಂದ ಬಂದವರಾಗಿದ್ದರು. ಗ್ರೀಕೋ ರೋಮಾ ದೇವರ ಆರಾಧನೆಯು ಅನೈತಿಕ ನಡವಳಿಕೆಗೆ ನಿರ್ಭಂಧ ಹಾಕುವದಕ್ಕೆ ದೂರವಾಗಿದ್ದು, ಅನೈತಿಕತೆಯ ದೊಡ್ಡ ವ್ಯವಹಾರಕ್ಕೆ ಮೂಲವಾಗಿತ್ತು. ಇದಕ್ಕೆ ಜೊತೆಯಾಗಿ, ಇದು ಅಮಾನವೀಯ ನಡತೆಗೆ ಅವಕಾಶಕೊಡುವದೂ ಮತ್ತು ಪ್ರೇರೇಪಿಸುವದು ಆಗಿತ್ತು. ಮಕ್ಕಳ ಮುಂದೆ ಇಡುವ ಪ್ರತಿಯೊಂದು ದೇವರಿಂದ ಅಸಮ್ಮತಿಯ ಯಾವುದೇ ಪದಗಳನ್ನು ಹೊಂದದ ಗ್ಲಾಡಿಯೇಟರ್ ಸ್ಪರ್ಧೆ, ಲೈಂಗಿಕ ಕೂಟಗಳು ಇವುಗಳು ಗ್ರೀಕರ ಮನೆಗಳಲ್ಲಿ ಸಿಕ್ಕುವವು ಆಗಿದ್ದವು.

## ಅವಿಶ್ವಾಸಿಕ ಹೊಣೆಗಾರಿಕೆ (4:4-6)

**4 ತಾವು ಮಾಡುವ ಅಪರಿಮಿತವಾದ ಪಟಿಂಗತನದಲ್ಲಿ ನೀವು ಸೇರದೇ ಇದ್ದದ್ದಕ್ಕೆ ಅವರು ಆಶ್ಚರ್ಯಪಟ್ಟು ನಿಮ್ಮನ್ನು ದೂಷಿಸುತ್ತಾರೆ. 5 ಅವರು ಬದುಕುವವರಿಗೂ ಸತ್ತವರಿಗೂ ನ್ಯಾಯತೀರಿಸುವದಕ್ಕೆ ಸಿದ್ಧವಾಗಿರುವಾತನಿಗೆ ಉತ್ತರಕೊಡಬೇಕು. 6 ಸತ್ತಿರುವವರು ಮನುಷ್ಯ ಜಾತಿಗೆ ಬರುವ ಮರಣವೆಂಬ ತೀರ್ಪನ್ನು ಶರೀರಗಳಾಗಿದ್ದಾಗ ಹೊಂದಿದರು; ಅವರು ಆತ್ಮ ಸಂಬಂಧವಾಗಿ ದೇವರ ಜೀವದಲ್ಲಿ ಪಾಲುಗಾರರಾಗುವಂತೆ ಅವರಿಗೂ ಸುವಾರ್ತೆಯು ತಿಳಿಸಲ್ಪಟ್ಟಿತು.**

ವಿಶ್ವಾಸಿಯ ಸಮಾಜವನ್ನು ಲಕ್ಷಿಕರಿಸುವಂಥ, ಆತನ ಓದುಗರು ಹಿಂದೆ

ಅಪ್ಪಿಕೊಂಡಂಥ, ವಿಶ್ವಾಸಿಗಳು ವಿಗ್ರಹಾರಾಧನೆಯಲ್ಲಿ ಮತ್ತು ಅನೈತಿಕತೆಯಲ್ಲಿ ಪಾಲ್ಗೊಳ್ಳುವದನ್ನು ಮುಂದುವರೆಸಬೇಕೆಂದು ಆಗ್ರಹಿಸುವ ಅವಿಶ್ವಾಸಿಗಳಿಂದ ದೇವರಿಲ್ಲದ ಜೀವಿತದಿಂದ ಪೇತ್ರನ ವಿಚಾರವು ತಿರುಗಿಕೊಂಡಿತು. ಜೀವಿತವನ್ನು ಹಾಳು ಬೀಳಿಸುವಂತೆ ಕೊಡಲ್ಪಟ್ಟವುಗಳು ಇದರಲ್ಲಿ ಪಾಲ್ಗೊಳ್ಳುವದರ ಮೂಲಕ ಇತರರು ತಮ್ಮ ಜೀವಿತದ ಅಂಶವನ್ನು ಖಂಡಿತವಾಗಿ ಹೇಳದೆ ಹೊರತು ಇದು ಪದೇ ಪದೇ ಹಾಸ್ಯಾಸ್ಪದವಾದದ್ದಕ್ಕೆ ಅರ್ಹವಾದದ್ದು ಆಗಿದೆ. ವಿಶ್ವಾಸಿಗಳು ಈ ವಿಗ್ರಹಾರಾಧನೆಯಲ್ಲಿ ಪಾಲ್ಗೊಳ್ಳುವದಕ್ಕೆ ನಿರಾಕರಿಸಿದಾಗ, ಅವರ ಒಳ್ಳೆಯ ಜೀವಿತವನ್ನು ದ್ವೇಷಿಸುವವರು ತಮ್ಮನ್ನು ತಾವೇ ದೋಷಾರೋಪ ಮಾಡಿಕೊಂಡಂತೆ ಅವರು ಕಾಯೀನನಂತೆ ವರ್ತಿಸುವವರು ಆಗಿರುತ್ತಾರೆ (1 ಯೋಹಾನ 3:12).[2]

**ವಚನ 4.** ಗ್ರೀಕ್ ಪಟ್ಟಣಗಳಿಗೆ ಹೊಂದಿಕೊಂಡಿರುವ ಸಾರ್ವಜನಿಕ ಜೀವಿತವು ಹಬ್ಬಗಳು, ಆಟಗಳು, ಮತ್ತು ದೇವರಿಗೆ ಅರ್ಪಿಸುವ ಆಚರಣೆಗಳು ಇವುಗಳ ಸುತ್ತ ತಿರುಗುತ್ತಿತ್ತು. ಸಾರ್ವಜನಿಕ ಹಬ್ಬಗಳಲ್ಲಿ ಪ್ರಕಟಿಸಿಕೊಂಡ ರೀತಿಯ ಜೀವಿತದ ಸಂಗತಿಗಳನ್ನು ಪೇತ್ರನು ಕೇವಲ ಖಂಡಿಸಿದ್ದು ಅದು ಕುಡಿಕನ ಮತ್ತು ಲಂಪುಟತೆ ಇದು ಅಸಹಜವಾದದ್ದೇನಲ್ಲ. ಸ್ಪಷ್ಟವಾದ ತಡೆಯು (4:1) ಕ್ರೈಸ್ತರು ಇದನ್ನು ಜೀವಿತದ ರೀತಿಯನ್ನಾಗಿ ಮಾಡಿಕೊಂಡಿದ್ದು ಇದು ಅನೇಕ ನಾಗರೀಕ ಘಟನೆಗಳಲ್ಲಿ ಅವರನ್ನು ಪಾಲ್ಗುಳ್ಳುವಂತೆ ಮಾಡುವುದಕ್ಕೆ ಅಸಾಧ್ಯವಾಗಿತ್ತು. ಅವಿಶ್ವಾಸಿಗಳಿಗೆ ಇದು ಅಪರಾಧವಾಗಿ ಕಂಡಿತು. ಕ್ರೈಸ್ತನಾಗಿ ಕಂಡುಬರುವ ಕಾರ್ಯವು ಅಲ್ಪವಾದ ಆಸಕ್ತಿಯೊಡನೆ ಗುರುತಾಗಬಹುದಿತ್ತು. ಕ್ರೈಸ್ತರು ತಮ್ಮ ಧರ್ಮದ ಬಗ್ಗೆ ಯೋಗ್ಯವಾಗಿ ಭಿನ್ನಭಿನ್ನವಾಗಿದ್ದರೂ, ಅವಿಶ್ವಾಸಿಗಳು ಕ್ವಚಿತ್ತಾಗಿ ಹೊಂದಿದ್ದು ನೆರೆಯವ ಅಥವಾ ಸಂಬಂಧಿಯು ಯೇಸುವನ್ನು ದೇವರೆಂದು ಆರಾಧಿಸಲು ಆಯ್ದುಕೊಂಡಾಗ ಇದನ್ನು ಅಪರಾಧಿಯವಾಗಿ ಕಂಡುಕೊಳ್ಳುತ್ತಾರೆ. ಗ್ರೀಕ್ ಸಂಸ್ಕೃತಿಯು ಯಾವಾಗಲೂ ಇನ್ನೊಂದು ದೇವರಿಗೆ ಅವಕಾಶವನ್ನು ಹೊಂದಿರುವಂಥದ್ದಾಗಿದೆ. ಸಾಮಾನ್ಯವಾಗಿ, ಅದೇ ಜನರು ಸಾರ್ವಜನಿಕ ಘಟನೆಯ ಆಮಂತ್ರಣವನ್ನು ನಿರಾಕರಿಸಿದಾಗ, ಅವರು ಅಂತರವನ್ನು ಕಂಡುಕೊಂಡಾಗ, ಹಳೆಯ ಸಂಪ್ರದಾಯಗಳು ಮತ್ತು ಹಳೆಯ ದೇವರುಗಳು ಇಲ್ಲವಾದಾಗ, ಅವಿಶ್ವಾಸಿಗಳು **ಅಚ್ಚರಿಗೊಳ್ಳುತ್ತಾರೆ.** ಹೊಸ ದೇವರು ಅವರನ್ನು ಅಸಂತುಷ್ಟಿಪಡಿಸನು, ಆದರೆ ಅವರು ಕ್ರೈಸ್ತರು ಮಾಡಿದಂಥ ಒಬ್ಬನನ್ನು ಬಿಟ್ಟು ಬೇರೆ ದೇವರಿಲ್ಲ ಎಂಬ ಪ್ರತಿಪಾದನೆಯು ಮನನೋಯಿಸುವುದಾಗಿತ್ತು.

ಹಳೆಯ ದೇವರು ಏನೂ ಇಲ್ಲದವನಾಗಿದ್ದಾನೆ. ಅವರ ನೆರೆಯವರು ಮತ್ತು ಸ್ನೇಹಿತರು ಸಾರ್ವಜನಿಕ ಘಟನೆಗಳಲ್ಲಿ ಪಾಲ್ಗೊಳ್ಳಲು ನಿರಾಕರಿಸಿದಾಗ ಇದು ರೇಗಿಸುವದೇ ಆಗಿರುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ಇದು ಅವಮಾನಕಾರಿ ಆಗಿತ್ತು. ಕ್ರೈಸ್ತತ್ವವು ಪ್ರತಿಯಾದ - ಸಂಸ್ಕೃತಿಕ ಪ್ರಭಾವವನ್ನು ಪಡೆಯುತ್ತಾ ಮುಂದೆ ಹೋಗಿದೆ. ನಜರೇತಿನ ಯೇಸುವಿನ ಬೋಧನೆಗಳು ದುಂದುಗಾರ ಜನರಿಗೆ ಅನೈತಿಕತೆ ಮತ್ತು ಅನ್ಯಾಯಕ್ಕೆ ಸಲೀಸಾಗಿ ಸವಾಲನ್ನು ಮಾಡುವವು ಆಗಿದ್ದವು. ಪೇತ್ರನು ಯೇಸುವನ್ನು ಬಾಯಿಮಾತಿನಿಂದ ಹೊಗಳುತ್ತಾ ನಿಂತಿರಲಿಲ್ಲ. ಒಬ್ಬನು ಯೇಸು ಕ್ರಿಸ್ತನನ್ನು ಹೊಂದಿಕೊಂಡು **ತಾವು ಮಾಡುವ ಅಪರಿಮಿತವಾದ ಪಟಿಂಗತನದಲ್ಲಿ** ಮುಂದುವರೆಯಲಾರನು ಮತ್ತು ಅವಿಶ್ವಾಸಿ ನೆರೆಯವರ **ಜೊತೆಸೇರಲಾರನು.** *anachusis* ಪದವು "ಅಪರಿಮಿತವಾದ" ಎಂದು ಭಾಷಾಂತರವಾಗಿದ್ದು, ಅಕ್ಷರಸಹ "ನೆರೆಹಾವಳಿ" ಎಂಬರ್ಥವನ್ನು ಕೊಡುತ್ತದೆ. ವ್ಯಕ್ತಿಯು ಅವರ ಜೊತೆ ಅಜಾಗರೂಕತೆಯ ಪ್ರವಾಹದ ಬಹಿಷ್ಕೃತ ಜೀವಿತದ ಲಕ್ಷಣದ ಅವಿಶ್ವಾಸಿ ಸಮಾಜಕ್ಕೆ "ಸೇರುವದಕ್ಕೆ" ಕುತೂಹಲವುಳ್ಳವನಾಗದೇ ಇರುವದಕ್ಕೆ ಅವರು "ಅಚ್ಚರಿಗೊಳ್ಳುತ್ತಾರೆ." ಎಫೆಸ 5:18ರಲ್ಲಿ ಪೌಲನು ಅದೇ ಪದವನ್ನು ಉಪಯೋಗಿಸಿದ್ದು ಅದು "ಪೋಲುಮಾಡುವದು" *(asōtia)* ಎಂದು ಈ ವಚನದಲ್ಲಿ ಭಾಷಾಂತರವಾಗಿದೆ. ಪೇತ್ರನಂತೆ, ಪೌಲನು ಪದವನ್ನು ಕುಡಿಕತವದ ಜೊತೆ ಸೇರಿಸಿದ್ದಾನೆ.

ಪೇತ್ರನ ಮಾತುಗಳು ಜಗತ್ತು ಸಾಮಾನ್ಯವಾಗಿ ಒಪ್ಪುವಂತ ಆರೋಪಿತ ನಡವಳಿಕೆಯ ತಮ್ಮ ಜೀವನದ ರೀತಿಯನ್ನು ಕ್ರೈಸ್ತರು ಜೀವಿಸಬೇಕೆಂದು ಪೇತ್ರನ ಮಾತುಗಳು ಕ್ರೈಸ್ತರಿಗೆ ಸವಾಲಾಗಿವೆ. ಜನರು ಕೆಳಮಟ್ಟಕ್ಕಿಳಿದಾಗ ಮತ್ತು ತಮ್ಮ ಸ್ವಂತ ಜೀವಿತವನ್ನು ಹಾಳುಮಾಡಿಕೊಂಡಾಗ ಮತ್ತು ಇತರರ ಜೀವಿತವನ್ನು ಮಧ್ಯ ಮಾದಕ ದ್ರವ್ಯ, ಲೈಂಗಿಕ ಅನೈತಿಕತೆ ಮತ್ತು ದೊಂಬಿಗಳಲ್ಲಿ ಇರಿಸಿದಾಗ ದೇವರು ಅಸಂತುಷ್ಟನಾಗುತ್ತಾನೆ. ದೇವರ ಮಕ್ಕಳು ಇಂಥ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲಾರರು. ಆಪಾದಿಸುವ ಜಗತ್ತಿಗೆ ಭಯಪಡುವವರು ಅದರ ವೈರತ್ವವನ್ನು ಆಮಂತ್ರಿಸಿಕೊಳ್ಳುತ್ತಾರೆ, “ಜನರೆಲ್ಲಾ ನಿಮ್ಮನ್ನು ಹೊಗಳಿದರೆ ನಿಮ್ಮ ಗತಿಯನ್ನು ಏನು ಹೇಳಲಿ ಅವರ ಪಿತೃಗಳು ಸುಳ್ಳು ಪ್ರವಾದಿಗಳನ್ನು ಹಾಗೆಯೇ ಹೊಗಳಿದರು” ಎಂಬ ಯೇಸುವಿನ ಮಾತುಗಳು ನೆನಪಿಡಲು ಯೋಗ್ಯವಾದವುಗಳು ಆಗಿವೆ (ಲೂಕ 6:26).

ವಿಶ್ವಾಸಿಗಳು ದೋಷಿತ ಜಗತ್ತಿನ ರೀತಿಯಲ್ಲಿ ಜೀವಿಸಿದಾಗ, ಜಗತ್ತು ತಮ್ಮನ್ನು ದೋಷಿಸುತ್ತದೆ ಎಂದು ಅವರು ಎದುರು ನೋಡುವವರಾಗಿರುತ್ತಾರೆ. **ನಿಮ್ಮನ್ನು ದೂಷಿಸುತ್ತಾರೆ** ಎಂಬ ಪದವು ಗ್ರೀಕ್‌ನಲ್ಲಿ ಇರುವ ಒಂದೇ ಪದವು ಆಗಿದೆ. ಬಲು ಅಕ್ಷರಸಹ ಇದು ಓದುವಂತೆ “ದೇವದೂಷಣೆ” *(blasphēmeō)* ಎಂದಾಗಿದೆ. ಈ ಅಪದದ ಅರ್ಥವು ಪವಿತ್ರವಾದದ್ದನ್ನು ಮತ್ತು ಪರಿಶುದ್ಧವಾದದ್ದನ್ನು ದೂಷಿಸುವದು ಎಂಬರ್ಥವಾಗಿದೆ. ಒಬ್ಬ ದೇವದೂಷಕನು ದೇವರ ಹೆಸರನ್ನು ನಿಂದಿಸಿದಾಗ ಆದರೆ ದೇವರು ತನ್ನ ಜನರೊಡನೆ ಬಲು ಐಕ್ಯದಿಂದಿರುವದರಿಂದ, ಅದು ಹೆಸರನ್ನು ನಿಂದಿಸುವದು ಆತನನ್ನು ನಿಂದಿಸಿದ ಹಾಗೆ ಆಗುತ್ತದೆ ಎಂದು ಅಪೊಸ್ತಲರ ಕೃತ್ಯಗಳು 9:4ರಲ್ಲಿ ವಾಕ್ಯವು ಪ್ರಕಟಪಡಿಸುವುದಾಗಿದೆ. ತಾರ್ಸದ ಸೌಲನು ಕ್ರೈಸ್ತರನ್ನು ಹಿಂಸಿಸುವವನಾಗಿದ್ದನು, ಆದರೆ ಯೇಸು ಆತನೊಡನೆ ದಮಸ್ಕದ ಮಾರ್ಗದಲ್ಲಿ ಮಾತನಾಡಿ ಸೌಲನೇ, ಸೌಲನೇ ಯಾಕೆ ನನ್ನನ್ನು ಹಿಂಸಿಸುತ್ತಿ? ಎಂದು ಕೇಳಿದನು (ಅಪೊಸ್ತಲರ ಕೃತ್ಯಗಳು 9:4). ಅನ್ಯಜನರು ದೇವಜನರನ್ನು ನಿಂದಿಸುವಾಗ ಅವರು ದೇವದೂಷಣೆಯಿಂದ ದೇವರನ್ನೇ ನಿಂದಿಸುತ್ತಿದ್ದಾರೆ ಎಂದು ಹೇಳುವಲ್ಲಿ ಹಿಂಜರಿಯಲಿಲ್ಲ.

**ವಚನ 5.** ಪೇತ್ರನು ಹೆಸರಿಸಿದ ಕ್ರೈಸ್ತರು ಅವಿಶ್ವಾಸಿ ನೆರೆಯವರಿಂದ ಪಡೆದಂತಹ ಅನ್ಯಾಯದ ನಿಂದನೆಯ ಬಗ್ಗೆ ತಮ್ಮಷ್ಟಕ್ಕೆ ತಾವು ಕಾಳಜಿತೆಗೆದುಕೊಳ್ಳುವ ಅವಶ್ಯಕತೆಯು ಇಲ್ಲ. ಪ್ರತಿಕಾರವು ಅವರ ವಿಶೇಷ ಅಧಿಕಾರವು ಅಲ್ಲ. “ಮುಯ್ಯಿ ತೀರಿಸುವದು ನನ್ನ ಕೆಲಸ. ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆ” (ರೋಮಾಪುರ 12:19). ಇದನ್ನು ಕರ್ತನಾದ ಯೇಸು ಕ್ರಿಸ್ತನಿಗೆ ಅವರು **ಉತ್ತರಕೊಡಬೇಕು.** ಆತನು ಪ್ರತಿಯೊಬ್ಬ ವ್ಯಕ್ತಿಯನ್ನು ನೀತಿವಂತಿಕೆಯಿಂದ **ನ್ಯಾಯತೀರಿಸುವವನು** ಮತ್ತು ಯೋಗ್ಯವಾದ ತೀರ್ಪನ್ನು ಕೊಡುವನು. ಯಾರು ದೇವರನ್ನು ವಿರೋಧಿಸುವರೋ ಮತ್ತು ಆತನ ಜನರನ್ನು ನಿಂದಿಸುವರೋ ಅವರು ತಾವು ಮಾಡಿದ್ದಕ್ಕೆ ಉತ್ತರ ಕೊಡಬೇಕು.

ಅಲ್ಲಿ ಹೊಸ ಒಡಂಬಡಿಕೆ ಯುದ್ದಕ್ಕೂ ಸಮಾಧಾನವಾಗುವ ಅಂಶವೊಂದು ಇದೆ: ದೇವರ ನ್ಯಾಯತೀರ್ಪು ಪ್ರಸ್ತುತ ಕಾಲಕ್ಕೆ ಒಂದು ಅಂತ್ಯವನ್ನು ತರುವುದಾಗಿದೆ. ಒಂದು ರೀತಿಯಲ್ಲಿ ದೇವರ ನ್ಯಾಯತೀರ್ಪು ಈಗಾಗಲೇ ಆರಂಭವಾಗಿದೆ. ಪಾಪದಲ್ಲಿ ಜೀವಿಸುವವರು ಈ ಜೀವಿತದಲ್ಲಿ ಪಾಪದ ಪರಿಣಾಮವನ್ನು ಅನುಭವಿಸುವವರಾಗಿರಬೇಕು. ಇನ್ನೂ ಈ ಜಗತ್ತಿನಲ್ಲಿ ನ್ಯಾಯವು ಯಾವಾಗಲೂ ಗೆಲ್ಲುವಂತದ್ದಾಗಿದೆ; ಇದು ಕರ್ತನ ದಿನದಲ್ಲಿ ಆಗುವುದಾಗಿದೆ. ಪೇತ್ರನಿಗೆ ನ್ಯಾಯತೀರ್ಪು ನಿಶ್ಚಿತವಾಗಿಯೂ “ಮಾನವನ ಉತ್ತರವನ್ನು ಒತ್ತಿ ಹೇಳುವದು ಮತ್ತು ಇಲ್ಲಿ ಮತ್ತು ಈಗ ಜೀವನ ಅಂಶವಾಗಿರುವ ಎಲ್ಲಾ ದೋಷದ ಮೇಲೆ ಅಂತಿಮ ವಿಜಯವನ್ನು ಸಾದಿಸುವದಕ್ಕೋಸ್ಕರ” ಬರುವದಾಗಿದೆ.[3]

ದೇವದೂಷಣೆ ಮಾಡುವವರು “ಉತ್ತರಕೊಡುವದು” ನಿಶ್ಚಿತವಾದದ್ದಾಗಿದೆ. ಅವರು ಯಾವ ಉತ್ತರವನ್ನು ಕೊಡಬೇಕು ಎನ್ನುವದು ಮತ್ತೊಂದು ವಿಷಯ. ಕರ್ತನು ಬೇಗನೇ ಮರಳುವನು

ಎಂದು ಪೇತ್ರನು ಎದುರುನೋಡುವವನಾಗಿದ್ದಾನೆ. ಯೇಸುವು ನ್ಯಾಯ ತೀರಿಸುವದಕ್ಕೆ ಭೂಮಿಗೆ ಮರಳಲು **ಸಿದ್ಧವಾಗಿದ್ದಾನೆ** (ನೋಡಿರಿ 4:7). ಅದು ಯಾವಾಗ ಸಂಭವಿಸುತ್ತದೆ ಎಂಬುದರ ಬಗ್ಗೆ ಅಪೊಸ್ತಲನು ಯಾವುದೇ ತಪ್ಪು ಹೇಳಿಕೆಯ ಪ್ರವಾದನೆಯನ್ನು ಕೊಡುತ್ತಿಲ್ಲ ಈ ಮೌನವಾಗಿರುವಿಕೆಯನ್ನು ಆಧುನಿಕ ಬೋಧಕರು ಚೆನ್ನಾಗಿ ಅನುಕರಿಸಬಹುದು. ಕರ್ತನನ್ನು ಎದುರುನೋಡುವದಕ್ಕಿಂತಲೂ ನಿರ್ದಿಷ್ಟವನ್ನು ಸಮಯವನ್ನು ತಿಳಿದಿರುವದು ಕ್ರೈಸ್ತರ ಜೀವಿತಕ್ಕೆ ಬಲು ಮಹತ್ವದ್ದಾಗಿದೆ. ಭೂಮಿಯ ಮೇಲಿನ ಜೀವಿತವು ಹೂವಿನ ಹಾಗೆ ಅರಳಿದಾಗ ಕರ್ತನು ಮರಳುವನು. ನೋಹನ ಸಮಯದಲ್ಲಿ ಜಲಪ್ರಳಯದಲ್ಲಿ ಜನರು ತಿನ್ನುವದರಲ್ಲಿ ಕುಡಿಯುವದರಲ್ಲಿ, ಮದುವೆ ಮಾಡುವದರಲ್ಲಿಯೂ ಮಾಡಿಕೊಳ್ಳುವದರಲ್ಲಿಯೂ ಇದ್ದಹಾಗೆ ಇದು ಇರುವುದಾಗಿದೆ (ಲೂಕ 17:27). ದೇವರು **ಬದುಕಿರುವವರಿಗೂ ಸತ್ತವರಿಗೂ** ಸತ್ತವರಿಗೂ ನ್ಯಾಯತೀರಿಸುವವನಾಗಿದ್ದಾನೆ. ಆತನು ಮರಳುವದಕ್ಕಿಂತಲೂ ಮೊದಲು ಸತ್ತವರು ಎಬ್ಬಿಸಲ್ಪಡುವದು ಮತ್ತು ಆತ್ಮ ದೇಹಿಗಳಲ್ಲಿ ಒಂದಾಗವರು (1 ಕೊರಿಂಥ 15:44). ಜೀವಿಸುವವರು ಆತನು ಮರಳಿದಾಗ ಪರಿವರ್ತಿತವಾಗುವರು (1 ಥೆಸಲೋನಿಕ 4:17) ಮತ್ತು ಆತ್ಮ ದೇಹಿಗಳಲ್ಲಿ ಒಂದಾಗುವರು. ಅನ್ಯಾಯವಾಗಿ ಹಿಂಸೆಗೊಳಗಾದವರು ಮತ್ತು ದೇವಜನರನ್ನು ಹಿಂಸಿಸುವರು "ಉತ್ತರಕೊಡಬೇಕಾಗುವದು."

**ವಚನ 6.** ವಿವಿಧ ವ್ಯಾಖ್ಯಾನಗಳನ್ನು ಹೊಂದಿರುವದರಿಂದ ಈ ವಚನವು ತೊಂದರೆಗೆ ಕಾರಣವಾಗಿದೆ. ಮುಂದಿನ ವ್ಯಾಖ್ಯೆಗಳು ಅವುಗಳನ್ನೆಲ್ಲಾ ಪರಿಗಣಿಸುವಲ್ಲಿ ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಬದಲಾಗಿ, ಅವುಗಳು ಬಲು ಸಾಧ್ಯತೆಯಿರುವ ಎರಡರ ಮೇಲೆ ಕೇಂದ್ರೀಕರಿಸುವವರಾಗಿದ್ದಾರೆ. ಮೊದಲ ಕುಣಿತ ಎಂದರೆ ಸಂದರ್ಭದಿಂದ ಉದ್ಭವಿಸಿದಂಥ ವಚನವನ್ನು ವ್ಯಾಖ್ಯಾನಿಸಿದ್ದು. ಕ್ರಿಸ್ತನು "ಬದುಕಿರುವವರಿಗೂ ಸತ್ತವರಿಗೂ ನ್ಯಾಯತೀರಿಸುವದಕ್ಕೆ ಸಿದ್ಧವಾಗಿರುವಾತನಾಗಿದ್ದಾನೆ" ಎಂದು ಅಪೊಸ್ತಲನು ಗಮನಿಸಿದ್ದಾನೆ (4:5). ಮುಂದೆ, ಪೇತ್ರನು ಮತ್ತು ಆತನ ಓದುಗರು ಇಬ್ಬರು ಕರ್ತನ ಶೀರ್ಘ ಬರೋಣವನ್ನು ಎದುರುನೋಡುತ್ತಿದ್ದಾರೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತಿದೆ (4:7).

ಥೆಸಲೋನಿಕದವರ ಮಧ್ಯದಲ್ಲಿ ಎದ್ದಂಥ ಇದೇ ತರದ ಪ್ರಶ್ನೆಗಳು ಪೇತ್ರನ ಓದುಗರಲ್ಲಿಯೂ ಇದ್ದವು (1 ಥೆಸಲೋನಿಕ 4:13-18). ಅವರಲ್ಲಿ ಕೆಲವರು ಸತ್ತುಹೋದರು, ಅದಾಗ್ಯೂ ಕರ್ತನು ಇನ್ನೂ ಮರಳಲಿಲ್ಲ. ಕರ್ತನ ಮರಳುವಿಕೆಗಿಂತಲೂ ಮೊದಲು ಸತ್ತವರು ಆತನ ಮರಳಿದಾಗ ಜೀವದಿಂದ ಇರುವವರು ಅನುಭವಿಸುವಂಥ ಇದೇ ರೀತಿ ರಕ್ಷಣೆಯನ್ನು ಹಂಚಿಕೊಳ್ಳಬಲ್ಲರೇ? ಸತ್ತವರಿಗಾಗಿನ ನ್ಯಾಯತೀರ್ಪಿಗೋಸ್ಕರ ಎದ್ದಂಥ ಪ್ರಶ್ನೆಯ ವಿಚಾರವಾಗಿದ್ದುದರಿಂದ, ದೇವರಿಗೆ ವಿರುದ್ಧವಾಗಿ ಜೀವಿಸಿ ಮರಣಹೊಂದಿದವರಿಗೆ ಕರ್ತನು ಉತ್ತರವನ್ನು ಕೇಳುತ್ತಾನೆ, ನಂಬಿಗಸ್ತರಾಗಿ ಜೀವಿಸಿ ಮರಣಹೊಂದಿದವರನ್ನು ರಕ್ಷಿಸುತ್ತಾನೆ ಎಂದು ಪೇತ್ರನು ತನ್ನ ಓದುಗರಿಗೆ ಭರವಸೆಯನ್ನು ಕೊಡುತ್ತಾನೆ. ಆತನು ಅವರಿಗೆ ಈ **ಉದ್ದೇಶಕ್ಕಾಗಿ** (ಯೇಸುವು ದುಷ್ಟರಿಗೆ ನ್ಯಾಯತೀರ್ಪನ್ನು ಮಾಡುತ್ತಾ ಅದೇ ಸಮಯದಲ್ಲಿ ಮುಕ್ತಿ ಹೊಂದಿದವರನ್ನು ರಕ್ಷಿಸುವ ಉದ್ದೇಶವನ್ನು ಹೊಂದಿರುವನು). **ಅವರಿಗೂ (ಸತ್ತವರಿಗೂ) ಸುವಾರ್ತೆಯು ತಿಳಿಸಲ್ಪಟ್ಟಿತು** ಎಂದು ಬರೆಯುವದರ ಮೂಲಕ ಭರವಸೆಯನ್ನು ಕೊಡುತ್ತಾನೆ.

ಯಾವುದೇ ನಿರ್ದಿಷ್ಟ ವ್ಯಕ್ತಿಗೆ ಬೋಧಿಸುವದು ಅಪೊಸ್ತಲನ ಮನದಲ್ಲಿ ಇತ್ತು ಎಂದು ಇಲ್ಲಿ ಕಂಡುಬರುವದಿಲ್ಲ. NASBಯು ಭೂತಕಾಲದ ಕರ್ಮಣಿ ಪ್ರಯೋಗದ ಕ್ರಿಯಾಪದವು *(euēngelisthē)* ಅವೈಯಕ್ತಿಕವಾಗಿ ಇರುವಂತೆ ತೆಗೆದುಕೊಂಡಿದ್ದು "ಸುವಾರ್ತೆಯು ಸಾರಲ್ಪಟ್ಟಿತು" ಎಂಬ ಭಾಷಾಂತರವನ್ನು ಅಂಗೀಕರಿಸಿದೆ, ಆದರೆ ಕೆಲವರು ಈ ಭಾಷಾಂತರದ ಬಗ್ಗೆ ತೃಪ್ತಿಗೊಳ್ಳರು. ಅವರು ಸಂದರ್ಭದ ಬಗೆಗೆ ಹೇಳುವವರು ಆಗಿದ್ದು ಮತ್ತು ಪೇತ್ರನ ಮನದಲ್ಲಿ ಇದ್ದ ಬೋಧನೆಯು ಯೇಸುವಿನ ಬೋಧನೆಯು ಆಗಿತ್ತು ಎಂದು

ವಾದಿಸುವವರಾಗಿದ್ದಾರೆ. 4:5ರಲ್ಲಿ, ತೀರ್ಪುಮಾಡುವವನು ಯೇಸು ಆಗಿದ್ದಾನೆ. ಮುಂದೆ 4:6ರಲ್ಲಿ (ವಾದವು ಹೀಗೆ ಮುಂದುವರೆಯುತ್ತದೆ) ಸುವಾರ್ತೆಯನ್ನು ಸಾರುವವನು ಯೇಸುವು ಆಗಿದ್ದಾನೆ. "ಆತ್ಮ ಸಂಬಂಧವಾಗಿ ದೇವರ ಜೀವನದಲ್ಲಿ ಪಾಲುಗಾರರಾಗುವಂತೆ ಅವರಿಗೂ (ಸತ್ತವರಿಗೂ) ಯೇಸುವಿನ ಮೂಲಕ ಸುವಾರ್ತೆಯು ತಿಳಿಸಲ್ಪಟ್ಟಿತು" ಎಂದು ವಚನದ ಅರ್ಥವನ್ನು ಅವರು ತೆಗೆದುಕೊಂಡಿದ್ದಾರೆ. ಈ ವಾದವಿವಾದಗಳು 3:19ರಲ್ಲಿನ ಪೇತ್ರನ ಒತ್ತಿ ಹೇಳಿಕೆಯು 4:6ರಲ್ಲಿ ವಿಸ್ತರಣೆಯಾಗಿವೆ. "ಆತನು ಸೆರೆಯಲ್ಲಿ ಆತ್ಮಗಳೆಡೆಗೆ ಹೋಗಿ ಸುವಾರ್ತೆಯನ್ನು ಸಾರಿದನು" ಎಂದು ಪೇತ್ರನು ಹೇಳುತ್ತಾನೆ ಎರಡು ಪರಿಚ್ಛೇದಗಳು ಶಿಲುಬೆಯ ಮೇಲಿನ ತನ್ನ ಮರಣದ ನಂತರ ಪುನರುತ್ಥಾನಕ್ಕಿಂತ ಮುಂಚೆ ಯೇಸು ಪಾತಾಳಲೋಕದಲ್ಲಿ ಸೆರೆಯಾಗಿರುವ ವ್ಯಕ್ತಿಗಳೆಡೆಗೆ ಮಾಡಿದ ಯಾತ್ರೆಯನ್ನು ಕೇಂದ್ರಿಕರಿಸುವದಕ್ಕೆ ಆಧಾರವನ್ನು ತೆಗೆದುಕೊಳ್ಳುವವು ಆಗಿದೆ.

3:19ರಲ್ಲಿನ ವಾಕ್ಯವು ಸೂಚಿಸುವಂತೆ, *Descensus* ಎಂದು ಕರೆಯಲ್ಪಡುವವರು ಕೊಡುವಂತಹ ಸಿದ್ಧಾಂತವು ಬೈಬಲಿನಲ್ಲಿ ಕಂಡುಬರುವಂಥ ಸ್ಪಷ್ಟವಾಗಿ ಸ್ಥಿತಗೊಂಡ ಸಿದ್ಧಾಂತಗಳ ಬಗ್ಗೆ ಯಾವ ವಿರೋಧವನ್ನೂ ಕೊಡುವದಿಲ್ಲ. ಹೇಗೋ, 4:6 ಹೇಳ ಬಹುದಾದ ಯೇಸುವಿನಿಂದ ಮಾಡಲ್ಪಟ್ಟ ಪ್ರಯಾಣವು ಆತನ ಅವತರಿಸುವಿಕೆಗಿಂತ ಮುಂಚೆ ನಂಬಿಗಸ್ತರಾಗಿ ಜೀವಿಸುವವರಿಗೆ ಸಾರುವಂತದ್ದನ್ನು ಮಾಡುವ ಉದ್ದೇಶವು ಪ್ರಶ್ನಾರ್ಥಕವಾಗಿದೆ. 3:19ರಲ್ಲಿ ಭಾಷಾಂತರವಾದ ಪದವಾದ "ಬೋಧಿಸಲ್ಪಟ್ಟ" ಅಥವಾ "ಸಾರಲ್ಪಟ್ಟ" *kērussō* ಎಂಬ ಪದವು 4:6ರಲ್ಲಿ "ಸುವಾರ್ತೆಯನ್ನು ಸಾರುವದು" ಎಂಬರ್ಥಕೊಡುವ *euangelizō* ಆಗಿರುವಾಗ ಈ ಪದವು ಗಮನಿಸಬೇಕಾದದ್ದು ಆಗಿದೆ. ಯೇಸುವು ಜಯವನ್ನು ಘೋಷಿಸುವದಕ್ಕಾಗಿ ಪಾತಾಳಲೋಕಕ್ಕೆ ಹೋಗುವದು ಊಹಿಸಲು ಅಸಾಧ್ಯವಾದದ್ದು ಆಗಿದೆ ಆದರೆ ಕರ್ತನು ಆ ಜಗತ್ತಿಗೆ ಹೋಗಿ ಪಾಪಿಗಳಿಗೆ ರಕ್ಷಣೆಯಲ್ಲಿ ಎರಡನೆಯ ಅವಕಾಶವನ್ನು ಕೊಡುವದಕ್ಕೆ ಹೋದದ್ದು ಊಹಿಸಲು ಸಾಧ್ಯವಾದದ್ದು ಆಗಿದೆ. ಸಾಮಾನ್ಯವಾಗಿ ಸುವಾರ್ತೆಯ ಬೋಧನೆಯು ರಕ್ಷಣೆಯನ್ನು ಕೊಡುವದನ್ನು ಸೂಚಿಸುವದೇ ಆಗಿದೆ. ಒಬ್ಬನ ನಂಬಿಕೆಯ ಪರಿಣಾಮವು ಮತ್ತು ಈ ಜಗತ್ತಿನಲ್ಲಿಯ ಜೀವಿತ ಇವುಗಳು ರಕ್ಷಣೆ ಎಂದು ತನ್ನ ಪತ್ರದಲ್ಲಿ ಎಲ್ಲಡೆಯೂ ಪೇತ್ರನು ಸ್ಪಷ್ಟಪಡಿಸಿದ್ದಾನೆ (1:9, 17).

ವಚನಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಹಾಯಿಸಲು ಕಾಲಗಳಲ್ಲಿನ ಬದಲಾವಣೆಯು ಮತ್ತು KJV, NASB, NIV ಗಳಲ್ಲಿ ಕಂಡು ಬಂದಿದೆ. ಹಿಂದಿನಕಾಲದಲ್ಲಿ "... ಸತ್ತವರಿಗೆ ಸುವಾರ್ತೆಯು ... ಸಾರಲ್ಪಟ್ಟಿತು." ಇನ್ನೊಂದು ಮಾತಿನಲ್ಲಿ, ಅವರು ಈಗ ಸತ್ತಿದ್ದಾರೆ ಆದರೆ ಸುವಾರ್ತೆಯು ಅವರಿಗೆ ಸುವಾರ್ತೆಯು ಸಾರಲ್ಪಟ್ಟಾಗ ಅವರು ಸತ್ತಿರಲಿಲ್ಲ. ಅವರು ಸತ್ತನಂತರ ವಿಮೋಚನೆಯು ಕೊಡಲ್ಪಟ್ಟಂಥ ಈ ಜಗತ್ತಿನಲ್ಲಿ ಕ್ರಿಸ್ತನಿಗೆ ಬೆನ್ನು ತಿರುಗಿಸಿದವರಿಗೆ ಹೊಸ ಒಡಂಬಡಿಕೆಯು ಯಾವ ಬೋಧನೆಯನ್ನೂ ಕೊಟ್ಟಿಲ್ಲ. "ಒಂದೇ ಸಾರಿ ಸಾಯುವದು ಆಮೇಲೆ ನ್ಯಾಯತೀರ್ಪು ಮನುಷ್ಯನಿಗೆ ನೇಮಕವಾಗಿದೆ" (ಇಬ್ರಿಯ 9:27) ಎಂದು ಇಬ್ರಿಯ ಪತ್ರಿಕೆಯ ಲೇಖಕನು ಇದನ್ನು ಸ್ಪಷ್ಟವಾಗಿ ಮಾಡಿದ್ದಾನೆ. NRSVಯ ಭಾಷಾಂತರದ ಹೆಚ್ಚು ಅಕ್ಷರಸಹವಾದದ್ದನ್ನು ನಾವು ತೆಗೆದುಕೊಂಡಿದ್ದಾದರೆ, "ಈ ಕಾರಣಕ್ಕೋಸ್ಕರ ಸುವಾರ್ತೆಯು ಸತ್ತವರಿಗೂ ಕೂಡಾ ಘೋಷಿಸಲ್ಪಟ್ಟಿತು." ಎಂಬ ಬೋಧನೆಯು ಈಗ ಸತ್ತವರಿಗೆ ಮಾಡಲ್ಪಟ್ಟಿತು, ಹೊರತು ಸುವಾರ್ತೆಯು ಘೋಷಿಸಲ್ಪಟ್ಟ ನಂತರ ಸತ್ತವರಿಗೆ ಅಲ್ಲ ಎಂಬ ಈ ಸೂಚನೆಯು ಉಳಿದುಕೊಂಡಿದೆ. ಯೇಸುವು ಕ್ರೂಜಿಸುವಿಕೆ ಮತ್ತು ಪುನರುತ್ಥಾನದ ಮಧ್ಯ ಮಧ್ಯಂತರದ ಸಮಯವನ್ನು ಅಲ್ಲಿ ತೆಗೆದುಕೊಂಡಿದ್ದ ಬಗೆಗಿನ ಪ್ರಶ್ನೆಗಳಿಗೆ ಪೇತ್ರನು ತನ್ನ ಓದುಗರಿಗೆ ಉತ್ತರವನ್ನು ಬರೆಯುತ್ತಿಲ್ಲ. ಕರ್ತನು ಪ್ರಕಟವಾದಾಗ ಅವರು **ಜೀವದಲ್ಲಿ ಪಾಲುಗಾರರಾಗುವಂತೆ** ಎಂಬ ಭರವಸೆಯನ್ನು ಅವರಿಗೆ ಕೊಡುತ್ತಿದ್ದಾನೆ.

ಪೇತ್ರನ ಓದುಗರು ಶಿಲುಬೆಯ ಸಂದೇಶವನ್ನು ಕೇಳಿದಂತೆಯೇ ಅವರು

ಆಶೀರ್ವದಿಸಲ್ಪಟ್ಟರು. ಆತನು "ಸುವಾರ್ತೆ" ಎಂಬ ಪದವನ್ನು ಕ್ರಿಸ್ತನ ಮರಣ, ಹೂಣುವಿಕೆ ಮತ್ತು ಪುನರುತ್ಥಾನ ಇವುಗಳಿಗೆ ಮಾತ್ರ ಸೀಮಿತವಾಗಿ ಇರಿಸಿಲ್ಲ. ಸುವಾರ್ತೆಯು ದೇವರ ಸಂದೇಶವಾಗಿದ್ದು ಜನರನ್ನು ಬಿಡಿಸಲು ದೇವರು ತನ್ನ ಮಗನನ್ನು ತಾನೇ ಕಳಿಸುವ ವಾಗ್ದಾನದ ಪರಿಪೂರ್ಣತೆಯು ಆಗಿದೆ. ಯೇಸುವು ಒಳ್ಳೆಯ ವಾರ್ತೆಯೂ, ಸುವಾರ್ತೆಯೂ ಆಗಿದ್ದಾನೆ ಎಂದು ಸಾರುವಿಕೆಯು ಮಾತನಾಡುವದಾಗಿದೆ. "ಸತ್ತವರಿಗೂ ... ಸುವಾರ್ತೆಯು ಸಾರಲ್ಪಟ್ಟಿತು" ಎಂಬುದು. "... ಆತನು ಸತ್ತಂತವರಿಗೂ ಕೂಡಾ ಸುವಾರ್ತೆಯನ್ನು ಸಾರಿದನು" ಎಂದು ಓದಿದ್ದಾದರೆ ಅದು ಸುಧಾರಿತ ಭಾಷಾಂತರವಾಗಿದೆ. ಅಪೊಸ್ತಲನು ಸೂಚಿಸಿದಂಥ "ಸತ್ತವರು" ಎಂದರೆ ಯೇಸುವಿನಿಂದ ಅವರಿಗೆ ಸುವಾರ್ತೆಯನ್ನು ಸಾರಲ್ಪಟ್ಟಾಗ ಸತ್ತಂತವರಲ್ಲ, ಆದರೆ ಅವರು ಕರ್ತನ ತೀರ್ಪು ಮರಳುವ ಮುನ್ನ ಸತ್ತಂತವರಾಗಿದ್ದಾರೆ. ಅಲ್ಲಿ ಭರವಸೆಗೆ ಅವಶ್ಯಕತೆಯು ಇರುವುದಾಗಿದೆ. ಪೇತ್ರನ ಮನದಲ್ಲಿನ "ಸತ್ತವರು" ವಿಶೇಷವಾಗಿ ಸತ್ತಂತಹ ಕ್ರೈಸ್ತರು ಆಗಿದ್ದಾರೆ. 4:6ರಲ್ಲಿ ಎಲ್ಲವೂ ವಿಶ್ವಾಸಿಗಳಿರುವ ಭರವಸೆಯು ಆಗಿದೆ.

ಮೊದಲ ಪೇತ್ರ 4:6 ಮುಂದಿನ ರೀತಿಯಲ್ಲಿ ಕೆಲ ವಿಚಾರಗಳಲ್ಲಿ 3:19ಕ್ಕೆ ಸಂಬಂಧಿಸಿದೆ: (1) ಯೇಸು ನೋಹನ ಸಮಯದಲ್ಲಿ ಸತ್ತ ವ್ಯಕ್ತಿಗಳಿಗೆ 3:19ರಲ್ಲಿ ಬೋಧಿಸಿದನು ಎಂದು ಅರ್ಥವಾಗಿದ್ದಾದರೆ, ಈ ವಚನವು ವಿವರಣೆಯನ್ನು ವಿಸ್ತರಿಸುತ್ತದೆ. ಈ ಸಂಗತಿಯಲ್ಲಿ ಹೊಸ ಒಡಂಬಡಿಕೆಯಲ್ಲಿ ಇರುವಂಥ ಪ್ರವಾದಿಗಳ ಮೂಲಕ ಮತ್ತು ಪ್ರೇರೇಪಿತ ಮನುಷ್ಯರಲ್ಲ ಬೋಧನೆಗಳನ್ನು ಸಾರಲ್ಪಡುವಿಕೆಯನ್ನು ಅಂದರೆ ಕ್ರಿಸ್ತನು ಅವರಿಗೆ ಬೋಧಿಸಿದ "ಸುವಾರ್ತೆ"ಯೆಂದು ನಾವು ಅರಿತುಕೊಳ್ಳುವವರಾಗಿರುತ್ತೇವೆ. ಈ ವಚನದಲ್ಲಿ ಯೇಸುವಿನಿಂದ "ಸಾರಿಸಿಕೊಂಡವರು" (3:19). "ಸತ್ತಂತವರು ಆಗಿದ್ದರು." ಪೇತ್ರನು ತನ್ನ ಓದುಗರು ಅರ್ಥಮಾಡಿಕೊಳ್ಳಲೆಂದು ಸೂಚಿಸಿದ ವಚನದ ಈ ವ್ಯಾಖ್ಯೆಯನ್ನು ನಾವು ನಂಬುವವರಾಗಿದ್ದೇವೆ. (2) ಯೇಸು ತನ್ನ ಕ್ರೂಜಿಸುವಿಕೆ ಮತ್ತು ಪುನರುತ್ಥಾನದ ಮಧ್ಯ ಪಾತಾಳ ಲೋಕಕ್ಕೆ ಹೋಗಿದ್ದನು ಎಂದು 3:19ದ ಅರ್ಥವು ಆಗಿದ್ದಾದರೆ, 4:6ರ ಅರ್ಥವು ಹಿಂದೆ ನಂಬಿಗಸ್ತರಾಗಿ ಜೀವಿಸಿದವರಿಗೆ ಯೇಸುವು ಶಿಲುಬೆಯ ಮೇಲಿನ ತನ್ನ ವಿಜಯವನ್ನು ಸಾರಿದನು ಎಂದಾಗಿದೆ. ಹಿಂದೆ ಸತ್ತವರು ಕ್ರಿಸ್ತನಲ್ಲಿನ ನಂಬಿಕೆಯ ಮೂಲಕ ಮಾತ್ರ ರಕ್ಷಿಸಲ್ಪಡುವರು. ಸತ್ತವರೆಲ್ಲ ಬೋಧನೆಯನ್ನು ಕೇಳಿದ್ದಾರೆ ಎಂದಲ್ಲ ಮತ್ತು ಇದರಿಂದ ರಕ್ಷಿಸಲ್ಪಡುವರು ಅಥವಾ ಅವಿಧೇಯರಾಗಿದ್ದರೂ ಕೂಡಾ ಎರಡನೆಯ ಅವಕಾಶವು ಕೊಡಲ್ಪಡುವದು ಎಂದು ಈ ಬೋಧನೆಯು ಅಲ್ಲ. ಬದಲಾಗಿ ಕ್ರಿಸ್ತನು ಮರಣಿಸುವದಕ್ಕೆ ಮುನ್ನ ನಂಬಿಗಸ್ತರಾಗಿ ಜೀವಿಸಿದವರು, ಕೇಳುವದಕ್ಕೂ ನಂಬುವದಕ್ಕೂ ಮತ್ತು ರಕ್ಷಣೆ ಹೊಂದುವದಕ್ಕೂ ಸಮರ್ಥರಾಗಿರುತ್ತಾರೆ. ತಮ್ಮ ಇಹಲೋಕದ ಜೀವಿತಾವಧಿಯಲ್ಲಿ ನಂಬಿಗಸ್ತರಾಗಿ ಇದ್ದು ತಮ್ಮ ಇಹಲೋಕದ ಜೀವಿತಾವಧಿಯಲ್ಲಿ ನಂಬಿಗಸ್ತರಾಗಿ ಇದ್ದು ತಮ್ಮ ಇಹಲೋಕದ ಜೀವಿತಾವದಿಯಲ್ಲು ಅಪನಂಬಿಗಸ್ತರು ಮತ್ತು ಅವಿಧೇಯರೂ ಆಗಿರುವವರಿಗೆ ಮರಣದ ತೀರ್ಪು ಬರುವಾಗ ಸತ್ತವರಿಗೆ ಇದೇ ಸಾರುವಿಕೆಯು ಜೀವಿಸುವಿಕೆ ನ್ಯಾಯತೀರ್ಪಿನ ಫಲವಾಗಿರುವದು.

ಸತ್ತವರಿಗೆ, ಯೇಸುವು ಬೋಧಿಸಿದಾಗ ಅವರು **ಮನುಷ್ಯ ಜಾತಿಗೆ ಬರುವ ಮರಣವೆಂಬ ತೀರ್ಪನ್ನು ಶರೀರಗಳಾಗಿದ್ದಾಗ ಹೊಂದಿದ್ದರು,** "ಆತ್ಮ ಸಂಬಂಧವಾಗಿ ದೇವರ ಜೀವದಲ್ಲಿ ಪಾಲುಗಾರರಾದರು." "ಮನುಷ್ಯ ಜಾತಿಗೆ ಬರುವ ಮರಣವೆಂಬ ತೀರ್ಪನ್ನು ಶರೀರಗಳಾಗಿದ್ದಾಗ ಹೊಂದಿದರು" ಇದರ ಅರ್ಥವು ಏನು? NASBಯು "ಮನುಷ್ಯ ಜಾತಿಗೆ" *(kata anthrōpous)* ಎಂಬ ಪದವನ್ನು "ಮನುಷ್ಯನ ರೀತಿಗೆ ತಕ್ಕತೆ" ಅಥವಾ "ಮನುಷ್ಯನ ರೀತಿಯಲ್ಲಿ" ಎಂಬರ್ಥದಲ್ಲಿ ತೆಗೆದುಕೊಳ್ಳುವದಾಗಿದೆ. ತಾವು ಮನುಷ್ಯರಂತೆ ಮರಣದ ಅನುಭವವನ್ನು ಹೊಂದಿದ್ದಾಗ್ಯೂ ಕೂಡಾ ಕ್ರಿಸ್ತನು ತನ್ನ ಪ್ರಕಟಿಸಿಕೊಳ್ಳುವಿಕೆಯ

ದಿನದಲ್ಲಿ ಬಿಡುಗಡೆಗೊಳಿಸುವನು ಎಂದು ವಿಶ್ವಾಸಿಗಳಿಗೆ ಇರುವ ಭರವಸೆಯು ಇದಾಗಿದೆ. NRSVಯು ಸ್ವಲ್ಪ ಅಕಲ್ಷೀಯವಾಗಿದ್ದಾಗಲೂ ಕೂಡಾ ಇದು ಅರ್ಥವನ್ನು ಯಥಾವತ್ತಾಗಿ ಹಿಡಿದುಕೊಳ್ಳುತ್ತದೆ: **"ಸತ್ತಿರುವವರು ಮನುಷ್ಯ ಜಾತಿಗೆ ಬರುವ ಮರಣವೆಂಬ ತೀರ್ಪನ್ನು ಶರೀರಗಳಾಗಿದ್ದಾಗ ಹೊಂದಿದ್ದರು; ಅವರು ಆತ್ಮಸಂಬಂಧವಾಗಿ ದೇವರ ಜೀವದಲ್ಲಿ ಪಾಲುಗಾರರಾಗುವಂತೆ..."** ಕ್ರೈಸ್ತರು "ಮನುಷ್ಯರಂತೆ ನ್ಯಾಯತೀರ್ಪನ್ನು ಹೊಂದುವರು" ಅಂದರೆ ಎಲ್ಲಾ ಮನುಷ್ಯರಂತೆ, ಮರಣವನ್ನು ಹೊಂದುವರು. ಪಾಪವು ಅವಿಶ್ವಾಸಿಗಳಂತೆ ವಿಶ್ವಾಸಿಗಳ ಬಾಹ್ಯ ಜೀವಿತದ ಮೇಲೆ ಬೀರುವದು ಎಂದು ಅದೇ ರೀತಿಯ ಪ್ರತಿಪಾದನೆಯನ್ನು ಮಾಡುವರು. ವಿಶ್ವಾಸಿಗೆ, ಹೇಗೋ, ಅದು ಕಥೆಯ ಅಂತ್ಯವಲ್ಲ. ಯಾಕಂದರೆ ದೇವರ ಚಿತ್ತಾನುಸಾರ "ಅವರು ಆತ್ಮದಲ್ಲಿ ಜೀವಿಸುವಾಗ" ಕ್ರಿಸ್ತನು ತೀರ್ಪುಮಾಡುವನು.

## ಅಂತ್ಯದ ಸಾಮಿಪ್ಯ (4:7-11)

**[7]ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ; ಆದುದರಿಂದ ನೀವು ಜಿತೇಂದ್ರಿಯರಾಗಿಯೂ, ಪ್ರಾರ್ಥನೆಗೆ ಸಿದ್ಧವಾಗಿರುವಂತೆ ಸ್ವಸ್ಥಚಿತ್ತರಾಗಿಯೂ ಇರ್ರಿ. [8]ಮೊಟ್ಟಮೊದಲು ನಿಮ್ಮನಿಮ್ಮೊಳಗೆ ಯಥಾರ್ಥವಾದ ಪ್ರೀತಿಯಿರಲಿ; ಪ್ರೀತಿಯು ಬಹು ಪಾಪಗಳನ್ನು ಮುಚ್ಚುತ್ತದೆ. [9]ಗುಣಗುಟ್ಟದೆ ಒಬ್ಬರಿಗೊಬ್ಬರು ಅಥಿತಿಸತ್ಕಾರ ಮಾಡಿರಿ. [10]ನೀವೆಲ್ಲರು ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೇ ಮನೆವಾರ್ತೆಯರಾಗಿದ್ದು ಪ್ರತಿಯೊಬ್ಬನು ತಾನು ಹೊಂದಿದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ. [11]ಒಬ್ಬನು ಬೋಧಿಸುವವನಾದರೆ ದೈವೋಕ್ತಿಗಳನ್ನು ನುಡಿಯುವವನಾಗಿ ಬೋಧಿಸಲಿ. ಒಬ್ಬನು ಸಭೆಯ ಸೇವೆ ಮಾಡುವವನಾದರೆ ದೇವರಿಂದ ಶಕ್ತಿಯನ್ನು ಹೊಂದಿದವನಾಗಿ ಮಾಡಲಿ. ಇದರಿಂದ ಎಲ್ಲಾದರಲ್ಲಿ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ ಉಂಟಾಗುವದು. ಯೇಸು ಕ್ರಿಸ್ತನಿಗೆ ಆಧಿಪತ್ಯವೂ ಘನವೂ ಯುಗಯುಗಾಂತರಗಳಲ್ಲಿಯೂ ಇರುವವು. ಆಮೆನ್.**

ಆತನ ಓದುಗರ ಹಿಂದಿನದನ್ನು ಲಕ್ಷೀಕರಿಸಿ ಪಾಪದಿಂದ ಹಿಂದಕ್ಕೆ ಬರಬೇಕೆಂದು ಪೇತ್ರನು ತನ್ನ ಅವರಿಗೆ ಒತ್ತಾಯಿಸುವವನಾಗಿದ್ದಾನೆ. ಅವರನ್ನು ಹಿಂಸಿಸುವವರು ಜೀವಿ ಸುವವರಿಗೂ ಸತ್ತವರಿಗೂ ನ್ಯಾಯತೀರಿಸುವಾತನಿಗೆ ಉತ್ತರ ಕೊಡಬೇಕು ಎಂದು ಅವರಿಗೆ ನೆನಪಿಸುವವನಾಗಿದ್ದಾನೆ. ಅದಕ್ಕಿಂತಲೂ ಹೆಚ್ಚಾಗಿ, ಅವರು ಮರಣಕ್ಕೆ ಒಪ್ಪಿಸಲ್ಪಟ್ಟಾಗಲೂ ಕೂಡಾ, ಆತ್ಮದಲ್ಲಿ ಜೀವಿಸುವಂತೆ ಯೇಸುವು ಮಾಡುವನು ಎಂದು ಆತನು ಭರವಸೆಯನ್ನು ಕೊಡುವನು. ಅವರ ನಿಯೋಗಕ್ಕಾಗಿನ ತ್ವರತೆಯನ್ನು ನೆನಪಿಸುವಂತಹ ಸಮಯವು ಇದಾಗಿದೆ. ಕ್ರಿಸ್ತನು ಪ್ರಕಟಿಸಿಕೊಳ್ಳುವ ಸಮಯವು ಹತ್ತಿರವಾಗಿದೆ ಆದರೆ ಅದೇ ಸಮಯದಲ್ಲಿ ಅವರು ದೇವರ ರಾಜ್ಯದ ಯೋಗ್ಯವಾದ ಮಾರ್ಗದಲ್ಲಿ ಜೀವಿಸುವವರಾಗಿದ್ದಾರೆ. ಜೀವಿತವು ಸೇವೆಯ ಮೂಲಕ ಲಕ್ಷಿಕರಿಸಲ್ಪಟ್ಟಿದ್ದು, ಒಬ್ಬರನ್ನೊಬ್ಬರು ಪ್ರೀತಿಸುವದು, ಮತ್ತು ದೇವರನ್ನು ಮಹಿಮೆಪಡಿಸುವದು ಆಗಿದೆ.

**ವಚನ 7.** ಕರ್ತನು ಅಸ್ಪಷ್ಟವಾಗಿ ಕಾಣಿಸಿಕೊಂಡಲ್ಲಿನ, ಅನಿಶ್ಚಿತ ಭವಿಷ್ಯದ ನಿರ್ಧಾರ ಮತ್ತು ಆತನ ಮರಳುವಿಕೆ ಸನ್ನಿಹಿತದ ನಿರ್ಧಾರದ ಮಧ್ಯ ಗಣನೀಯವಾದ ಭಿನ್ನತೆಯು ಅಲ್ಲಿ ಇದೆ. ಆದಿ ಕ್ರೈಸ್ತರಿಗಾಗಿ, ಕರ್ತನ ಮರಳುವಿಕೆಯು ಹತ್ತಿರದಲ್ಲಿ ಇರುವದು ಆಗಿತ್ತು (1 ಕೊರಿಂಥ 7:29; ಫಿಲಿಪ್ಪಿ 4:5; ಯಾಕೋಬ 5:8). **ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ.** ವಚನಗಳನ್ನು ಆತ್ಮೀಕರಿಸುವ ಪ್ರಯತ್ನದಲ್ಲಿ ನಾವು ಅವಕ್ಕೆ ಅನ್ಯಾಯವನ್ನು ಮಾಡುತ್ತೇವೆ. ಇದು ವಿಶ್ವಾಸಿಯ ವೈಯಕ್ತಿಕ ಮರಣದ ಹತ್ತಿರವಾಗುವಿಕೆಯ ಆಧಾರವು ಇದಲ್ಲ. "ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ" ಮತ್ತು "ಒಬ್ಬ ವ್ಯಕ್ತಿಯು ಯಾವುದೇ ಕ್ಷಣದಲ್ಲಿ ಸಾಯಬಹುದು" ಎಂದು ಹೇಳುವದು ಭಿನ್ನವಾದ ಹೇಳಿಕೆಗಳು ಆಗಿವೆ. "ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ"

ಎಂದು ಜನರು ನಂಬುವಾಗ ಅವರು ವಿಭಿನ್ನವಾಗಿ ಜೀವಿಸುತ್ತಾರೆ.

ಪೇತ್ರನು ಮತ್ತು ಅವನ ಓದುಗರು ದೇವರು ಸದ್ದುಮಾಡಲಿರುವ ವಿಜಯೋತ್ಸವದೆಡೆ ನೋಡುವವರಾಗಿದ್ದರು (1 ಥೆಸಲೋನಿಕ 4:16). ಕರ್ತನು ಕಳ್ಳನ ಹಾಗೆ ರಾತ್ರಿವೇಳೆಯಲ್ಲಿ ಕಾಣಿಸಿಕೊಳ್ಳುವ ಸಮಯವು (1 ಥೆಸಲೋನಿಕ 5:2; 2 ಪೇತ್ರ 3:10) "ಹತ್ತಿರವಾಗಿದೆ" ಎಂದು ಅವರು ನಂಬುವವರಾಗಿದ್ದಾರೆ. ಕೆಲ ಸಮಕಾಲೀನ ಕ್ರೈಸ್ತರು ಈ ವಿಚಾರದೊಡನೆ ಸಮಂಜಸವಾಗಿಲ್ಲ ಯಾಕೆಂದರೆ ಪೇತ್ರನು ತಪ್ಪಾಗಿದ್ದಾನೆ ಎಂದು ಇಲ್ಲಿ ಕಂಡುಬರುತ್ತದೆ. ಎರಡು ಸಾವಿರ ವರ್ಷಗಳು ಸಂದುಹೋದವು ಮತ್ತು ಆತನು ಇನ್ನೂ ಬಂದಿಲ್ಲ. ಅಂಥ ಸಂಗತಿಗಳು ಈ ಪರಿಚ್ಛೇದದ ಅಂಶವನ್ನು ತಪ್ಪಿಸುವವು ಆಗಿವೆ. ಕ್ರೈಸ್ತರು ಪ್ರತಿಸಮಯದಲ್ಲಿ ನಿರೀಕ್ಷೆಯಿಂದ ಜೀವಿಸುವವರಾಗಿರುತ್ತಾರೆ. John Murray ರವರು ಚೆನ್ನಾಗಿ ವ್ಯಕ್ತಪಡಿಸಿ eschatological ಮುನ್ನೋಟವು ಯಾವಾಗಲೂ ನಮ್ಮ ಭಾವನೆಯನ್ನು ಲಕ್ಷೀಕರಿಸುವದು ಆಗಿದ್ದು ಲೌಕೀಕ ಸಂಗತಿಗಳು ಮತ್ತು ತಾತ್ಕಾಲಿಕವಾದವುಗಳು ಆಗಿವೆ" ಎಂದು ಹೇಳಿದ್ದಾರೆ.[4] "ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ನಮ್ಮ ಮಹಾದೇವರ ಮತ್ತು ರಕ್ಷಕನಾದ ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ" ಇರುವವರು (ತೀತ 2:13). ಪರಿಶುದ್ಧ ಜೀವಿತವನ್ನು ಜೀವಿಸಲು ಪ್ರೇರೇಪಿತರಾಗಿರುತ್ತಾರೆ. ಆತನ ಬರುವಿಕೆಯ ಹತ್ತಿರವಾಗಿದ್ದರ ಬಗೆಗೆ ಯಾವುದೇ ನಿರ್ಧಾರವಿಲ್ಲದೆ ವಿಶ್ವಾಸಿಗಳು ನಿರೀಕ್ಷೆಯಿಂದ ಹೇಗೆ ಜೀವಿಸಬೇಕು? "... ಬೇಗ ಬರುತ್ತೇನೆ ಎಂದು ಹೇಳುತ್ತಾನೆ ... ಕರ್ತನಾದ ಯೇಸುವೇ ಬಾ" (ಪ್ರಕಟನೆ 22:20).

ಮತ್ತಾಯ 24; 25ರಲ್ಲಿ "ಎಣ್ಣೆಮರಗಳ ಗುಡ್ಡ ಬೋಧನೆಯಲ್ಲಿ" ಯೇಸು ತನ್ನ ಮರಳುವಿಕೆಯ ಬಗೆಗೆ ತನ್ನ ಶಿಷ್ಯರೊಂದಿಗೆ ಮಾತನಾಡಿದ್ದಾನೆ. ಎಚ್ಚರಿಕೆಯ ನಂತರ ನಿಖರವಾದ ಸಮಯದ ಮೇಲಿನ ಹೂಡಿಕೆಯ ಉಪಯೋಗಕ್ಕೆ ಬಾರದು ಆಗಿದ್ದು (ಮತ್ತಾಯ 24:26), ಆತನು ಸಾಮ್ಯಗಳ ಸರಣಿಯನ್ನೇ ಕೊಟ್ಟಿದ್ದಾನೆ. ಅದರಲ್ಲಿ ಒಂದು ಒಬ್ಬ ಸೇವಕನ ಒಡೆಯನು ಆಕಸ್ಮಿಕವಾಗಿ ಮರಳಿದವನಾಗಿದ್ದನು. ಸಾಮ್ಯದಲ್ಲಿನ ಒಡೆಯನ ಮರಳುವಿಕೆಯನ್ನು ತೆಗೆದುಕೊಳ್ಳುವಿಕೆಯು ಕ್ರಿಸ್ತನ ಮರಳುವಿಕೆಯ ವಿವರಣೆಯು ಆಗಿದ್ದು ಕೆಲವರು ಬಯಸುವದಕ್ಕಿಂತ ಬಲು ಬೇಗನೇ ಇಹಲೋಕದ ವಿಷಯಗಳನ್ನು ಅಂತ್ಯಮಾಡಬಹುದು ಎಂದು ಕರ್ತನು ಎಚ್ಚರಿಸುತ್ತಿದ್ದಾನೆ (ಮತ್ತಾಯ 24:45-51). ಇನ್ನೊಂದೆಡೆಯಲ್ಲಿ, ಆತನು ತನ್ನ ಬರುವಿಕೆಯಲ್ಲಿ ತಡವನ್ನು ಮಾಡಬಹುದು.

ಮುಂದಿನ ಸಾಮ್ಯದಲ್ಲಿ ಒಂದು ಐದುಜನ ಬುದ್ಧಿವಂತ ಕನ್ನಿಕೆಯರು ಮತ್ತು ಬುದ್ಧಿಯಿಲ್ಲದ ಕನ್ನಿಕೆಯರ ಸಾಮ್ಯವಾಗಿದೆ. ಮದಲಿಂಗನು ಅಲ್ಲಿ ಬರುವಿಕೆಯ ಸಮಯವು ಕ್ರಿಸ್ತನ ಮರಳುವಿಕೆಯ ಸಮಯದ ವಿವರಣೆಯಂತೆ ಕಂಡುಬರುವದು. ಹಿಂದಿನ ಸಾಮ್ಯಕ್ಕಿಂತಲೂ, ಕರ್ತನ ಬರೋಣವು ಕೆಲವರು ಬಯಸುವದಕ್ಕಿಂತಲೂ ಮೊದಲೇ ಕಾಣಬಹುದು ಎಂದು ಇದು ಬೋಧಿಸುವುದಾಗಿದೆ (ಮತ್ತಾಯ 25:1-13). ಆತನು ಹೊಂದಿದ ಹಿಂದಿನದಕ್ಕಿಂತಲೂ ನಂತರದ ಸಾಮ್ಯವನ್ನು ಯೇಸು ಪರಿಗಣಿಸುವವನಾಗಿದ್ದು: "ಆ ದಿನವಾದರೂ ಗಳಿಗೆಯಾದರು ನಿಮಗೆ ಗೊತ್ತಿಲ್ಲವಾದಲಿಂದ ಎಚ್ಚರವಾಗಿರ್ರಿ" ಎಂದು ಹೇಳಿದ್ದಾನೆ (ಮತ್ತಾಯ 25:13). ಸನ್ನಿಹಿತೆಯ ಮತ್ತು ದೇವರ ನ್ಯಾಯತೀರ್ಪಿನ ತೊಡವಗುವಿಕೆ ಇವುಗಳ ಮಧ್ಯದ ಗಲಿಬಿಲಿಯ ಸತ್ಯವೇದದ್ದಕ್ಕೂ ಸೂಕ್ಷವಾಗಿ ಸರಿದೂಗಿಸಿಕೊಂಡು ಬಂದಿದೆ. ಕರ್ತನ ಬರುವಿಕೆಯ ದಿನವು ಹತ್ತಿರವಾಗಿದೆ (ಯೆಶಾಯ 56:1; ಚೆಫನ್ಯ 1:12; ಯೋವೇಲನು 3:14), ನ್ಯಾಯತೀರ್ಪು ದೇವರ ಆಯ್ದುಕೊಳ್ಳುವಿಕೆಯ ನಿಶ್ಚಿತ ಭವಿಷ್ಯವನ್ನು ಹಿಂದಕ್ಕೆ ಸರಿಸುವದಾಗಿದೆ. ಯೇಸುವಿನ ಮಾರ್ಗದರ್ಶನವನ್ನು ಅನುಸರಿಸುತ್ತಾ "ಎಲ್ಲಾ ಸಂಗತಿಗಳ ಅಂತ್ಯವು" ಬರುವದು ಎಂದು ಹೇಳುವಾಗ ಪೇತ್ರನು ಕಲ್ಪಿಸಿಕೊಳ್ಳುವಿಕೆಯನ್ನು ಕೊಡುತ್ತಿಲ್ಲ. ಆತನ ಮರಳುವಿಕೆಯನ್ನು ಎದುರುನೋಡುತ್ತಾ ಕ್ರೈಸ್ತರು ನಿರೀಕ್ಷೆಯಿಂದ

ಜೀವಿಸುವವರಾಗಿರಬೇಕು ಎಂದು ಮಾತ್ರ ಆತನು ಹೇಳಿದ್ದಾನೆ. ಸಭೆಯ ಸಿದ್ಧಾಂತವು ಕರ್ತನು ಮರಳಿಬರುವನು ಎಂಬುದಲ್ಲ ಕರ್ತನು ಬೇಗನೇ ಬರುವನು ಎಂದಾಗಿದೆ. ಕ್ರೈಸ್ತರು ಅಂತ್ಯದ ದಿನಗಳಲ್ಲಿ ಜೀವಿಸುತ್ತಿದ್ದಾರೆ. ಸಮಯಾನುಸಾರ, ಅವರು ಯೇಸುವನ್ನು ನೋಡಲು ಬಯಸುವವರಾಗಿದ್ದಾರೆ. ಇದು ಹೀಗಿರುವಾಗ, ಅವರು ಒಳ್ಳೇಯತನದ ಮತ್ತು ಕರುಣೆಯ ಪರಿಶುದ್ಧ ಜೀವಿತವನ್ನು ಜೀವಿಸುತ್ತಾರೆ.

ಪೇತ್ರನು ಕಾಲದ ಅಂತ್ಯವನ್ನು ಸೂಚಿಸುವಾಗ, ಇಲ್ಲಿ ಭೂಮಿಯ ಮೇಲಿನ ಯೇಸುವಿನ ಸಾವಿರ ವರುಷಗಳ ರಾಜ್ಯದ ಬಗೆಗೆ ಯಾವುದೇ ಆಧಾರವನ್ನು ಆತನು ಮಾಡದೇ ಇರುವದನ್ನು ನಾವು ಗಮನಿಸಬೇಕು. ಅಲ್ಲಿ ಯಾವುದೇ ತೊಂದರೆ, ಕ್ರಿಸ್ತೀಯ ಧರ್ಮಕ್ಕೆ ವಿರುದ್ಧವಾದದ್ದು ಅಥವಾ ನಾಶನಕರವಾದ ಯುದ್ಧ ಯಾವುದು ಸೂಚಿಸಲ್ಪಟ್ಟಿಲ್ಲ. ಕರ್ತನ ಪ್ರಕಟಿಸಿಕೊಳ್ಳುವಿಕೆಯು "ಬದುಕಿರುವವರಿಗೂ ಸತ್ತವರಿಗೂ ಆತನು ನ್ಯಾಯತೀರಿಸುವದಕ್ಕೆ ಸಿದ್ಧನಾದಾಗ" ಆ ಸಮಯವು ಬರುವದಾಗಿದೆ (4:5). ಇದು "ಎಲ್ಲವುಗಳ ಅಂತ್ಯ" ವಾಗಿರುದಾಗಿದ್ದು ಲೌಕಿಕ ಜಗತ್ತಿನಾದ್ಯಂತ್ಯ ಅಥವಾ ಕಡೇಪಕ್ಷ ಈಗ ನಾವು ತಿಳಿದಂತೆ ಮಾನವ ಜೀವಿತದ ಅಂತ್ಯವು ಆಗಿದೆ ಎಂಬರ್ಥವಾಗಿದೆ. ಮನುಕುಲದ ಬಿಡುಗಡೆಗೋಸ್ಕರದ ದೇವರ ಯೋಜನೆಯು ಈಗ ಸಂಪೂರ್ಣವಾಗಿದ್ದು ಅದು ಕ್ರಿಸ್ತನು ಮಾನವನ ಇತಿಹಾಸದಲ್ಲಿ ಈಗ ಕಾಣಿಸಿಕೊಂಡಿದ್ದೇ ಆಗಿದೆ. ಅಲ್ಲಿ ಉಳಿದದ್ದು ಕೇವಲ ಆತನ ಮಹಿಮಪೂರ್ಣವಾದ ಎರಡನೆಯ ಬರೋಣವೇ ಆಗಿದೆ. ಆತನ ಪ್ರಕಟಿಸಿಕೊಳ್ಳುವಿಕೆಯಲ್ಲಿ ಪ್ರತಿಯೊಬ್ಬರ ಮೊಣಕಾಲುಗಳು ಬೊಗ್ಗುವವು ಮತ್ತು ಪ್ರತಿಯೊಂದು ನಾಲಿಗೆಯು ಘನವನ್ನು ಸಲ್ಲಿಸುವವು (ಫಿಲಿಪ್ಪಿ 2:10).

ಕೊನೆಯ ಸಂಗತಿಗಳ (ಕರ್ತನ ಮರಳುವಿಕೆ, ನ್ಯಾಯತೀರ್ಪು, ಮತ್ತು ಅದನ್ನು ಹಿಂಬಾಲಿಸುವ ನಿತ್ಯತೆ) ಅಧ್ಯಯನಕ್ಕೋಸ್ಕರದ ಪಾರಿಭಾಷಿಕದ ಪದವು eschatology ಆಗಿದೆ. ಹೊಸ ಒಡಂಬಡಿಕೆಯಲ್ಲಿನ ಅಂತ್ಯದ ಸಮಯಗಳ ಅಧ್ಯನವು ಭವಿಷ್ಯದಲ್ಲಿ ಹೊಂದಿರುವಂತಹದರ ಬಗೆಗಿನ ಕುತೂಹಲವನ್ನು ಹೊಂದಿರುವಂತದ್ದೇನೂ ಅಲ್ಲ. ಅಂಥ ಹೊಂದಿರುವಿಕೆಯು ಕೇವಲ ನಮ್ಮ ಸಮಯಕ್ಕೆ ಯೋಗ್ಯವಾಗಿ ಇದೆ. ಬದಲಾಗಿ ಕರ್ತನ ಬರೋಣದ ಪರಿಗಣಿಸಿವಿಕೆ ಮತ್ತು ನ್ಯಾಯತೀರ್ಪು ಇವುಗಳು ದೈವೀಯ ಜೀವಿತದ ತ್ವರತೆಯನ್ನು ಒತ್ತಿಹೇಳುವವು ಆಗಿವೆ. ಕರ್ತನ ಮರಳುವಿಕೆಯು "ಹತ್ತಿರ"ವಾಗಿ ಇರುವುದರಿಂದ, ಕ್ರೈಸ್ತರು **ಜಿತೇಂದ್ರಿಯರಾಗಿಯೂ, ಪ್ರಾರ್ಥನೆಗೆ ಸಿದ್ಧವಾಗಿರುವಂತೆ ಸ್ವಸ್ಥಚಿತ್ತರಾಗಿಯೂ** ಇರಬೇಕು. ಹೊಸ ಒಡಂಬಡಿಕೆಯಲ್ಲಿನ eschatology ಯಾವಾಗಲೂ ನೈತಿಕತೆಯನ್ನು ಸೇವಿಸುವುದಾಗಿದೆ. ಇದು ದೈವೀಯ ಜೀವಿತದ ಬೇಡಿಕೆಯು ಆಗಿದೆ.

"ಜಿತೇಂದ್ರಿಯರಾಗಿಯೂ ಇರಿ" *(sōphroneō)* ಮತ್ತು "ಸಿದ್ಧವಾಗಿರುವಂತೆ ಸ್ವಸ್ತಚಿತ್ತರಾಗಿಯೂ" *(nēphō)* ಎಂಬುದು ಭಾಷಾಂತರಗಳು ಎರಡು ಗ್ರೀಕ್ ವಿಧ್ಯಾರ್ಥಕಗಳು ಆಗಿದ್ದು ಅವುಗಳ ಸಮಾನ ಅರ್ಥವನ್ನು ಕೊಡುವವು ಆಗಿದೆ. ಅಂತ್ಯದ ಸಮಯದ ಮೇಲಿನ ಪ್ರತಿಫಲಿಸುವಿಕೆಯ ಪರಿಣಾಮವು ಕ್ರಿಸ್ತೀಯ ಇರುವಿಕೆಯಲ್ಲಿ ವಿವೇಚನಾಯುಕ್ತವಾದದ್ದು, ಸ್ಪಷ್ಟವಾದದ್ದೂ, ಮತ್ತು ಸ್ವನಿಯಂತ್ರಿತ್ರವಾದದ್ದು ಆಗಿದೆ. 1 ಪೇತ್ರ 1:13ರಲ್ಲಿ "ನಿಮ್ಮ ಮನಸ್ಸನ್ನು ಕಾರ್ಯಕ್ಕೋಸ್ಕರ ಸಿದ್ಧಪಡಿಸಿಕೊಳ್ಳಿರಿ," ಅಥವಾ ಹೆಚ್ಚು ಅಕ್ಷರಸಹವಾಗಿ "ನಿಮ್ಮ ಮನಸ್ಸಿನ ನಡುವನ್ನು ಕಟ್ಟಿಕೊಳ್ಳಿ," ಎಂದು ಬರೆಯುತ್ತಾನೆ. KJVಯಲ್ಲಿ ಸಹ ಪೇತ್ರನು "ಸ್ವಸ್ಥವಾಗಿ ಇಟ್ಟುಕೊಳ್ಳಿ" ಎಂಬ ಕ್ರಿಯಾಪದವನ್ನು ಬಳಸಿದ್ದಾನೆ. ಯಾಕಂದರೆ "ಎಲ್ಲವುಗಳ ಅಂತ್ಯವು ಸಮೀಪಿಸಿದೆ" ಇದು ಒಬ್ಬನ ಜೀವಿತದಿಂದ ಪಾಪವನ್ನು ಹೊರಕ್ಕೆ ಹಾಕುವದು ಆಗಿದೆ; ಇದು ದೈವೀಯತೆಯ ರಾಜ್ಯದ ಸಮಯವು ಆಗಿದೆ. ಇನ್ನೊಂದೆಡೆ ಅಪೊಸ್ತಲನು ಬರೆದ ಹಾಗೆ "ಇವೆಲ್ಲವುಗಳು ಹೀಗೆ ಲಯವಾಗಿ ಹೊಗುವದರಿಂದ ನೀವು ದೇವರ ದಿನದ ಪ್ರತ್ಯಕ್ಷತೆಯನ್ನು

ಎದುರುನೋಡುತ್ತಾ ಹಾರೈಸುತ್ತಾ ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲಾ'' ಎಂದು ಬರೆಯುತ್ತಾನೆ (2 ಪೇತ್ರ 3:11).

ಇದು ಸ್ವಸ್ಥಚಿತ್ತಕಾಗಿರುವಿಕೆಗೋಸ್ಕರದ ಮನವಿಯ ಪ್ರಾರ್ಥನೆಗೆ ಮುನ್ನುಡಿಯಾಗಿದೆ ಇದು ''ಪ್ರಾರ್ಥನೆಗೋಸ್ಕರದ ಉದ್ದೇಶ''ವಾಗಿದೆ. ದೇವರೊಂದಿಗಿನ ನಮ್ಮ ಸಂಬಂಧವು ಗಂಭೀರವಾದ ಸಂಗತಿಯಾಗಿದೆ ಎಂದು ಪೇತ್ರನ ಮಾತುಗಳು ನೆನಪಿಸುವವು ಆಗಿವೆ.[5] ವಿನಾಶಕರವಾದದ್ದು ಬೆದರಿಸಿದಾಗ ತಪ್ಪಿಸಿಕೊಳ್ಳುವ ಸಂಚಿಗಾಗಿ ಹೀಗೆ ಯಾವಾಗಲೊಮ್ಮೆ ಮಾತ್ರ ದೇವರನ್ನು ಬಳಸುವದು ಧಾರ್ಮಿಕವಾಗಿ ನಡೆದುಕೊಳ್ಳುವದು ಆಗಿದೆ. ದೇವರನ್ನು ಆರಾಧನೆಯಲ್ಲಿ, ಮತ್ತು ಸ್ತೊತ್ರಸಲ್ಲಿಸುವಿಕೆಯಲ್ಲಿ, ಅತ್ಯಲ್ಪವಾಗಿ ಪ್ರತಿಫಲಿಸುವದಕ್ಕೆ ಮತ್ತು ಭಯಭಕ್ತಿಗಾಗಿ ಕರೆಕೊಡುವಿಕೆಯಲ್ಲಿ ಎಂದು ಪೇತ್ರನ ಮಾತುಗಳು ನೆನಪಿಸುವವು ಆಗಿವೆ. ಪ್ರಾರ್ಥನೆಯ ಉದ್ದೇಶ ಮತ್ತು ಕಾರ್ಯದ ಮೇಲಿನ ಯಾವುದೇ ನಿರ್ದಿಷ್ಟಪ್ರತಿಫಲವನ್ನು ಬೈಬಲಿನಲ್ಲಿ ಮಂಡಿಸಿಲ್ಲ. ಬದಲಾಗಿ, ಪ್ರಾರ್ಥಿಸುವವರನ್ನು ಮತ್ತು ಪ್ರಾರ್ಥನೆಯನ್ನು ಸಲ್ಲಿಸುವವರನ್ನು ನಮಗೆ ಮಂಡಿಸುವುದಾಗಿದೆ. ಮುಂದೆ, ನಮ್ಮ ಪ್ರಾರ್ಥನೆಯನ್ನು ಕೇಳುವ ಮತ್ತು ತನ್ನ ಜನರ ಮೊರೆಗೆ ಪ್ರತಿಕ್ರಯಿಸುವ ದೇವರನ್ನು ನಮಗೆ ಮಂಡಿಸುವುದಾಗಿದೆ. ''ಅವರು ಬೇಡುವುದರೊಳಗೆ ಉತ್ತರವನ್ನು ದಯಪಾಲಿಸುವೆನು. ಅವರು ಹೇಳುತ್ತಿರುವಾಗಲೇ ಕೇಳುವೆನು'' (ಯೆಶಾಯ 65:24).

ದೇವರೆಡೆಗೆ ಬರುವದು ಗಂಭೀರವಾದ ವಿಷಯ ಭಯಭಕ್ತಿಯ ಸಮಯ, ಆಂತರ್ಯವನ್ನು ನೋಡಿಕೊಳ್ಳುವ ಸಮಯ ಆಗಿದೆ. ದೇವರ ಮಹಿಮೆಯು ''ಗಂಭೀರ'' ವಾಗಿದ್ದಾದರೆ ಅದು ಮನದಲ್ಲಿ ಬರುವ ಮೊದಲ ಪದವಲ್ಲ ಎಂದು ಪ್ರತಿಪಾದಿಸುವ ಅನ್ಯೋನ್ಯಕೂಟಗಳು ಇವೆ. ಇಪ್ಪತ್ತೊಂದನೆಯ ಶತಮಾನದಲ್ಲಿ American entertainment industry ತನ್ನನ್ನು ತಾನು ಸಭೆಯ ಅನ್ಯೋನ್ಯಕೂಟದಲ್ಲಿ ತೊಡಗಿಸಿಕೊಂಡಿತು. ಅನೇಕರ ಮನದಲ್ಲಿ, ಆರಾಧನೆಯು ರಾಕ್ ಮೇಳದಂತೆಯೂ, ಉದ್ರೇಕಿಸುವಂತೆಯೂ ಮತ್ತು ಮೋಜಿನಂತೆಯೂ ಇತ್ತು. ಕೆಲಸಾರಿ ಜೊತೆಗೂಡಿದ ರಾಕ್ ಬ್ಯಾಂಡ್, ಎಲೆಕ್ಟ್ರಿಕ್ ಗಿಟಾರ್, ಮತ್ತು ರಿದಮ್ ಕ್ಲ್ಯಾಪ್ ಮತ್ತು ಹತೋಟಿಯಲ್ಲಿಡುವದು ದೇವಜನರ ಮೇಲೆ ಪೇತ್ರನು ಒತ್ತಾಯಿಸಿದ ಸ್ವಸ್ಥಚಿತ್ತವನ್ನು ಮತ್ತು ನ್ಯಾಯತೀರ್ಪನ್ನು ಹೊಂದಿಸಿಕೊಳ್ಳುವ ಹಾಗೆ ಕಷ್ಟಕರವಾಯಿತ್ತು. ಹೇಗೂ ಆರಾಧನೆಯು ಪಶ್ಚಾತ್ತಾಪ, ಸ್ಮರಣೆ ಮತ್ತು ಸ್ತೋತ್ರದಲ್ಲಿ ಸಲ್ಲಿಸುವಿಕೆಯನ್ನು ತಲುಪುವದಾಗಿದ್ದು ''ನೀವು ಜಿತೇಂದ್ರಿಯರಾಗಿಯೂ, ಪ್ರಾರ್ಥನೆಗೆ ಸಿದ್ಧವಾಗಿರುವಂತೆ ಸ್ವಸ್ಥಚಿತ್ತರಾಗಿಯೂ ಇರ್ರಿ'' ಎಂದು ಪೇತ್ರನು ಹೇಳುವಾಗ ದೇವಜನರಲ್ಲಿ ಕಂಡುಕೊಳ್ಳುವ ನಿರೀಕ್ಷೆಗೆ ಆ ಲಹರಿಯು ಹೆಚ್ಚಾಗಿ ಹೊಂದಿಕೊಳ್ಳುವಂತೆ ಕಂಡಿತು.

**ವಚನ 8.** ಅಲ್ಲಿ ಅಂಥ ಬಲವಾದ ಮನಸ್ಥಿತಿಯು ನಿರ್ದಿಷ್ಟವಾದ ಸಂದರ್ಭದ್ದು ಆಗಿದೆ. ಇದು ಕ್ರಿಸ್ತೀಯ ಜೀವಿತದ ಎಲ್ಲವನ್ನೂ ಲಕ್ಷಿಕರಿಸುವದು ಅಲ್ಲ. ಆದರೆ ಇದು ಅದರ ಭಾಗವಾಗಿದೆ. ವಿನಾಕಾರಣ ಆಕ್ರಮಣಕ್ಕೆ ಒಳಗಾದಾಗ ಬೆಂಬಲಿಸಲು ವಿಶ್ವಾಸಿಗಳು ಕೆಲಸಾರಿ ಒಟ್ಟುಗೂಡುತ್ತಾರೆ. ಇದು ಜೊತೆಯಾಗಿರುವ ಸಮುದಾಯದ ಒಟ್ಟುಗೂಡುವಿಕೆ, ಒಬ್ಬರನ್ನೊಬ್ಬರು ಪ್ರೀತಿಸುವದು ಆಗಿದ್ದು ಪೇತ್ರನು ವಚನ 8ರಲ್ಲಿನ ತನ್ನ ಲಕ್ಷವನ್ನು ತಿರುಗಿಸುವವನು ಆಗಿದ್ದಾನೆ.

ಕ್ರಿಸ್ತನ ಶಿಷ್ಯರು ಅವಿಶ್ವಾಸಿಗಳು ''ಅಪರಿಮಿತವಾದ ಪಟಿಂಗತನದಲ್ಲಿ ಸೇರದೇ ಇರುವುದಕ್ಕೆ ಅಚ್ಚರಿಪಡುತ್ತಾರೆ'' (4:4). ''ಅವರು ಬದುಕಿರುವವರಿಗೂ ಸತ್ತವರಿಗೂ ನ್ಯಾಯತೀರಿಸುವದಕ್ಕೆ ಸಿದ್ಧವಾಗಿರುವಾತನಿಗೆ ಉತ್ತರ ಕೊಡಬೇಕು'' ಎಂಬುದರಲ್ಲಿ ಮನಸ್ಸನ್ನು ಹೊಂದಿಲ್ಲದವರನ್ನು ವಿಶ್ವಾಸಿಗಳು ತಮಗೆ ತಾವೇ ನೆನಪುಮಾಡಿಕೊಳ್ಳುವದರಲ್ಲಿ ಇದು ಹೊಂದುವುದಾಗಿರುತ್ತದೆ (4:5). ನ್ಯಾಯತೀರ್ಪು ಅಂತ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಒಂದೆಡೆಯಲ್ಲಿ ಕ್ರೈಸ್ತರು ತಮ್ಮ ವೈರಿಗಳಿಗೆ ಕರುಣೆಯನ್ನೂ ಮತ್ತು ಆದರವನ್ನು ತೋರಿಸಲು

ಬಯಸುತ್ತಾರೆ, ಆದರೆ ಇನ್ನೊಂದೆಡೆ, ಅವರು ಕರ್ತನಾದ ಕ್ರಿಸ್ತನೊಂದಿಗೆ ನಿಶ್ಚಿತವಾಗಿ ವಿಜಯಶಾಲಿಗಳು ಆಗುವರು ಎಂದು ತಮ್ಮನ್ನು ತಾವು ಸಮಾಧಾನಪಡಿಸಿಕೊಳ್ಳುವರು. ಕ್ರಿಸ್ತನು ಪ್ರಕಟಗೊಳ್ಳುವಾಗ ಅವರನ್ನು ಒಳ್ಳೆಯರೆಂದು ತೀರ್ಪುಮಾಡುವನು. ಕರ್ತನು ಅಶುದ್ಧತೆಯನ್ನು ತನ್ನ ಸನ್ನಿಧಾನದಿಂದ ತೆಗೆದುಹಾಕುವನು. ತನ್ನ ನಂಬಿಕೆಯನ್ನು ಹಂಚಿಕೊಳ್ಳದೆ ನಡೆಯುವ ಕ್ರಿಸ್ತೀಯ ರೀತಿಯು ಅಸ್ಪಷ್ಟತೆ ದೊಡ್ಡ ವ್ಯವಹಾರವನ್ನು ಒಳಗೊಂಡಿರುವುದಾಗಿದೆ. ತನ್ನ ನಂಬಿಕೆಯನ್ನು ಹಂಚಿಕೊಳ್ಳದ ಜೀವಿತದ ರೀತಿಯ ಗುಣಗಳಿಂದ ಆತನು ತನ್ನನ್ನು ಬೇರೆಮಾಡಿಕೊಳ್ಳುತ್ತಾನೆ, ಆದರೆ ಅವರು ದೇವರ ಪ್ರೀತಿಯ ಸೃಷ್ಟಿಗಳು ಎಂದು ಅವರು ಅರಿತುಕೊಳ್ಳಬೇಕೆಂದು ಆತನು ಬಯಸುವವನಾಗಿರುತ್ತಾನೆ.

ಹೊರಗಿರುವತ್ತ ಅಲ್ಲಿ ಅಸ್ಪಷ್ಟತೆಯು ಇದೆ, ಆದರೆ ಕ್ರೈಸ್ತರು ನಂಬಿಕೆಯನ್ನು ಹಂಚಿಕೊಂಡಿರುವಂತವರಲ್ಲಿ ಅದು ಇರುವದಿಲ್ಲ. ಪೇತ್ರನು ವಿಶ್ವಾಸಿಗಳಿಗೆ **ಮೊಟ್ಟಮೊದಲು ನಿಮ್ಮನಿಮ್ಮೊಳಗೆ ಯಥಾರ್ಥವಾದ ಪ್ರೀತಿಯಿರಲಿ** ಎಂದು ಹೇಳುತ್ತಾನೆ. J. N. D. Kelly ರವರು ಆ ಒತ್ತಾಯವನ್ನು ಹೀಗೆ ಭಾಷಾಂತರಿಸಿದ್ದು ಅದು "ಪ್ರತಿಯೊಂದರ ಮೇಲೆ, ಒಬ್ಬರಿಗೊಬ್ಬರ ಮೇಲೆ ಪೂರ್ಣಪ್ರಮಾಣದ ಪ್ರೀತಿಯನ್ನು ಇಟ್ಟುಕೊಂಡಿರಿ" ಎಂದಿದೆ.[6] ಕ್ರೈಸ್ತರು ಒಬ್ಬರಿಗೊಬ್ಬರು ಹೊಂದಿದ ಪ್ರೀತಿಯು ಅವರ ಕ್ರಿಸ್ತನಿಗೋಸ್ಕರದ ಸಾಮಾನ್ಯ ಪ್ರೀತಿಯಲ್ಲಿ ಬೆಳೆಯುವುದಾಗಿದೆ. "ನೀವು ಆತನನ್ನು ಕಣ್ಣಾರೆ ನೋಡಲಿಲ್ಲವಾದರೂ ಆತನನ್ನು ಪ್ರೀತಿಸುತ್ತೀರಿ" ಎಂದು 1:8ರಲ್ಲಿ ಅಪೊಸ್ತಲನು ಹೇಳಿದ್ದಾನೆ. ಸರಿಯಾದ ಸಿದ್ಧಾಂತವು ಪೇತ್ರನ ಓದುಗರ ಅತೀ ಅವಶ್ಯಕತೆಯು ಆಗಿರಲಿಲ್ಲ.[7] ಕ್ರಿಸ್ತನು ಯಾರು ಮತ್ತು ಅವರಿಗಾಗಿ ಆತನು ಏನು ಮಾಡಿದ್ದಾನೆ ಎಂದು ಅವರು ಬಲ್ಲವರಾಗಿದ್ದಾರೆ (2:21-25). ಕರ್ತನು ಮರಳಿಬರಲಿದ್ದಾನೆ ಎಂದು ಅವರು ಬಲ್ಲವರಾಗಿದ್ದಾರೆ ಮತ್ತು ಆ ದಿನವು ಬರುವ ತನಕ ಹೇಗೆ ಜೀವಿಸಬೇಕೆಂದು ಅವರು ಬಲ್ಲವರಾಗಿದ್ದಾರೆ ಮತ್ತು ಆ ದಿನವು ಬರುವ ತನಕ ಹೇಗೆ ಜೀವಿಸಬೇಕೆಂದು ಅವರು ಬಲ್ಲವರಾಗಿದ್ದಾರೆ. ಇದೆಲ್ಲವೂ ಇರುವದು ನಿಜವಾದಾಗ, ಕ್ರಿಸ್ತನ ರಾಜ್ಯವು ಅವರೊಳಗೆ ನಿಜವಾಗುತ್ತದೆ. ಅವರು ಅನುಸರಿಸಿದಂಥ ವಿಫಲವಾಗದ ಒಬ್ಬರಿಗೊಬ್ಬರ ಪ್ರೀತಿಯ ಅಂಶದಲ್ಲಿ ಇದ್ದಾಗ ಅವರು ಕ್ರಿಸ್ತನ ಆಶೀರ್ವಾದದಲ್ಲಿ ಪಾಲುಗಾರರಾಗಿರುತ್ತಾರೆ. ಪರಲೋಕದ ಪೂರ್ವಸೂಚನೆಯು ವಿಶ್ವಾಸಿಗಳು ಒಬ್ಬರಿಗೊಬ್ಬರು ಮರಣಿಸಿದ ಪ್ರೀತಿಯು ಶರೀರದಲ್ಲಿ ಇರುವಾಗ ಅವತರಿಸುವುದಾಗಿದೆ. ಯೇಸು ತಾನೇ ಹೇಳದಂಥ, "ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನನ್ನ ಶಿಷ್ಯರು ಎಂದು ತಿಳುಕೊಳ್ಳುವರು" (ಯೋಹಾನ 13:25).

**ಪ್ರೀತಿಯು ಬಹುಪಾಪಗಳನ್ನು ಮುಚ್ಚುತ್ತದೆ** ಎಂದು ಪೇತ್ರನು ಸೇರಿಸಿದ್ದಾನೆ. ಈ ಹೇಳಿಕೆ ಅರ್ಥವು ಎಲ್ಲಾ ಪ್ರಮಾಣದಲ್ಲಿ ಸ್ಪಷ್ಟವಾಗಿಲ್ಲ. ಮನುಕುಲಕ್ಕಾಗಿನ ದೇವರ ಪ್ರೀತಿಯು ಕ್ರಿಸ್ತನನ್ನು ವಿಮೋಚಕನನ್ನಾಗಿ ಕಳುಹಿಸಿದ್ದರ ಕಾರಣ ಎಂಬುದು ಪೇತ್ರನ ಅರ್ಥವಾಗಿರಬಹುದು. ನ್ಯಾಯತೀರ್ಪಿನ ದಿನದಂದು ಕ್ರಿಸ್ತನ ಪರಾರ್ಥಕ ಬಲಿಯ ಮೂಲಕ ದೇವರು ಬಹುಪಾಪಗಳನ್ನು ಮುಚ್ಚಿಹಾಕುತ್ತಾನೆ.[8] ಪೇತ್ರನು 4:1ರಲ್ಲಿನ ಪಾಪದ ಬಗೆಗಿನ ತನ್ನ ಆಧಾರಗಳನ್ನು ಅನುಸರಿಸುತ್ತಿರುವದು ಒಂದು ಸಾಧ್ಯತೆಯು ಆಗಿದೆ. ಕ್ರೈಸ್ತನು ಪಾಪಕ್ಕಾಗಿ ಸಾಕಾಗಿರುತ್ತಾನೆ; ಆತನು ಅದರಿಂದ ಹಿಂದಕ್ಕೆ ತಿರುಗಿಕೊಳ್ಳಬಯಸುತ್ತಾನೆ. ಕ್ರಿಸ್ತನಲ್ಲಿನ ಒಬ್ಬ ಸಹೋದರ ಮತ್ತು ಸಹೋದರಿಯಗೋಸ್ಕರದ ಪ್ರೀತಿಯು ಪಾಪವನ್ನು ತನ್ನ ಹಿಂದಕ್ಕೆ ಬಿಡಲು ಅವನಿಗೆ ಅವಶ್ಯವಾದ ಬಲವನ್ನು ಕೊಡುವುದಾಗಿದೆ ಎಂದು 4:8ರಲ್ಲಿ ಪೇತ್ರನ ಅರ್ಥವಾಗಿರಬಹುದು. ಪ್ರೀತಿಯು ಪಾಪವನ್ನು ಮರೆಸುತ್ತದೆ ಎಂಬುದರ ಅರ್ಥವು ಇದು ಒಬ್ಬನ ಜೀವಿತದಿಂದ ಪಾಪವನ್ನು ಅಳಿಸಿಹಾಕುತ್ತದೆ. ಪ್ರೀತಿಯ ಕಾರಣದಿಂದ ಒಬ್ಬನು ತನ್ನ ಪಾಪಮಯ ಮಾರ್ಗಕ್ಕೆ ತನ್ನ ಬೆನ್ನನ್ನು ತಿರುಗಿಸಬಹುದು. ಈ ಎರಡು ವಾಕ್ಯಗಳು ಅರ್ಥವನ್ನು ಮಾಡುವಂತಾದರೆ.[9] ಅಲ್ಲಿ ಉತ್ತಮವಾದದ್ದು ಇದೆ. ಕ್ರಿಸ್ತನ ಸಮುದಾಯದಲ್ಲಿ

ಒಬ್ಬರಿಗೋಸ್ಕರ ಒಬ್ಬರು ತಮ್ಮ ಪ್ರೀತಿಯನ್ನು ತೋರಿಸಬೇಕೆಂದು ಅಪೊಸ್ತಲನು ಪ್ರಬೋಧಿಸಿದ ನಂತರ ಒಮ್ಮಲೇ ಈ ಹೇಳಿಕೆಗಳು ಬರುತ್ತವೆ. "ಪ್ರೀತಿಯ ಬಹುಪಾಪಗಳನ್ನು ಮುಚ್ಚುತ್ತದೆ" ಎಂಬ ಪದಗುಚ್ಛವನ್ನು ವಿಶ್ವಾಸಿಗಳ ಮಧ್ಯ ವ್ಯಕ್ತಪಡಿಸಲಾದ ಪರಸ್ಪರ ಒಪ್ಪಂದದ ಪ್ರೀತಿಯ ವ್ಯಾಖ್ಯಾನದ ರೀತಿಯಲ್ಲಿ ತೆಗೆದುಕೊಳ್ಳುವದು ಉತ್ತಮವಾಗಿದೆ. ಪೇತ್ರನ ಓದುಗರು ಆಧುನಿಕ ಕ್ರೈಸ್ತರಂತೆ ಇದ್ದು ಒಬ್ಬರಿಗೊಬ್ಬರು ಕಾರ್ಯದಲ್ಲಿ ಆಚರಣೆಗೆ ತರುವಂತ ಉದಾರವಾದ ನ್ಯಾಯತೀರ್ಪಿನ ಅವಶ್ಯಕತೆಯಲ್ಲಿ ತಮ್ಮನ್ನು ಕಂಡುಕೊಳ್ಳುವ ಸಾಧ್ಯತೆಯು ಇದೆ.

ಒಬ್ಬ ಕ್ರೈಸ್ತನು ಇತರ ಕ್ರೈಸ್ತರೊಂದಿಗಿನ ಸಾಂಗತ್ಯನ್ನು ಅಂಗೀಕರಿಸದೇ ಅಲ್ಲಿ ಬೇರೆ ಮಾರ್ಗವಿಲ್ಲ. ಹುಟ್ಟಿನಿಂದಲೇ ಕ್ರಿಸ್ತನನ್ನು ಸೇವಿಸುವದು ಸಮುದಾಯದ ಅನುಭವವಾಗಿದೆ. ಯಾವುದೇ ಒಬ್ಬರಿಗೋಸ್ಕರ ಕ್ರಿಸ್ತನು ನಮ್ಮಲ್ಲಿದ್ದಾನೆ ಎಂಬುದಕ್ಕಿಂತ ಹೆಚ್ಚಾಗಿ ಒಬ್ಬರು ಪ್ರೀತಿಯನ್ನು ತೋರಿಸುವಲ್ಲಿ ವಿಫಲವಾಗದೇ ಇರುವಂಥ ನಮ್ಮ ಚಿತ್ತವನ್ನು ತೋರ್ಪಡಿಸುವದನ್ನು ಸೂಚಿಸುವ ಹೆಚ್ಚಿನ ಪರೀಕ್ಷೆಗಳು ಅಲ್ಲಿ ಬಹುಶಃ ಇರುವದಿಲ್ಲ. ಜನರು ಒಬ್ಬರಿಗೊಬ್ಬರು ಸಾಮಿಪ್ಯದ ಸಾಂಗತ್ಯದಲ್ಲಿರುವಾಗ, ಒಬ್ಬರಿಗೊಬ್ಬರಿಗೆ ಕಿರಿಕಿರಿಯನ್ನು ಉಂಟುಮಾಡುವ ಗುಣಗಳನ್ನು ಅವರು ತಪ್ಪದೇ ಕಂಡುಕೊಳ್ಳುವರು. ವಿಶ್ವಾಸಿಗಳು ತಾವು ನಂಬಿಕೆಯನ್ನು ಹಂಚಿಕೊಳ್ಳುವವರಲ್ಲಿ ಕಿರಿಕಿರಿ ಗುಣಗಳನ್ನು ಕಂಡುಕೊಂಡಾಗ ಅವರು ಹೇಗೆ ಅದರೊಡನೆ ವ್ಯವಹರಿಸುವರು? ಇದಕ್ಕೆ ಪೇತ್ರನ ಉತ್ತರವು: "ಪ್ರೀತಿಯು ಬಹು ಪಾಪಗಳನ್ನು ಮುಚ್ಚುತ್ತದೆ" ಎಂದಾಗಿದೆ. ವಾಸ್ತವವಾಗಿ, ಸಭೆಯು ಶಾಂತತೆಯಿಂದ, ಸಾಂಗತ್ಯದಿಂದ ಮತ್ತು ಒಳ್ಳೆಯ ವಿಚಾರದಿಂದ ಜೀವಿಸುವಾಗ, ಒಬ್ಬರಿಗೊಬ್ಬರ ಕ್ರೈಸ್ತರ ಪ್ರೀತಿಯು "ಅನೇಕ ಪಾಪಗಳನ್ನು" ಮುಚ್ಚುವುದಾಗಿದೆ.

ಕ್ರೈಸ್ತರು ಒಟ್ಟಿಗಿದ್ದಾಗ ಮನನೋಯಿಸುವಂತದ್ದನ್ನು ತೆಗೆದುಕೊಳ್ಳುವ ಯಾವ ಸಂದರ್ಭಗಳು ಬರುವಂಥದ್ದು ಕೇವಲ ಕ್ವಚಿತ್ತಾದ ಸಮಯಕ್ಕೆ ಇರಬಹುದು. ಒರಟುತನಕ್ಕೆ ಅಸಭ್ಯವಾದ ನಡತೆಗೆ ಅಲ್ಲಿ ಯಾವುದೇ ನೆವಗಳು ಇಲ್ಲ; ಮನನೋಯಿಸುವಂತವುಗಳನ್ನು ಬೇಗನೇ ತೆಗೆದುಕೊಳ್ಳುವವರು ಅಲ್ಲಿ ಇನ್ನೂ ಅಲ್ಲಿದ್ದಾರೆ. ತಮ್ಮ ನೋವುಗಳನ್ನು ತಮ್ಮ ತೋಳಮೇಲಿಟ್ಟುಕೊಂಡವರಿಗೆ ಯೇಸು ಕ್ರಿಸ್ತನ ಸಭೆಯಲ್ಲಿ ಯಾವ ಸ್ಥಳವು ಇಲ್ಲ. ಆತನು ದೋಷಿಯೇ ಆಗಿರಲಿ ಅಥವಾ ಅವಮಾನಿತನೇ ಆಗಿರಲಿ ಪ್ರತಿಯೊಬ್ಬ ಕ್ರೈಸ್ತನು, ಸಮಯದ ಮೇಲೆ ಆತುಕೊಂಡಿದ್ದಾನೆ. ಯಾವುದೇ ಅಡೆತಡೆಗಳನ್ನು ಕಟ್ಟುವದಕ್ಕೆ ಅವಕಾಶಕೊಡದೆ ಎಚ್ಚರಿಕೆಯಿಲ್ಲದ ಮಾತುಗಳಿಗೆ ಕ್ರೈಸ್ತಕು ಒಬ್ಬರಿಗೊಬ್ಬರು ಅವಕಾಶಕೊಡಬೇಕು. "ಉನ್ನತ ನಿರ್ವಹಣೆಯು" ಕ್ರೈಸ್ತರಿಗೆ ಉಪದ್ರವವಾಗಿದೆ. ತಮ್ಮ ಅವಶ್ಯಕತೆಗಳ ಮೇಲೆ ಇತರರು ಒತ್ತಾಯವನ್ನು ಬಯಸುವವರು ಯಾರೊಬ್ಬರ ಪಾಪಗಳನ್ನು ಅಲಕ್ಷಿಸುವದು ಉಚಿತವಲ್ಲ. ಕ್ರಿಸ್ತನ ಸಮುದಾಯದಲ್ಲಿನ ಪ್ರೀತಿಯು "ಬಹುಪಾಪಗಳನ್ನು ಮುಚ್ಚುವುದಾಗಿದೆ" ಯಾಕೆಂದರೆ ಕ್ರೈಸ್ತರು ತಮ್ಮನ್ನು ಪ್ರೀತಿಸುವ ಮತ್ತು ಬಹುಪಾಪಗಳನ್ನು ಮುಚ್ಚುವ ಕರ್ತನನ್ನು ಹೊಂದಿದ್ದಾರೆ. ಇತರರಲ್ಲಿನ ಬಲಹೀನತೆಗಳು ಪ್ರೌಢ ಕ್ರೈಸ್ತನೊಬ್ಬನು ಇನ್ನೊಬ್ಬನ ಬಗೆಗೆ ಹೊಂದಿದ ಪ್ರೀತಿಗೆ ಕುಂದನ್ನು ಉಂಟುಮಾಡುವದಿಲ್ಲ. ಅವರು ಅದೇ ಕ್ಷಮಾಪಣೆ ಮತ್ತು ದಯೆಯನ್ನು ನ್ಯೂನ್ಯತೆಯನ್ನು ಹೊಂದಿರುವತ್ತ ತೋರಿಸುವವರಾಗಿದ್ದು ಅದು ಅವರು ಕರ್ತನಿಂದ ಅನುಭವಿಸಿದಂತದ್ದು ಆಗಿದೆ.

ತನ್ನ ಜನರಿಗೋಸ್ಕರ ಕರ್ತನ ಮಾರ್ಗದರ್ಶನದಂತೆ, "ಪ್ರೀತಿಯು ಬಹುಪಾಪಗಳನ್ನು ಮುಚ್ಚುತ್ತದೆ" ಎಂದು ಇರುವ ಹೇಳಿಕೆಯು "ತಪ್ಪಾಗಿ ಬಳಸಲ್ಪಡುತ್ತಿದೆ. ಕೊರಿಂಥ ಸಭೆಯು ವ್ಯಭಿಚಾರದ ಸಂಬಂಧದಲ್ಲಿ ಜೀವಿಸುತ್ತಿರುವ ಮನುಷ್ಯನನ್ನು ಕಣ್ಣಿಗೆ ಕಾಣುವ ಯಾವುದೇ ಖಂಡನೆಯನ್ನು ಸಹಿಸಿಕೊಳ್ಳುತ್ತಿದೆ ಎಂದು ಪೌಲನು ತಿಳಿದಾಗ, ಇನ್ನೊಂದು ಮಾರ್ಗವನ್ನು ನೋಡಿರಿ ಎಂದು ಆತನು ಅವರಿಗೆ ಹೇಳಲಿಲ್ಲ ಯಾಕೆಂದರೆ ಪ್ರೀತಿಯೂ ಎಲ್ಲಾ ಪಾಪಗಳನ್ನು

ಮುಚ್ಚುತ್ತದೆ (1 ಕೊರಿಂಥ 5). ಕ್ರೈಸ್ತರಿಗೆ ಸಹೋದರ ಅಥವಾ ಸಹೋದರಿಯನ್ನು ಸಮಾಧಾನಪಡಿಸುವದು ಮತ್ತು ಪಶ್ಚಾತ್ತಾಪಪಡಲು ಕೇಳುವದು ಕೆಲಸಾರಿ ಪ್ರೀತಿಗೆ ಅವಶ್ಯವಾಗಿರುತ್ತದೆ. ಪ್ರೀತಿಗೆ ಗದರಿಸುವದು ಅವಶ್ಯವಾಗಿದೆ. ಜಾಣನಾದ ಸಹೋದರ ಅಥವಾ ಸಹೋದರಿಯು ಆ ಗದರಿಕೆಯನ್ನು ಹೃದಯದಿಂದ ತೆಗೆದುಕೊಳ್ಳುತ್ತಾರೆ. ಪೇತ್ರನ ಹೇಳಿಕೆಯು ಪಾಪಕ್ಕಾಗಿ ಪರವಾನಿಗೆ ಎಂದು ಎಂದಿಗೂ ತೆಗೆದುಕೊಳ್ಳಲಾಗದು.

**ವಚನ 9.** ಪ್ರಾಚೀನ ಮೆಡಟರೇನಿಯನ್ ಜಗತ್ತಿನಲ್ಲಿ, ಆಥಿತ್ಯವು ಔನ್ನತ್ಯವಾದ ಸದ್ಗುಣವುಳ್ಳ ಅರ್ಹತೆಯಾಗಿತ್ತು. ಇದು ಹೊಸ ಒಡಂಬಡಿಕೆಯಲ್ಲಿ ಪದೇಪದೇಬರುವುದಾಗಿದೆ. ಆಶೀರ್ವದಿಸಲ್ಪಟ್ಟವರಿಗೆ ಸಂಬಂಧಿಸಿದಂತೆ, "ನಾನು ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ" ಎಂದು ಯೇಸುವು ಹೇಳಿದ್ದಾನೆ (ಮತ್ತಾಯ 25:35). ಫರಿಸಾಯದ ಸೀಮೋನನ ಸಾಮಾನ್ಯವಾದ ಆತಿಥ್ಯಕ್ಕೆ ಕರ್ತನು ಅವನನ್ನು ಗದರಿಸುತ್ತಾನೆ (ಲೂಕ 7:44-47). ಮಧ್ಯರಾತ್ರಿಯ ಸಮಯದಲ್ಲಿ ಆಥಿತ್ಯವನ್ನು ಕೋರಿಬಂದಿದ್ದ ಒಬ್ಬ ಮನುಷ್ಯನ ಬಗೆಗೆ ಒಂದು ಸಾಮ್ಯವನ್ನು ಆತನು ಹೇಳಿದನು (ಲೂಕ 11:5-8). ಆಥಿತ್ಯವನ್ನು ಅಭ್ಯಾಸಮಾಡಿಕೊಳ್ಳಿರಿ ಎಂದು ರೋಮಾದಲ್ಲಿನ ವಿಶ್ವಾಸಿಗಳಿಗೆ ಪೌಲನು ಪ್ರಬೋಧಿಸುವವನಾಗಿದ್ದಾನೆ (ರೋಮಾಪುರ 12:13). ಇಬ್ರಿಯದ ಲೇಖಕನು "ಅಥಿತಿಸತ್ಕಾರವನ್ನು ಮರೆಯಬೇಡಿರಿ, ಅದನ್ನು ಮಾಡುವಲ್ಲಿ ಕೆಲವರು ತಿಳಿಯದೆ ದೇವದೂತರನ್ನೂ ಸತ್ಕರಿಸಿದ್ದಾರೆ" (13:2) ಎಂದು ಹೇಳಿದ್ದಾನೆ. ಯೋಹಾನನ ಮೂರನೆಯ ಪತ್ರದಲ್ಲಿ ಎಲ್ಲವೂ ಅತಿಥಿಸತ್ಕಾರದ ಬಗ್ಗೆಯೇ ಇದೆ. ಈ ಎಲ್ಲಾ ಪದಗಳಿಗೆ ಕ್ರೂಢೀಕರಿಸಿ **ಒಬ್ಬರಿಗೊಬ್ಬರು ಅಥಿತಿಸತ್ಕಾರಮಾಡಿರಿ** ಪೇತ್ರನು ಹೇಳಿದ್ದಾನೆ. "ಒಬ್ಬರಿಗೊಬ್ಬರು" ಎಂದರೆ ಅಪೊಸ್ತಲನ ಮನದಲ್ಲಿ ನಿರ್ದಿಷ್ಟವಾಗಿ ಇನ್ನೊಬ್ಬ ವಿಶ್ವಾಸಿ ಎಂದಿತ್ತು. ಆದರೆ ಅಥಿತಿಸತ್ಕಾರವು ಎಲ್ಲರಿಗೂ ವಿಸ್ತರಿಸಲ್ಪಟ್ಟಿತ್ತು.

ವಿಶ್ವಾಸಿಗಳು ತಮ್ಮ ಮನೆಯಲ್ಲಿ ಒಬ್ಬರಿಗೊಬ್ಬರು ಪ್ರಯೋಗಿಸುವಂಥ ಸಾಮಾನ್ಯ ಕ್ರೈಸ್ತರ ಅನುಕಂಪ ಅಪೊಸ್ತಲನ ಮನದಲ್ಲಿ ಬಹುಶಃ ಇದ್ದಿರಬಹುದು. ತನ್ನ ಓದುಗರಲ್ಲಿ ಸಾಮಾಜಿಕ ಹೊಂದಾಣಿಕೆಯನ್ನು ಆತನು ಬಹುಶಃ ಪ್ರೋತ್ಸಾಹಿಸುವವನಾಗಿದ್ದಾನೆ. ಹೇಗೋ, ಅಥಿತಿಸತ್ಕಾರವು ಸಾಮಾಜಿಕ ಸಂಗತಿಗಳಿಗಿಂತಲೂ ಹೆಚ್ಚಾದಂಥ ಸಮಯವು ಅದಾಗಿರಬಹುದು. ಸಭೆಗಳಿಗೆ ಕಲಿಸಲು ಮತ್ತು ಪ್ರೋತ್ಸಾಹಿಸಲು ಪ್ರಯಾಣಿಸುವಂಥ ಬೋಧಕರು ಮತ್ತು ಪ್ರವಾದಿಗಳು ಅಲ್ಲಿದ್ದರು. ದೇಮಿತ್ರನು ಅವರಲ್ಲಿ ಒಬ್ಬ ಬೋಧಕನು (3 ಯೋಹಾನ 12). ಪೌಲ ಮತ್ತು ಆತನ ಜೊತೆ ಕೆಲಸದವರು ಅದರಲ್ಲಿ ಒಬ್ಬರಾಗಿದ್ದರು. ತಾವು ಸೇವೆ ಮಾಡುತ್ತಿದ್ದ ಸಭೆಯಿಂದ ಬೆಂಬಲವು ಮತ್ತು ಪ್ರೋತ್ಸಾಹವು ಅವರಿಗೆ ಅವಶ್ಯವಾಗಿತ್ತು. ಅಲ್ಲಿ ಸುಳ್ಳು ಪ್ರವಾದಿಗಳು ಸಹ (1 ಯೋಹಾನ 4:1) ಮತ್ತು ಸುಳ್ಳು ಬೋಧಕರು ಅಲ್ಲಿದ್ದರು. ಅವರಿಗೆ ಆಥಿತ್ಯವನ್ನು ತೋರಿಸುವದು ಅವರ ಕೆಟ್ಟ ವ್ಯವಹಾರಗಳಲ್ಲಿ ತಾವು ತೊಡಗಿಸಿಕೊಂಡಂತೆ ಆಗುತ್ತದೆ (2 ಯೋಹಾನ 11).

ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಪೇತ್ರನು ಸೂಚಿಸಿದಂತ ಆಥಿತ್ಯವು ಶ್ರೀಮಂತರಿಗಿಂತಲೂ ಬಡಜನರಲ್ಲಿ ಹೆಚ್ಚಾಗಿ ಬೇಡಿಕೆಯಲ್ಲಿತ್ತು. ಬಡವಿಧವೆಯು ಎರಡು ಕಾಸನ್ನು ಕೊಡುವದು ಬಲು ಕಷ್ಟಕರವಾದಂತೆ (ಮಾರ್ಕ 12:41-44) ಶ್ರೀಮಂತರ ಬೆಲೆಯುಳ್ಳ ಕಾನಿಕೆಗಳನ್ನು ಎಸೆಯುವುದಕ್ಕಿಂತಲೂ ಹೆಚ್ಚಾಗಿದ್ದು, ಸಂಮೃದ್ಧಿಯಾದ್ಧಿಯಾದ ಸಂಪನ್ಮೂಲವನ್ನು ಹೊಂದಿದವರಿಗಿಂತಲೂ ಹೆಚ್ಚಾಗಿ ಆಥಿತ್ಯವನ್ನು ತೋರಿಸುವದು ಪೇತ್ರನ ಓದುಗರಿಗೆ ಬಲು ಕಷ್ಟದಾಯಕವಾಗಿತ್ತು. ಹೇಗೋ, ಸಿಟ್ಟಿನಿಂದ ಕೊಡುವದು ಎಲ್ಲವನ್ನೂ ಕೊಡುವದಕ್ಕೆ ಸಮಾನವಾದದ್ದು ಅಲ್ಲ. **ಗುಣಗುಟ್ಟದೆ** ಕೊಡಿರಿ ಎಂದು ಪೇತ್ರನು ತನ್ನ ಓದುಗರಿಗೆ ಹೇಳಿದ್ದಾನೆ. ಕ್ರೈಸ್ತರು ಒಬ್ಬರಿಗೊಬ್ಬರು ಕೊಟ್ಟಾಗ ಅವರು ದೇವರಿಗೆ ಕೊಡುವವರಾಗಿರುತ್ತಾರೆ. ಅವುಗಳು ಸಿಟ್ಟಿನಿಂದ ಗೊಣಗುವಿಕೆಯಿಂದ ಬಂದಾಗ ದೇವರು ನಮ್ಮ ಕಾಣಿಕೆಯನ್ನು ಬಯಸುವನು.

ಉಚಿತವಾಗಿ ಕೊಡಲು ಸಮರ್ಥವಿದ್ದವುಗಳು ಶ್ರೀಮಂತರಿಗೆ ಮೀಸಲಿಟ್ಟ ಕೃಪೆಯು ಅಲ್ಲ. ಬಡವರೂ ಕೂಡಾ ಉದಾರವಾಗಿ ಉಚಿತವಾಗಿ ಕೊಡಬಲ್ಲರು (2 ಕೊರಿಂಥ 8:1, 2).

**ವಚನ 10.** ಪೌಲನಂತೆ (ರೋಮಾಪುರ 12:6-8; 1 ಕೊರಿಂಥ 12:7-11; ಎಫೆಸ 4:11), ವಿಶ್ವಾಸಿಗಳು ದೇವರಿಂದ ಪಡೆದ ವಿವಿಧ ವರಗಳನ್ನು ನೆನಪಿಸುವ ಸಂದರ್ಭವನ್ನು ಪೇತ್ರನು ಕಂಡುಕೊಳ್ಳುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ *charisma* ಪಡೆದಿದ್ದು ಅದನ್ನು ಅಪೊಸ್ತಲನು **ಕೃಪವರವನ್ನು** ಎಂದು ಕರೆಯತ್ತಾನೆ. ಇದೇ ಪದವನ್ನು ಪೌಲನು 1 ಕೊರಿಂಥ 12:4ರಲ್ಲಿ ಪರಿಶುದ್ಧಾತ್ಮನ ಗುಣಲಕ್ಷಣಗಳ ವರಗಳಿಗೆ ಹೆಸರಿಸಿದ್ದಾನೆ. ರೋಗಿಗಳನ್ನು ವಾಸಿಮಾಡುವ, ಹಲವು ಬಗೆಯ ಅಧ್ಭುತಕಾರ್ಯಗಳ ರೀತಿಯನ್ನು ಮತ್ತು ಸಾಮಾನ್ಯ ಅರ್ಥದ ಮೂಲಕ ಕಲಿಯದೇ ಇರುವ ಭಾಷೆಗಳನ್ನು ಮಾತನಾಡುವ ವರಗಳನ್ನು ಕ್ರೈಸ್ತರು ಹೊಂದಿದ್ದಾರೆ. ಪೌಲನನ್ನು ಬಿಟ್ಟು ಪೇತ್ರನು ಪರಿಶುದ್ಧಾತ್ಮನ ಬಗ್ಗೆ ಯಾವ ಸೂಚನೆಯನ್ನು ಮಾಡಿಲ್ಲ. ರೋಮಾಪುರ 12:6ರಲ್ಲಿ, ಪೌಲನು ಪರಿಶುದ್ಧಾತ್ಮನಿಗೆ ಆಧಾರಿಸುತ್ತಾ ಅದೇ ತರದ ಪದವನ್ನು ಬಳಸಿದನು. ಇತರವುಗಳು ಅಂದರೆ ಸೇವೆಮಾಡುವದು ಮತ್ತು ಬೋಧಿಸುವದು ಸ್ವಾಭಾವಿಕವಾದ ಹುಟ್ಟುಗುಣಗಳು ಆಗಿ ಕಂಡುಬರುವಾಗ ರೋಮಾ 12:6-8ರಲ್ಲಿನ ಕೆಲ ವರಗಳು ಪ್ರವಾದನೆಯಂತವು ಅದ್ವಿತಿಯವಾದವು ಆಗಿರುತ್ತವೆ. ನಮ್ಮ ಮುಂದಿರುವ ಪರಿಚ್ಛೇದದಲ್ಲಿ ಒಬ್ಬನ ವರವು ಸ್ವಾಭಾವಿಕವಾದ ಹುಟ್ಟುಗುಣಗಳು ಆಗಿ ಕಂಡುಬರುವಾಗದ. ಮಾತನಾಡುವದು ಅಥವಾ ಸೇವೆಮಾಡುವದು ಈ ಪ್ರಕರಣದಲ್ಲಿ ಇವೆ. **ಪ್ರತಿಯೊಬ್ಬನು ತಾನು ಹೊಂದಿದ** ಎಂಬ ಪದಗಳಿಂದ ಆತನು ಸೂಚಿಸಿದಂತಹ ಆ ಎರಡು ವರಗಳು ಆತನ ಓದುಗರು ಹೊಂದಿದ ವಿವಿಧ ಸಾಮರ್ಥ್ಯಗಳನ್ನು ಪ್ರತಿನಿಧಿಸುವಂತವು ಎಂದು ಅಪೊಸ್ತಲನು ಸೂಚಿಸುತ್ತಾನೆ.

ಪೇತ್ರನಾಗಲೀ ಅಥವಾ ಪೌಲನಾಗಲೀ ಸ್ವಾಭಾವಿಕ ಹುಟ್ಟುಗುಣವನ್ನು ಮತ್ತು ಪರಿಶುದ್ಧಾತ್ಮನಿಂದ ಕೊಡಲ್ಪಟ್ಟ ಅದ್ವಿತೀಯ ಗುಣಗಳ ಮಧ್ಯ ಸರಳವಾಗಿ ಭಿನ್ನತೆಯ ಬೇಧವನ್ನು ಎಳೆ ದಿರುವದು ಅಸಂಭವನೀಯವಾದದ್ದಾಗಿದೆ. ವರಗಳನ್ನು ಬಳಸುವದು ಒಬ್ಬನ ಜವಾಬ್ದಾರಿ ಎಂದು ಬಂದಾಗ ನಿಶ್ಚಿತವಾಗಿ ಅಲ್ಲಿ ಯಾವುದೇ ಭಿನ್ನತೆಯು ಇರುವದಿಲ್ಲ. ಒಬ್ಬನು ಎಂಥದೇ ಸಾಮರ್ಥ್ಯವನ್ನು ಹೊಂದಿರಲಿ, ಅವುಗಳು ದೇವರಿಂದ ಒದಗಿಸಲ್ಪಟ್ಟವು ಮತ್ತು ದೇವರ ಮಹಿಮೆಗಾಗಿ ಬಳಸಲ್ಪಟ್ಟವು ಆಗಿವೆ. ದೇವರ ಮಹಿಮೆಗಾಗಿ ಅವುಗಳನ್ನು ಬಳಸುವದಕ್ಕಾಗಿ ಅವುಗಳನ್ನು ಬಳಸುವದನ್ನು **ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ** ಎಂದು ಪೇತ್ರನು ಹೇಳುತ್ತಾನೆ. ತನ್ನ ವರಗಳನ್ನು "ಪ್ರತಿಯೊಬ್ಬನು ಪಡೆದಾಗ" ಆತನು ಅದನ್ನು ಬಳಸಿಕೊಳ್ಳಬೇಕು. ಆತನಿಗೆ ಅದು ಉಚಿತವಾಗಿ ಪಡೆದಿರುವಂತೆಯೇ ಆತನೂ ಕೂಡಾ ಯೇಸುವು ಕಲಿಸಿದ ಹಾಗೆಯೇ ಉಚಿತವಾಗಿ ಕೊಡಬೇಕು (ಮತ್ತಾಯ 10:8).

ಸ್ವಾಭಾವಿಕವಾದ ಸಾಮರ್ಥ್ಯಗಳು ದೇವರಿಂದ ಕ್ರೈಸ್ತರಿಗೆ ವಹಿಸಿಕೊಟ್ಟಿರುವದರಿಂದ, ಅವರು **ಒಳ್ಳೆಯ ಮನೆವಾರ್ತೆಯವರು** ಎಂದು ಪೇತ್ರನು ಹೇಳುತ್ತಾನೆ. ಲೂಕ 16:1-9ರಲ್ಲಿ ಯೇಸು ದೊಡ್ಡ ಜವಾಬ್ದಾರಿಯುತ ವ್ಯವಹಾರಕ್ಕೆ ನಿಯೋಜಿಸಲ್ಪಟ್ಟ ಮನೆವಾರ್ತೆಯವನನ್ನು ("manager") (NASB) ಹೊಂದಿದ ಶ್ರೀಮಂತನ ಸಾಮನ್ಯವನ್ನು ಹೇಳಿದನು. ಗ್ರೀಕ್ ಪದವಾದ *oikonomos,* ಲೂಕದಲ್ಲಿರುವಂತೆ ಮನೆವಾರ್ತೆಯವನು ("manager") ಎಂದು ಭಾಷಾಂತರವಾಗಿದ್ದು 1 ಪೇತ್ರನಲ್ಲಿ "steward" ಎಂದಿದೆ. ಮನೆವಾರ್ತೆಯವನು (ಸಾಮಾನ್ಯಾಗಿ ದಾಸನು) ಶ್ರೀಮಂತ ಮನುಷ್ಯನ ಎಲ್ಲಾ ಆಸ್ತಿಯನ್ನು ನೋಡಿಕೊಳ್ಳುವವನಾಗಿದ್ದನು. ಮನೆವಾರ್ತೆಯನು ನೋಡಿಕೊಳ್ಳುವವನು ಆಗಿದ್ದನು ಆದರೆ ಈ ಪದವು ಹೊಣೆಗಾರಿಕೆಯನ್ನೂ ಸಹ ಸೂಚಿಸುವುದಾಗಿದೆ. ತನ್ನ ಓದುಗರು "ಒಳ್ಳೆಯ ಮನೆವಾರ್ತೆ" ಯವರಾಗಿರಬೇಕೆಂದು ಪೇತ್ರನು ಬಯಸುತ್ತಿದ್ದನು. ಅವನು ಸುಪರ್ದಿಯಲ್ಲಿರುವ ಸಂಗತಿಗಳನ್ನು ಜವಾಬ್ದಾರಿಯಿಂದ ನೋಡಿಕೊಳ್ಳಬೇಕೆಂದು

ಆತನು ಬಯಸುವವನಾಗಿದ್ದನು. ಅವರಲ್ಲಿ ವಿಶ್ವಾಸವಿಡುವಂಥ ಸ್ವಾಭಾವಿಕವಾದ ಗುಣಗಳನ್ನು ದೇವರು ಕ್ರೈಸ್ತರಿಗೆ ವಹಿಸಿದ್ದಾನೆ. ಅವರು ಅವರಿಗೆ ವಹಿಸಿದ್ದನ್ನು ಬಳಸುವ ರೀತಿಯಿಂದ ಅವರು ದೇವರಿಗೆ ಜವಾಬ್ದಾರರಾಗಿದ್ದಾರೆ. ತಮ್ಮ ವರಗಳನ್ನು ಜಾಣತನದಿಂದ ಬಳಸಬೇಕೆಂದು ಅಪೊಸ್ತಲನು ತನ್ನ ಓದುಗರಿಗೆ ಪ್ರಬೋಧಿಸುವವನಾಗಿದ್ದಾನೆ.

ಸ್ವಾಭಾವಿಕ ಹುಟ್ಟುಗುಣಗಳನ್ನು ಒಟ್ಟಾಗಿ ಕ್ರೈಸ್ತರ **ದೇವರ ವಿವಿಧ ಕೃಪೆಯ ವಿಷಯ** ಎಂದು ಪೇತ್ರನು ಕರೆದಿರುವದು ಕುತೂಹಲಕಾರಿಯಾದದ್ದಾಗಿದೆ. ‘‘ಕೃಪೆ’’ಯು ಮನುಕುಲಕ್ಕೆ ದೇವರು ಕೊಟ್ಟಂಥ ಆತನ ಒಳ್ಳೆಯ ವರಗಳ ವಿವಿಧ ಮಾರ್ಗಗಳಿದೆ ಇದು ಆಶ್ರಯದಂತಿರುವ ಪದವಾಗಿದೆ. ಪೌಲನಿಗೆ ಕೃಪೆಯೆಂದರೆ ರಕ್ಷಣೆಯು ತೋರಿಬಂದಂಥದ್ದರ ಮೂಲಕವೇ ಆಗಿದೆ (ಎಫೆಸ 2:8). ಯೇಸುವಿನ ಪ್ರಕಟಿಸಿಕೊಳ್ಳುವಿಕೆಯು ದೇವರ ಕೃಪೆಗೆ ಇರುವ ಇನ್ನೊಂದು ಅರಿತುಕೊಳ್ಳುವಿಕೆ ಎಂದು ಪೇತ್ರನು ಹೇಳುತ್ತಾನೆ (1:13). ಕರ್ತನು ಮರಳುವವರೆಗೆ ದೇವರ ಕೃಪೆಯು ಆತನು ತನ್ನ ಜನರ ಒಳ್ಳೆಯದಕ್ಕಾಗಿ ಬಳಸುವ ಆಶೀರ್ವಾದಗಳ ವ್ಯೂಹವನ್ನು ವಿಸ್ತೃತವಾಗಿ ಅರಿತುಕೊಳ್ಳಬೇಕು. ಒಬ್ಬನು ದೇವರ ವಾಕ್ಯಗಳನ್ನು ಮಾತನಾಡುವಾಗ ಅಥವಾ ತನ್ನ ನೆರೆಯರಿಗೆ ಸೇವೆಯನ್ನು ಮಾಡುವಾಗ, ದೇವರ ಕೃಪಾಯುತವಾದ ವರಗಳ ಜವಾಬ್ದಾರಿಯನ್ನು ಆತನು ಅನುಭವಿಸುವವನೂ ಮತ್ತು ಬಳಸುವವನೂ ಆಗಿದ್ದಾನೆ. ಪೇತ್ರನು ಸಭೆಯನ್ನು ದೇಹದ ಹಾಗೆ ವಿವರಣೆಯನ್ನು ಅಭಿವೃದ್ಧಿಪಡಿಸಿಕೊಂಡ ಹಾಗೆ ಪ್ರತಿಯೊಬ್ಬ ಸದಸ್ಯರು ದೇಹದ ಅಂಗಗಳಂತೆ ಸಂತೋಷಪಡುತ್ತಿರುವಾಗ, ಇದು ಬಹುಶಃ ಸಂಭವಿಸಬಹುದು. ವರಗಳು ವಿವಿಧವಾಗಿವೆ. ಇನ್ನೊಬ್ಬನಿಂದ ವರಗಳು ಆನಂದಿಸಲ್ಪಡುವಾಗ ಯಾವುದೇ ಕ್ರೈಸ್ತನನ್ನು ದ್ವೇಷಿಸಬಾರದು, ಅಥವಾ ತುಚ್ಛವಾಗಿ ಕಾಣಬಾರದು.

**ವಚನ 11. ಒಬ್ಬನು ಬೋಧಿಸುವವನಾದರೆ** ಎಂದು ಪೇತ್ರನು ಬರೆಯುವಾಗ, ದೇವರ ಕುಟುಂಬದಲ್ಲಿ ಬೋಧಿಸುವ ವಿಶೇಷ ಸಭೆಯು ಅಲ್ಲಿತ್ತು ಎಂದು ಇದು ಸೂಚಿಸುವುದಾಗಿದೆ. ಅನೇಕ ಜನರು ಬೋಧಿಸುವ ಯೋಗ್ಯತೆಯನ್ನು ಹೊಂದಿರುತ್ತಾರೆ. ಆದರೆ ಸಭೆಯಲ್ಲಿ ಯೋಗ್ಯವಾದ ಬೋಧನೆಯೊಡನೆ ಸೇವೆಮಾಡಲು ಪ್ರತಿಯೊಬ್ಬರೂ ಸಮರ್ಥರಾಗಿರುವುದಿಲ್ಲ (ನೋಡಿರಿ ಯಾಕೋಬ 3:1). ಹಿಂದಿನ ವಚನದಲ್ಲಿ, ಕ್ರೈಸ್ತರ ವರಗಳು ಭಿನ್ನವಾಗಿರುತ್ತದೆ ಎಂದು ಅಪೊಸ್ತಲನು ಸ್ಪಷ್ಟಮಾಡಿದ್ದಾನೆ. ಒಬ್ಬನು ಸ್ವಾಭಾವಿಕವಾದ ಬೋಧಿಸುವ ವರವನ್ನು ಹೊಂದಿದ್ದಾದರೆ, ಆತನು ಅದನ್ನು ಬಳಸಲೇಬೇಕು. ಬೋಧಿಸುವದನ್ನು ಬಹುಶಃ ಪೇತ್ರನ ಮನದಲ್ಲಿ ಹೊಂದಿದ್ದು ಅದು ದೇವರ ವಾಕ್ಯಗಳ ಸಾರ್ವಜನಿಕವಾಗಿ ಘೋಷಣೆಯು ಆಗಿದವೆ. ಸಭೆಯು ಕೂಡುವ ಮೊದಲೇ ಘೋಷಣೆಮಾಡುವದು ಬಹುಶಃ ಆತನ ಮನದಲ್ಲಿ ಇದ್ದಿರಬಹುದು. ಆ ರೀತಿಯ ಬೋಧಿಸುವ ಸಾಹಸವು **ದೈವೋಕ್ತಿಗಳನ್ನು ನುಡಿಯುವ** ನುಡಿಯುವ ಜೊತೆಗೂಡಿಸುವ ಜವಾಬ್ದಾರಿಯನ್ನು ಅರಿತುಕೊಳ್ಳುವುದಾಗಿದೆ.

“ಹೇಳಿಕೆಗಳು” *(logia)* ಎಂಬ ಪದವು ಸಾಮಾನ್ಯವಾಗಿ ದೇವರಿಂದ ಬಂದವುಗಳನ್ನು ಸೂಚಿಸುವವು ಆಗಿರುತ್ತವೆ. ಅಪೊಸ್ತಲರ ಕೃತ್ಯಗಳು 7:38 ಮತ್ತು ರೋಮಾಪುರ 3:2ರಲ್ಲಿ, ಆ ಪದವು ಹಳೆ ಒಡಂಬಡಿಕೆಯ ಬಳಿಕೆಯಾಗಿದೆ. ಆ ಪದಗಳು ಸಭೆಯ ಮುಂದೆ ಬೋಧಕರು ಇಡುವಂತವುಗಳು ಅಲ್ಲ, ಸಹಜವಾಗಿ, ಬೈಬಲಿನನ ಪದಗಳು ಅಧಿಕಾರದಲ್ಲಿ ಮತ್ತು ಶಕ್ತಿಯಲ್ಲಿ ಸಮವಾಗಿವೆ. ಹೇಗೋ, ಕ್ರಿಸ್ತೀಯ ಶಿಕ್ಷಕರು ಮತ್ತು ಸುವಾರ್ತಿಕರು ಮಾತುಗಳ ವ್ಯಾಪ್ತಿಯಂತೆ ಇವುಗಳು ದೇವರ ಪ್ರಕಟಿಸಿಕೊಳ್ಳುವಿಕೆಯಿಂದ ಎಳೆದುಕೊಂಡವು ಆಗಿದ್ದು ಅವುಗಳು ಪ್ರಕಟನೆಯ ಗುಣಗಳಲ್ಲಿ ತಾನೇ ಹಂಚಿಕೊಳ್ಳುವವು ಆಗಿವೆ. ಕ್ರಿಸ್ತೀಯ ಬೋಧಕರು ತಮ್ಮ ಜವಾಬ್ದಾರಿಯ ಗುರುತಿಸಿಕೊಳ್ಳಬೇಕೆಂದು ಒತ್ತಾಯಿಸುವವನಾಗಿದ್ದಾನೆ. ಅವರು ಮಾತನಾಡುವಾಗ ಅವರು ಕಾಳಜಿಯನ್ನು ಬಳಸುವವರಾಗಿರಬೇಕು ಇದರಿಂದ ಅವರ ಮಾತುಗಳು ಅಪೊಸ್ತಲಿಕ ಸಂದೇಶದಲ್ಲಿ ಒಂದಾಗಿ ಸಭೆಯನ್ನು ಕಟ್ಟಬೇಕೆಂದು

ಆತನು ಬಯಸುವವನಾಗಿದ್ದಾನೆ.

ದೇಹವನ್ನು ಕಟ್ಟುವ ಕಾರ್ಯಮಾಡುವದಕ್ಕಾಗಿ ಕ್ರಿಸ್ತನು ಹೊಂದಿರುವ ವರಗಳು ಪೇತ್ರನಿಗಿಂತ ಹೆಚ್ಚು ಪೌಲನ ಪಟ್ಟಿಯಲ್ಲಿ ಹೆಚ್ಚು ವಿವರವಾಗಿ ಇವೆ. ಪೇತ್ರನು ಕೇವಲ ಬೋಧಿಸುವದು ಮತ್ತು ಸೇವೆಮಾಡುವದು ಎಂದು ಎರಡು ದೊಡ್ಡ ತಲೆಬರಹಗಳನ್ನು ಮಾತ್ರ ಸೂಚಿಸಿದ್ದಾನೆ. ಪ್ರತಿಯೊಂದರ ಕೆಳಭಾಗದಲ್ಲಿ, ಹೇಗೋ, ಆ ವರಗಳು ಪ್ರಕಟವಾಗಬಹುದಾದ ಬಹು ವಿಧವಾದ ನಿರ್ಧಿಷ್ಟಮಾರ್ಗಗಳು ಬರಬಹುದು. ಬೋಧಿಸುವದು ಸಾರ್ವಜನಿಕ ಅಥವಾ ಖಾಸಗಿಯಾದ ಬೋಧನೆ, ಪ್ರಬೋಧಿಸುವದು, ಪ್ರೋತ್ಸಾಹ, ಪ್ರಾರ್ಥನೆ, ಮತ್ತು ಬಹುಶಃ ಹಾಡುವದನ್ನು ಕೂಡಾ ಒಳಗೊಂಡಿರಬಹುದು. **ಒಬ್ಬನು ಸೇವೆಮಾಡುವವನಾದರೆ ದೇವರಿಂದ ಶಕ್ತಿಯನ್ನು** ಸೇವೆಮಾಡುವವನಾದರೆ ದೇವರಿಂದ ಶಕ್ತಿಯನ್ನು ಹೊಂದಿದವನಾಗಿ ಮಾಡಲಿ. ಎಂದು ಅಪೊಸ್ತಲನು ಬರೆಯುತ್ತಾನೆ. ಕೊಡುವದು ಮತ್ತು ಕರುಣೆಯನ್ನು ತೋರಿಸುವದು ಇಂಥ ಸಂಗತಿಗಳಲ್ಲಿ ಪೌಲನು ಸರಳವಾಗಿ ಹೇಳುತ್ತಾನೆ (ರೋಮಾಪುರ 12:8) ಆದರೆ ಸೇವೆಮಾಡುವದು ಕ್ರಿಸ್ತನನ್ನು ಒಬ್ಬನು ಅನುಕರಿಸಬಹುದಾದ ದೊಡ್ಡ ವಿವಿಧ ಸಂಗತಿಗಳನ್ನು ಒಳಗೊಂಡಿದೆ. ಮತ್ತಾಯ 25:31-46ರಲ್ಲಿ ದೊಡ್ಡ ನ್ಯಾಯತೀರ್ಪನ್ನು ಯೇಸುವು ಮುಂದಿಟ್ಟಾಗ, ಆತನು ಹಸಿದವರಿಗೆ ಊಣಬಡಿಸಿದ್ದನ್ನು ರೋಗಿಗಳಿಗೆ ಸ್ವಸ್ಥಮಾಡಿದ್ದನ್ನು ಬಟ್ಟೆಯಿಲ್ಲದವರಿಗೆ ಬಟ್ಟೆಕೊಟ್ಟಿದ್ದನ್ನು ಸೂಚಿಸಿದನು. ಸೇವೆಯು ನೆಲವನ್ನು ಗುಡಿಸಿದ ಹಾಗೆ ಅಥವಾ ಅತ್ಯದ್ಭುತವಾದ ಮರಣದ ಶೈಲಿಯಲ್ಲಿ ಸಾಯಿತ್ತಿರುವಂಥ ಲೌಕಿಕವಾದಂಥ ಸೇವೆಗಳು ಆಗಿರಬಹುದು.

ಒಬ್ಬನು ಏನೇ ಮಾಡಲಿ, ಬೋಧನೆಯಾಗಲಿ ಅಥವಾ ಸೇವೆಮಾಡುವುದಾಗಲಿ, ದೇವರ ಮಹಿಮಾಯುತವಾದ ಕೊಡುವಿಕೆಯಲ್ಲಿ ತನ್ನ ಸೇವೆಯ ಮೂಲವನ್ನು ಆತನು ಕಂಡುಕೊಳ್ಳುತ್ತಾನೆ. ಆತನ ಬೋಧನೆಯು ದೇವರ ಸಂದೇಶದ ಪ್ರಕಾರ ಇರುತ್ತದೆ; ಆತನ ಸೇವೆಯು "ದೇವರು ಒದಗಿಸುವ ಶಕ್ತಿಯ ಮೂಲಕ" ಆತನ ಸೇವೆಯು ಇರುವದು. ದೇವರು ತನ್ನ ಜನರಿಗೆ ಕೇವಲ ಆಜ್ಞೆಮಾಡುವದಿಲ್ಲ. ಆತನು ಅವರಿಗೆ ಶಕ್ತರನ್ನಾಗಿ ಮಾಡುವವನಾಗಿದ್ದಾನೆ. ದೇವರು ಬಲವನ್ನು ಕೊಡುತ್ತಾನೆ. ಇನ್ನೊಂದೆಡೆಯಲ್ಲಿ ಪೌಲನು "ಬಡವನಾಗಿರಲು ಬಲ್ಲೆನು, ಸಮೃದ್ಧಿಯುಳ್ಳವನಾಗಿರಲೂ ಬಲ್ಲೆನು. ನಾನು ತೃಪ್ತನಾಗಿದ್ದರೂ ಹಸಿದವನಾಗಿದ್ದರೂ ಸಮೃದ್ಧಿಯುಳ್ಳವನಾದರೂ ಕೊರತೆಯುಳ್ಳವನಾದರೂ ಯಾವ ತರದ ಸ್ಥಿತಿಯಲ್ಲಿರುವವನಾದರೂ ಅದರ ಗುಟ್ಟುನನಗೆ ತಿಳಿದದೆ. ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" ಎಂದು ಬರೆಯುತ್ತಾನೆ (ಫಿಲಿಪ್ಪಿ 4:12, 13). ವಿಶ್ವಾಸಿಯು ಆನಂದಿಸುವಂತಹ ವರಗಳು ಆತನ ಸ್ವಂತದ ಮಹಿಮೆಯಾಗಿ ಅಲ್ಲ. ಒಬ್ಬನ ದೇವರ ಮಾತುಗಳನ್ನು ಮಾತನಾಡುವಾಗ ಮತ್ತು "ದೇವರು ಒದಗಿಸುವಂಥ ಶಕ್ತಿಯ" ಜೊತೆ ಆತನು ಸೇವೆಮಾಡುವಾಗ ಅದರ ಪರಿಣಾಮವು **ಇದರಿಂದ ಎಲ್ಲಾದರಲ್ಲಿ ಯೇಸು ಕ್ರಿಸ್ತನ ಮೂಲಕರ ದೇವರಿಗೆ ಸ್ತೋತ್ರ ಉಂಟಾಗುವದು** ಆಗಿರುತ್ತದೆ. ಆತನ ಮಗನ ಮೂಲಕ ಮಾಡದ ಹೊರತು ಕೊಡಲ್ಪಡುವವುಗಳಲ್ಲಿ ಯಾವುದೇ ಸ್ತೋತ್ರವು ಇರುವುದಿಲ್ಲ. ಮಹಿಮೆಯು ಇಲ್ಲ. "ನನ್ನ ಮೂಲಕವಾಗಿಯೇ ಹೊರತು ಯಾರು ತಂದೆಯ ಬಳಿಗೆ ಬರುವದಿಲ್ಲ" ಎಂದು ಯೇಸು ಹೇಳಿದ್ದಾನೆ (ಯೋಹಾನ 14:6; ಅಪೊಸ್ತಲರ ಕೃತ್ಯಗಳು 4:12).

ಪೇತ್ರನು ತನ್ನ ಪತ್ರದ ಈ ಭಾಗವನ್ನು ಅಂತ್ಯಾಶೀರ್ವಾದದ ಜೊತೆ ಮುಗಿಸುತ್ತಾ ಇದ್ದಾನೆ. ಪತ್ರದ ಮಧ್ಯದಲ್ಲಿ ಇಂಥಾಶೀರ್ವಾದವು ಸಿಕ್ಕುವದು ಅಪರೂಪವಾದದ್ದು, ಆದರೆ ಹಿಂದೆಂದೂ ಕಂಡಿಲ್ಲದೆ ಇರುವದು ಅಲ್ಲ. ಅಂತ್ಯಾಶೀರ್ವಾದಗಳು ಚಿಕ್ಕವು ಆಗಿದ್ದು ದೇವರಿಗೆ ಸ್ತೋತ್ರವನ್ನು ಅರ್ಪಿಸುವ ಆದರವನ್ನು ವ್ಯಕ್ತಪಡಿಸುವವು ಆಗಿರುತ್ತವೆ. ಹಲವು ಬಾರಿ ಅವುಗಳು ಉಚ್ಚರಿಸಿದ ಕ್ಷಣದ ಮೂಲಕ ಅಲ್ಪ ಸ್ವಯಂಪ್ರೇರಿತ ಶಕ್ತಿಯ ಹೊರಹೊಮ್ಮುವಿಕೆಯ ಸೃಷ್ಟಿಯಿಂದ

ವಿಲಿಸಲ್ಪಟ್ಟಂತೆ ಅವುಗಳು ಕಂಡುಬರುತ್ತವೆ. ಅವುಗಳು ಪರಿಗಣನಾತ್ಮಕ ವಿಲಿಖಿತಗಳಿಗೆ ಅನುವುಮಾಡಿಕೊಟ್ಟಾಗ, ಅವುಗಳು ದೇವರ ಮಹಿಮೆ, ಶಕ್ತಿ ಮತ್ತು ಮೌಲ್ಯದ ಮೇಲೆ ಕೇಂದ್ರಿಕರಿಸುವ ಗುಣವನ್ನು ಅವುಗಳು ಹಂಚಿಕೊಳ್ಳುವವು ಆಗಿವೆ. ಕೀರ್ತನೆಯಲ್ಲಿ ಅವುಗಳು ಸಾಮಾನ್ಯವಾಗಿ ಇವೆ, ಆದರೆ ಬೈಬಲಿನುದ್ದಕ್ಕೂ ಸಿಕ್ಕುವವು ಆಗಿವೆ. ಅಂತ್ಯಾಶೀರ್ವಾದಗಳು ಪತ್ರದ ಅಂತ್ಯದಲ್ಲಿ ನಿರ್ದಿಷ್ಟವಾಗಿ ಯೋಗ್ಯವಾದವು ಆಗಿದ್ದು, ಲೇಖಕನೊಬ್ಬನು ಇತಿಶ್ರೀ ಹಾಡಿದ ಹಾಗೆ (ರೋಮಾಪುರ 16:27; ಫಿಲಿಪ್ಪಿ 4:20; 1 ತಿಮೊಥೆ 6:15, 16; 1 ಪೇತ್ರ 5:11; 2 ಪೇತ್ರ 3:18; ಯೂದ 24, 25). ಹೇಗೋ, ಕೆಲಸಾರಿ ಲೇಖಕನು ತನ್ನ ಪತ್ರವನ್ನು ಮುಗಿಸುವ ಮುನ್ನ ಆತನಲ್ಲಿ ಸ್ತೋತ್ರವು ಉಕ್ಕಿ ಬರುವುದುಂಟು (ರೋಮಾಪುರ 11:36; ಎಫೆಸ 3:21). ಪೇತ್ರನು ಅಂತ್ಯಾಶೀರ್ವಾದವನ್ನು ತನ್ನ ಪತ್ರದ ಮಧ್ಯದಲ್ಲಿ ಹೊಂದಿರುವದು ಅದು ಅನೀಲಿಕ್ಷಿತವಾದದ್ದು ಆಗಿದ್ದು ಆದರೆ ಹಿಂದೆಂದೂ ಕಂಡಿರದ್ದು ಅಲ್ಲ. ಹೇಗೋ, ಈ ನಿರ್ಧಿಷ್ಟ ಸ್ಥಳದಲ್ಲಿ ಅಂತ್ಯಾಶೀರ್ವಾದದ ಇಡುವಿಕೆಯು 1 ಪೇತ್ರದ ಬಗ್ಗೆ ಎದ್ದಂಥ ಇನ್ನೊಂದು ಪ್ರಶ್ನೆಯನ್ನು ಎಬ್ಬಿಸುವುದಾಗಿದೆ.

ಪಿಲೀಕೆಯಲ್ಲಿ ನಾವು ಗಮನಿಸಿದಂತೆ, 1 ಪೇತ್ರನು ಅಪೊಸ್ತಲನಿಂದ ಇರುವ ಪತ್ರಕ್ಕಿಂತಲೂ ಹೆಚ್ಚಿನದಾಗಿದ್ದಂತಹ ಮೂಲವು ಆಗಿದೆ ಎಂದು ನಂಬುವವರು ಅಲ್ಲಿದ್ದಾರೆ. ಇದು ಪತ್ರವಿರುವದಕ್ಕಿಂತಲೂ ಮುಂಚೆ, ಈ ದಾಖಲೆಯು ದೀಕ್ಷಾಸ್ನಾನ ಹೊಂದುವುದನ್ನು ಬಯಸುವವರಿಗೆ ಅಥವಾ ಈಗ ತಾನೇ ದೀಕ್ಷಾಸ್ನಾನ ಹೊಂದಿದವರಿಗೆ ಸೂಚಿನೆಯ ಕೈಪಿಡಿ ಆಗಿದೆ ಎಂದು ಕೆಲವರು ಇದನ್ನು ಸಂದರ್ಭವನ್ನಾಗಿ ಮಾಡುವವರಾಗಿದ್ದಾರೆ. ಎರಡನೆಯ ಶತಮಾನದ ಸಭೆಯು ದೀಕ್ಷಾಸ್ನಾನದ ಕೈಪಿಡಿಯನ್ನು ನಂತರದ ಸಮಯದಲ್ಲಿ ಲಗತ್ತಿಸಲಾಗಿದೆ ಎಂದು ಈ ಸ್ಥಾನವನ್ನು ಕಾಪಾಡುವವರು ಒತ್ತಾಯಿಸುವವರಾಗಿದ್ದಾರೆ. ಒಂದು ವೇಳೆ ಇದು ಹೀಗೆ ಆಗಿದ್ದಾದರೆ, ನಾವು ದಾಖಲೆ ಎಂದು ಕರೆಯುವ 1 ಪೇತ್ರ ಮೂಲತಃ ಎರಡು ಬೇರೆ ದಾಖಲೆಗಳಾಗಿ ಇರುವಂತೆ ಮೊದಲನೆಯದು ಪತ್ರರೂಪದಲ್ಲಿ ಸಪ್ಪೆಯಾಗಿ ತೆಗೆದುಕೊಂಡಂಥ ದೀಕ್ಷಾಸ್ನಾನದ ಅಭ್ಯಾರ್ಥಿಗಳಿಗೆ ಸೂಚನಾತ್ಮಕ ದಾಖಲೆಯಾಗಿದ್ದುಕೊಂಡಿದೆ (1:3-4:11), ಮತ್ತು ಎರಡನೆಯದು ಮೂಲವಾದ ಪತ್ರವಾಗಿ ಉಳಿದುಕೊಂಡಿದೆ (4:12-5:14). ಈ ತರದ ವಾದವು ದಾಖಲೆಯ ಯಾವುದೇ ಭಾಗವು ಅಪೊಸ್ತಲನಾದ ಪೇತ್ರನಿಂದಲೇ ಬರೆಯಲ್ಪಟ್ಟಿದೆ  ಎಂಬ ಪ್ರತಿಪಾದನೆಯನ್ನು ತಳ್ಳಿಹಾಕುವುದಾಗಿದೆ.

ಈ ವಿಷಯವನ್ನು ತಳ್ಳಿಹಾಕುವದಕ್ಕಾಗಿ ಅಲ್ಲಿ ಒಳ್ಳೆಯ ಕಾರಣಗಳು ಇವೆ. ಈ ಅಂಶದಲ್ಲಿನ ಅಂತ್ಯಾಶೀರ್ವಾದದ ಇರುವಿಕೆಯು ಈ ಪತ್ರದ ಐಕ್ಯತೆಯ ಬಗೆಗಿನ ಪ್ರಶ್ನೆಯನ್ನು ಪೇತ್ರನು ತೆಗೆದುಕೊಂಡಿದ್ದು ಇದು ಸ್ಪಷ್ಟವಾಗಿದ್ದಾಗಿದೆ. ಪತ್ರದ ಈ ಅಂಶಗಳನ್ನು ವಿವರಿಸಲು ಎರಡು ಭಿನ್ನವಾದ ದಾಖಲೆಗಳನ್ನು ಆಧಾರಸಹಿತವಾಗಿಸುವದು ಕ್ವಚಿತ್ತಾದ ಅವಶ್ಯಕತೆ ಆಗಿದೆ. ಸ್ತೋತ್ರವನ್ನು ಅಂತ್ಯಾಶೀರ್ವಾದದ ರೀತಿಯಲ್ಲಿ ಕೊಡುವ ಮೂಲಕ ಪೇತ್ರನು ತನ್ನ ಪ್ರೋತ್ಸಾಹವನ್ನು ಸೇರಿಸುವದರ ಮೂಲಕ ಬಹುಶಃ ಮಧ್ಯದಲ್ಲಿಯೇ ವಿರಾಮವನ್ನು ಕೊಟ್ಟಿರಬಹುದು. ಇಂಥ ಕಾರ್ಯವು ನಿಖರವಾಗಿ ಊಹೆಯನ್ನು ಮೀರಿದ್ದಲ್ಲ.

1 ಪೇತ್ರನು ಎರಡು ಬೇರೆ ದಾಖಲೆಗಳ ಮೂಲವಾಗಿದೆ ಎಂಬ ಕ್ರಾಂತಿಕಾರಿ ಪರಿಗಣನೆಯ ಮೂಲವಿಲ್ಲದೆ 4:11 ಮತ್ತು 4:12ರ ಮಧ್ಯದ ಪರಿಸ್ಥಿತಿಯ ಹಠಾತ್ತನೆಯ ಬದಲಾವಣೆಯನ್ನು ನಾವು ಗುರುತಿಸಬಹುದಾಗಿದೆ. ಈ ಅಂಶದಲ್ಲಿ ಅಪೊಸ್ತಲನು ಅಂತ್ಯಾಶೀರ್ವಾದವನ್ನು ಹಾಡುವ ಉದ್ದೇಶದ ಜೊತೆ ಬರೆದಿರಬಹುದು. ಮುಂದೆ ಸಿಕ್ಕಬಹುದಾದ ದೂತನ ಮೂಲಕ ಕಳುಹಿಸುವ ಉದ್ದೇಶದಿಂದ ಆತನು ಪತ್ರವನ್ನು ಆಚೆ ಇಟ್ಟಿರಬಹುದು. ಕೆಲದಿನಗಳು, ಬಹುಶಃ ಕೆಲವಾರಗಳು, ಅಲ್ಲಿ ಸಾಗಿಹೋಗಿರಬಹುದು. ಅದೇ ಸಮಯದಲ್ಲಿ, ಆ ಪತ್ರವನ್ನು ಆಚೆ ಇಟ್ಟಿರಬಹುದು. ಕೆಲದಿನಗಳು, ಬಹುಶಃ ಕೆಲವಾರಗಳು, ಅಲ್ಲಿ ಸಾಗಿಹೋಗಿರಬಹುದು.

ಅದೇ ಸಮಯದಲ್ಲಿ, ಆ ಪತ್ರವನ್ನು ಕಳುಹಿಸುವ ಅವಕಾಶಕ್ಕಿಂತಲೂ ಮುನ್ನ ತನ್ನ ಓದುಗರ ಬಾಧೆಪಡುತ್ತಿರುವ ಸ್ಥಿತಿಯ ಬಗೆಗಿನ ಮಾಹಿತಿಯನ್ನು ಪೇತ್ರನು ಹೊಂದಿರಬಹುದು. ಒಂದರಮೇಲೊಂದು, ರೋಮಾದಲ್ಲಿನ ಕ್ರೈಸ್ತರ ಅಮೂಲ್ಯ ಸ್ಥಿತಿಯು ಕೆಟ್ಟದ್ದಾಗಿ ಬದಲಾಯಿಸಿತು. ನಿರೋ ಕ್ರೈಸ್ತರನ್ನು ದ್ವೇಶಿಸುವ ಸೂಚನೆಗಳು ಅಥವಾ ಪೌಲನ ಮರಣದಂಡನೆ, ಆತನ ಓದುಗರ ಹಿಂಸೆಯು ಕೆಟ್ಟದ್ದಾಗಿ ಪರಿಣಮಿಸಿದೆ ಎಂದು ನಂಬುವುದಕ್ಕೆ ಪೇತ್ರನಿಗೆ ಕಾರಣಗಳನ್ನು ಕೊಡುವವು ಆದವು ಎಂದು Andrew F. Walls ರಿಂದ ಅಲ್ಲಿ ಸೂಚಿಸಲ್ಪಟ್ಟಿದೆ. ಅಪೊಸ್ತಲನು ಹೊಸ ಮಾಹಿತಿಗಾಗಿ ಅಥವಾ ಬೆಳವಣಿಗೆಗಾಗಿ ನಂತರದ ಸಮಯದಲ್ಲಿ ಕೂತುಕೊಂಡು 4:12-5:14 ಸೇರಿಸಿದ್ದಾದರೆ, ಇದು ಮುಂದಿರುವ ವಚನದಲ್ಲಿನ ಪ್ರತ್ಯಕ್ಷವಾಗಿರುವ ತ್ವರಿತತೆಯನ್ನು ಎಣಿಸುವುದಾಗಿದೆ.[10]

## ಅನ್ವಯ

### ದೃಷ್ಟಿಕೋನದ ಒಂದು ಅಂಶ (4:7-11)

ಸ್ಥಳೀಯ ಪ್ರಾಥಮಿಕ ಶಾಲೆಯ ಶಿಕ್ಷಕಿಯು ಒಂದು ದಿನ ತನ್ನ ಮನೆಯಿಂದ ಕೆಲಸಕ್ಕೆ ಹೋಗುತ್ತಿದ್ದಳು. ಅವಳ ಜೊತೆ ಐದು ವರ್ಷದ ಚಿಕ್ಕ ಬಾಲಕಿಯ ಜೊತೆಯಿದ್ದಳು. ಬದಿಯ ಮಾರ್ಗದಲ್ಲಿ ಒಂದೇ ರೀತಿಯಲ್ಲಿ ಜೋರಾಗಿ ಹೋಗುತ್ತಿದ್ದ ಒಂದು ವಾಹನವು ನಿಲ್ಲಿಸುವ ಚಿನ್ಹೆಯೆಡೆಗೆ ಓಡಿತು ಮತ್ತು ಅವಳಿಗೆ ಹೊಡೆಯಿತು. ಅಲ್ಲಿಯೇ ಅವಳು ಕೊಲ್ಲಲ್ಪಟ್ಟಳು. ಚಿಕ್ಕ ಬಾಲಕಿಯು ತುರ್ತು ಸ್ಥಿತಿಯಲ್ಲಿ ಆಸ್ಪತ್ರೆಗೆ ಒಯ್ಯಲ್ಪಟ್ಟಳು. ಕಾರು ನಿಲ್ಲಿಸುವ ಸೂಚನೆಯೆಡೆಗೆ ಓಡಿದ ಕಾರು ಹದಿನೆಂಟು ವರ್ಷದವನಿಂದ ಚಲಾಯಿಸಲ್ಪಡುತ್ತಿತ್ತು. ಆ ಕಾರಿನಲ್ಲಿ ಇನ್ನೂ ನಾಲ್ಕು ಜನ ಯೌವನಸ್ಥರಿದ್ದರು. ಅವರು ಮಧ್ಯಪಾನದಿಂದ ಮತ್ತರಾಗಿದ್ದನ್ನು ಪೋಲಿಸನು ಕಂಡುಕೊಂಡನು.

ದುಃಖ, ರೋಷ, ಗಲಿಬಿಲಿ, ಅಸಾಹಯಕತೆಯಿಂದ, ಸಿಟ್ಟಿನಂತಹ ಸಂಗತಿಗಳನ್ನು ಓದಿದಾಗ ನಮ್ಮಲ್ಲಿ ಅನೇಕರ ಭಾವನೆಗಳು ಪ್ರವಾಹವಾಗುವದು. ಈ ಮುಗ್ಧ ಸ್ತ್ರೀಯ ಅರ್ಥಹೀನ ಮರಣಕ್ಕೆ ಕಾರಣವಾದಂಥವರಿಗೆ, ಆ ಚಿಕ್ಕ ಬಾಲಕಿಗೆ ತಾಯಿಯಿಲ್ಲದಂತೆ ಮಾಡಿದವರಿಗೆ ನ್ಯಾಯವು ಸಿಕ್ಕುವದನ್ನು ಕಾಣುವದನ್ನು ನಾವು ಬಯಸುವವರಾಗಿದ್ದೇವೆ. ಬಹುಕಾಲದವರೆಗೆ ಅವರ ಸರಳಿನ ಹಿಂದಿರುವದಕ್ಕೆ ಅವರು ಯೋಗ್ಯರಾಗಿದ್ದಾರೆ.

ಈ ಅಪಘಾತದ ಕೆಲ ತಾಸುಗಳ ನಂತರ ಪಟ್ಟಣದ ಇನ್ನೊಂದೆಡೆ ಇನ್ನೊಂದು ಸಂಗತಿಯು ಸಂಭವಿಸಿತು. ಒಬ್ಬ ತಂದೆ ಮತ್ತು ತಾಯಿಗಳಿಬ್ಬರೂ ಬಾಗಿಲ ಮೇಲೆ ಬಡಿದಂಥ ಸದ್ದನ್ನು ಕೇಳಿದರು. ಅದು ಪೋಲಿಸನಾಗಿದ್ದನು. ಅವರ ಮಗ ಅಥವಾ ಮಗಳು ನಿಲ್ಲಿಸುವ ಚಿಹ್ನೆಯಲ್ಲಿ ವಾಹನ ಓಡಿಸಿದ್ದರು. ಅಲ್ಲಿ ಸಂಗತಿಗಳು ದುಖದಾಯಕವಾಗಿದ್ದವು. ಮಧ್ಯವು ಅಲ್ಲಿ ಒಳಗೊಂಡಿತು. ತರುಣಿಯಾದ ತಾಯಿ ಮರಣವನಪ್ಪಿದಳು.

ಅಪಘಾತವು ವಿಭಿನ್ನ ದೃಷ್ಟಿಕೋನದ ಮೇಲೆ ಆತುಕೊಂಡು ನೋಡಲ್ಪಡುತ್ತಿದೆ. ಈ ಮೂವರು ಜನರು ಈ ಘಟನೆಯನ್ನು ಹೇಗೆ ಪರಿಗಣಿಸುತ್ತಾರೆ ಊಹಿಸಿರಿ: (1) ಗಂಡನು ತನ್ನ ಹೆಂಡತಿ ಮತ್ತು ಚಿಕ್ಕ ಮಗಳು ಮನೆಗೆ ಬರುವದನ್ನು ಕಾಯುತ್ತಿದ್ದಾನೆ. (2) ತಮ್ಮ ಹದಿನೆಂಟು ವರ್ಷದ ಮಗನ ಕೈಗೆ ಕಾರಿನ ಕೀಲಿಯನ್ನು ಕೊಟ್ಟಂಥ ಪಾಲಕರು, (3) ಮುಂಜಾನೆಯ ವರ್ತಮಾನ ಪತ್ರಿಕೆಯಲ್ಲಿ ಕುತೂಹಲ ಆಗಂತನಾಗಿ ಅಪನಂಬಿಗಸ್ತನಂತೆ ಅಪಘಾತದ ಸುದ್ದಿಯನ್ನು ಓದುತ್ತಿರುವ ನಾವು ಅದೇ ತರದ ಘಟನೆಯು ಒಬ್ಬನು ಹೇಗೆ ಅದರಲ್ಲಿ ಒಳಗೊಳ್ಳುತ್ತಾನೋ ಅದರ ಮೇಲೆ ಭಿನ್ನವಾಗಿ ನೋಡಲ್ಪಡುತ್ತದೆ.

1 ಪೇತ್ರ 4:7-11ರಲ್ಲಿ, ದೃಷ್ಟಿಕೋನದ ಬಗ್ಗೆ ಅಪೊಸ್ತಲನ ಸಂದೇಶವು ಇರುವುದಾಗಿದೆ. ಪೇತ್ರನ ಮೊದಲ ಓದುಗರು ದೊಡ್ಡ ಸಂಗತಿಯನ್ನು ಸಹಿಸಿಕೊಳ್ಳುತ್ತಿದ್ದಾರೆ. ಹಿಂದಿನ ಸ್ನೇಹಿತರು ಮತ್ತು ನೆರೆಯವರು ಕ್ರಿಸ್ತನನ್ನು ತಮ್ಮ ರಕ್ಷಕನೆಂದು ಅರಿಕೆಮಾಡಿಕೊಂಡ ಮೇಲೆ

ಅದ್ಭುತವಾದ ಜೀವಿತವನ್ನು ಮಾಡಿಕೊಂಡರು. ಅವರ ಸ್ನೇಹಿತ ಅರಿತುಕೊಳ್ಳಲಿಲ್ಲ. ಮೊದಲು, ಅವರು ಕೋಪಗೊಂಡರು, ನಂತರ ಅವರು ಪಾಲೀಸ್ತಿನ ಯೆಹೋದ್ಯಲಿಂದ ಪಲಿಚಯಿಸಲ್ಪಟ್ಟ ಹೊಸ ದೇವರನ್ನು ಅಣುಕಿಸಿದರು. ಕ್ರೈಸ್ತರಿಗೆ ಜೀವಿತವನ್ನು ತಿರಸ್ಕರಣೀಯವಾಗಿ ಅವರು ಮಾಡಿದರು. ಅವರು ತಿಳಿದಿರುವದೆಲ್ಲವೂ ನಿಜವಾದದ್ದು ಎಂದು ಪೇತ್ರನು ಹೇಳುತ್ತಾ: "ತಾವು ಮಾಡುವ ಅಪರಿಮಿತವಾದ ಪಟಿಂಗತನದಲ್ಲಿ ನೀವು ಸೇರದೇ ಅವರು ಆಶ್ಚರ್ಯಪಟ್ಟು ನಿಮ್ಮನ್ನು ದೂಷಿಸುತ್ತಾರೆ" (1 ಪೇತ್ರ 4:4) ಎಂದನು.

ತಮ್ಮ ನೋವು ಮತ್ತು ತ್ಯಜಿಸುವಿಕೆಯನ್ನು ದೃಷ್ಟಿಕೋನದಲ್ಲಿ ಇಡಬೇಕೆಂದು ತನ್ನ ಓದುಗರಿಗೆ ಪೇತ್ರನು ಒತ್ತಾಯಿಸುವವನಾಗಿದ್ದಾನೆ. ಕ್ರೈಸ್ತರು ಪರಕೀಯತೆಯ ದೃಷ್ಟಿಕೋನದಿಂದ ಘಟನೆಯನ್ನು ನೋಡಬೇಕು. ಜಗತ್ತಿನ ಕಾಳಜಿ ಮತ್ತು ಪರಿಗಣಿಸುವಿಕೆಯು ಕ್ರೈಸ್ತರು ಇತರರಿಗೆ ಮಾಡುವದಕ್ಕಿಂತಲೂ ಅವರಿಗೆ ಭಿನ್ನವಾಗಿರುತ್ತದೆ. ಜಗತ್ತನ್ನು ಪ್ರೀತಿಸುವವರು ಈ ಕಾಲಕ್ಕೆ ಸಂಬಂಧಿಸಿದವರಾಗಿರುತ್ತಾರೆ; ಕ್ರೈಸ್ತರು ಕೇವಲ ಅದರ ಮೂಲಕ ಹಾದು ಹೋಗುವವರಾಗಿರುತ್ತಾರೆ. ಉಳಿದ ಮಾನವ ಕುಲವು ಏನನ್ನು ಬಯಸದು ಎಂದು ಅವರು ಬಲ್ಲವರಾಗಿದ್ದಾರೆ.

(1) *ಕ್ರಿಸ್ತೀಯ ದೃಷ್ಟಿಕೋನವು ಭಿನ್ನವಾದದ್ದು ಯಾಕೆಂದರೆ* "ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ" (1 ಪೇತ್ರ 4:7). ಸ್ವಲ್ಪ ದಿನ ಅಥವಾ ಇತರವು ಯಾವಾಗ ಎಂದು ನಮಗೆ ತಿಳಿಯದು, ಆದರೆ ಕರ್ತನು ಬರುತ್ತಾನೆ. "ಇದು ಬಲು ಅವಸರದ್ದಲ್ಲ. ನಾವು ನಮ್ಮ ಮನಸ್ಸನ್ನು ಬೇರೆಡೆ ಇರಿಸೋಣ ಮತ್ತು ನಮ್ಮ ಕಾರ್ಯಗಳತ್ತ ತಿರುಗೋಣ" ಎಂದು ಅಪೊಸ್ತಲನು ಬರೆದಿಲ್ಲ. ಕರ್ತನು ಮರಳಿ ಬರುತ್ತಾನೆ ಎಂಬ ನಂಬಿಕೆಗೂ ಮತ್ತು ಆತನ ಮರಳುವಿಕೆಯ ಸಾಮಾನ್ಯವಾದ ಒಪ್ಪಿಕೊಳ್ಳುವಿಕೆಗೂ ಮಧ್ಯ ದೊಡ್ಡ ಭಿನ್ನತೆಯು ಇದೆ. ಅಪೊಸ್ತಲನು ಮತ್ತು ಆತನ ಓದುಗರು ಮುನ್ನೋಡುವಿಕೆಯಲ್ಲಿ ಜೀವಿಸುತ್ತಿದ್ದಾರೆ. ಕರ್ತನ ಮರಳುವಿಕೆಯ ನಿರ್ಲಕ್ಷದತ್ತ ತಳ್ಳಿಬಿಡುವಂಥ ಸಹಜವಾದ ವಿಷಯವಲ್ಲ.

ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ ಎಂಬುದು ಹೊಸ ಒಡಂಬಡಿಕೆಯ ಲೇಖಕನ ಸಾಮಾನ್ಯ ದೃಷ್ಟಿಕೋನವಾಗಿದೆ: "ನೀವೂ ದೀರ್ಘಶಾಂತಿಯಿಂದಿರಿ, ನಿಮ್ಮ ಹೃದಯಗಳನ್ನು ಬಲಪಡಿಸಿಕೊಳ್ಳಿರಿ, ಕರ್ತನ ಪ್ರತ್ಯಕ್ಷತೆಯು ಹತ್ತಿರವಾಯಿತು" (ಯಾಕೋಬ 5:8). "ಆ ದಿನವಾದರೂ ಆ ಗಳಿಗೆಯಾದರೂ ನಿಮಗೆ ಗೊತ್ತಿಲ್ಲವಾದದ್ದರಿಂದ ಎಚ್ಚರವಾಗಿರ್ರಿ" (ಮತ್ತಾಯ 25:13). ಕರ್ತನ ಮರಳುವಿಕೆಯು ಅವರ ತಕ್ಷಣದ ಭವಿಷ್ಯವಾಗಿದೆ ಎಂದು ಕ್ರೈಸ್ತರು ನಂಬುವುದಾದರೆ, ಅವರು ಭಿನ್ನವಾಗಿಯೇ ಜೀವಿಸುವವರಾಗಿದ್ದಾರೆ, ಅದನ್ನೇ ಪೇತ್ರನು ಹೇಳುತ್ತಿರುವದು. ಕರ್ತನು ಮರಳಿಬರುವನು ಎಂದು ನಂಬುವದಕ್ಕೂ ಮತ್ತು ಆತನು ಬೇಗನೇ ಮರಳಿಬರುವನು ಎಂದು ನಂಬುವದಕ್ಕೂ ಮಧ್ಯ ಭಿನ್ನತೆಯು ಇದೆ.

ಎಲ್ಲಾ ಜನರು ಕರ್ತನ ಮರಳಿಬರುವಿಕೆಯನ್ನು ನಂಬಲಾರರು. ಅವರು ಬಲ್ಲಂತಹ ಐಹಿಕ ಲೋಕವು ಅಲ್ಲಿ ಎಲ್ಲವೂ ಆಗಿದೆ ಎಂದು ಕೆಲವರು ಬಲ್ಲವರಾಗಿರುತ್ತಾರೆ. ಕೆಲ ಲೌಕಿಕರು ವಿಷಯ ಮತ್ತು ನಡಿಗೆ ಇವೆಲ್ಲವೂ ವಿಶ್ವದಲ್ಲಿ ಇರುವವು ಆಗಿವೆ ಎಂದು ನಂಬುವವರಾಗಿದ್ದಾರೆ. ತಾವು ನಂಬುವುದರ ಮೂಲಕ ಅವರು ಸುಸಂಬದ್ಧವಾಗಿ ಅನುಸರಿಸಿದ್ದಾರೆ, ತಮ್ಮದೇ ಆದ ಅಸ್ಥಿತ್ವಕ್ಕೆ ಪ್ರತಿಕ್ರಯಿಸಲು ಎರಡು ದಾರಿಗಳ ಸಾಧ್ಯತೆಯನ್ನು ಕಂಡುಕೊಳ್ಳುತ್ತಾರೆ. (1) ಕೆಲ ಲೌಕೀಕರು ವ್ಯಾದಿಗ್ರಸ್ಥರಾಗಿರುತ್ತಾರೆ. ಜೀವನವು ಜಗತ್ತಿನ ತಮಾಷೆಯಾಗಿದೆ. ಒಬ್ಬನು ತನ್ನನ್ನು ತಾನು ಚಿಕ್ಕ ಸಂಗತಿಗಳಿಗಿಂತಲೂ ಹೆಚ್ಚಾಗಿ ತನ್ನ ಕೊರೆದುಕೊಂಡರೂ ಅದಕ್ಕೆ ಯಾವುದೇ ಅರ್ಥವಿಲ್ಲ. (2) ಇತರರು ನಿರಾಷಾವಾದಿಗಳು ಆಗಿರುತ್ತಾರೆ. ಅವರ ತತ್ವವೆಂದರೆ "ತಿನ್ನು ಕುಡು, ನಾಳೆ ನಾವು ಸಾಯುತ್ತೇವೆ" (1 ಕೊರಿಂಥ 15:32). ಎಷ್ಟರಮಟ್ಟಿಗೆ ನಾವು ಮೋಜನ್ನು ಹೊಂದಿದ್ದೇವೆ ಎಂಬುದರ ಮೇಲೆ ಜೀವನದ ಯಶಸ್ಸು ಅಳತೆಮಾಡಲ್ಪಡುತ್ತದೆ.

ಪೇತ್ರನು ವ್ಯಾದಿಗ್ರಸ್ತನಲ್ಲದಿದ್ದಾಲೂ ಆತನ ಜೀವಿತವು ಬಲು ಗಂಭೀರವಾಗಿದೆ;

ಕೆಲಸಕ್ಕೆ ಬಾರದ್ದಾಗಿದ್ದುಕೊಂಡು ಇದು ಸಂತೋಷಭರಿತವಾದದ್ದಾಗಿದೆ. ಕರ್ತನು ಲೋಕಕ್ಕೆ ನ್ಯಾಯತೀರ್ಪನ್ನು ನೀಡಲು ಬರುವವನಾಗಿದ್ದುದರಿಂದ, ಅಪೊಸ್ತಲನು "ಒಳ್ಳೆಯ ನ್ಯಾಯತೀರ್ಪಿಗಾಗಿ ಇರಿ" ಎಂದು ಹೇಳುತ್ತಾನೆ. ನಾವು ಏನನ್ನು ಹೇಳುತ್ತೇವೆ ಮತ್ತು ಮಾಡುತ್ತೇವೆ ಎಂಬುದರ ಬಗ್ಗೆ ಕಾಳಜಿಪೂರಕವಾಗಿ ಇರಬೇಕು. ಮಾನವನ ಆಯ್ಕೆಗಳು ಮತ್ತು ಕಾರ್ಯಗಳು ವಿಷಯವಾಗಿದೆ.

ಆದ್ದರಿಂದ ಕ್ರೈಸ್ತರು ಪ್ರಾರ್ಥಿಸಲೇಬೇಕು. ಯೆಹೂದ್ಯರು ಮತ್ತು ಮುಸ್ಲಿಮ್ ಇಬ್ಬರಲ್ಲೂ ದಿನದುದ್ದಕ್ಕೂ ಪ್ರಾರ್ಥನೆಯ ಸಮಯಗಳು ಹಂಚಿಹೋಗಿವೆ. ಮುಸ್ಲಿಮ್ ದೇಶಗಳಲ್ಲಿ, ಪ್ರಾರ್ಥನೆಗೆ ನಂಬಿಗಸ್ತರಾಗಿರುವದಕ್ಕೆ ವಾದಿಗಳ ಕೂಗಿನ ಕರೆಯನ್ನು ನೀವು ಕೇಳಬಹುದು. ಧ್ವನಿವರ್ಧಕಗಳಲ್ಲಿ ಧ್ವನಿಯು ಮಿನಾರುಗಳ ಮೇಲೆ ಬಂದು ಊರು ಮತ್ತು ಪಟ್ಟಣಗಳ ಉದ್ದಕ್ಕೂ ಹರಡುತ್ತದೆ. ಜನರು ಇದ್ದಲ್ಲೇ ತಡೆದು ತಮ್ಮ ಮೊಣಕಾಲುಗಳ ಮೇಲೆ ನಿಂತುಕೊಳ್ಳುತ್ತಾರೆ ಮತ್ತು ಪ್ರಾರ್ಥಿಸುತ್ತಾರೆ. ಕ್ರೈಸ್ತರು ಪ್ರಾರ್ಥನೆಗಾಗಿ ವಿಶೇಷವಾದ ಸಮಯವನ್ನು ಹೊಂದಿಲ್ಲ. ಕ್ರೈಸ್ತರ ಯೋಗ್ಯವಾದ ಪ್ರಾರ್ಥನಾ ಸಮಯವು ಎಲ್ಲಾ ಸಮಯವು ಆಗಿದೆ (ನೋಡಿರಿ 1 ಥೆಸಲೋನಿಕ 5:17). ಕರ್ತನ ಮರಳುವಿಕೆಯ ಬಗೆಗಿನ ಕ್ರಿಸ್ತೀಯ ದೃಷ್ಟಿಕೋನವು ವಿಶ್ವಾಸಿಗಳಿಗೆ ಪ್ರಾರ್ಥಿಸುವದನ್ನು ಕಲಿಸುವುದಾಗಿದೆ. ಜೀವನವು ಗಂಭೀರವಾಗಿರುವ ಕಾರಣ, ಎಲ್ಲವುಗಳ ಅಂತ್ಯವು ಸಮೀಪವಾಗಿರುವ ಕಾರಣ, ಯೇಸುವು ಪರಲೋಕವನ್ನು ಆಳಲುವವನಾಗಿರುವ ಕಾರಣ ಅವರು ಪ್ರಾರ್ಥಿಸುತ್ತಾರೆ.

(2) *ಕ್ರೈಸ್ತ ಪ್ರವಾಸಿಗರು ಕರ್ತನು ಬೇಗನೇ ಬರುವನೆಂದು ತಿಳಿದಿರುವದರ ಕಾರಣ,* ಅವರ ದೃಷ್ಟಿಕೋನವು ಒಬ್ಬರಲ್ಲಿ ಒಬ್ಬರ ಪ್ರೀತಿಯನ್ನು ಒಪ್ಪಿಕೊಳ್ಳುವ ಕೃಪೆಯನ್ನು ಕೊಡುವುದಾಗಿದೆ. "ಮೊಟ್ಟಮೊದಲು ನಿಮ್ಮನಿಮ್ಮೊಳಗೆ ಯಥಾರ್ಥವಾದ ಪ್ರೀತಿಯಿರಲಿ; ಪ್ರೀತಿಯು ಬಹುಪಾಪಗಳನ್ನು ಮುಚ್ಚುತ್ತದೆ" (1 ಪೇತ್ರ 4:8). ಯಾವುದೇ ವ್ಯವಹಾರವನ್ನು ಹೊಂದಿದ ಸಹೋದರನನ್ನು ಅಥವಾ ಸುಳ್ಳುಗಾರನನ್ನು ಅಥವಾ ಕಳ್ಳನನ್ನು ಕ್ರೈಸ್ತರು ಅಲಕ್ಷಿಸಬೇಕು ಎಂದು ಪೇತ್ರನು ಹೇಳುತ್ತಿಲ್ಲ. ಕ್ರೈಸ್ತರು ಒಬ್ಬರಿಗೊಬ್ಬರು ಹೊಣೆಗಾರರಾಗಿದ್ದಾರೆ. ಪೇತ್ರನ ಮಾತುಗಳು ಪಾಪಕ್ಕೆ ಪ್ರೇರಣೆಯು ಅಲ್ಲ. ಕ್ರೈಸ್ತರು ವಿಚಾರಹೀನ ಮಾತುಗಳಿಗೆ ಮತ್ತು ಹಗುರವಾದ ನಡತೆಗೆ ನೆವಕೊಡಬೇಕೆಂದು ಅಲ್ಲಿ ಯಾವ ಸೂಚನೆಯೂ ಇಲ್ಲ. ತನ್ನ ಪಾಪಗಳನ್ನು ಮುಚ್ಚುವಂತೆ ಇತರರನ್ನು ಸ್ವೀಕರಿಸಲು ಯಾರೋಬ್ಬರಿಗೂ ಹಕ್ಕು ಇಲ್ಲ.

ಪೇತ್ರನು ಹೇಳುವುದೇನೆಂದರೆ ಜನರು ಒಬ್ಬರನ್ನೊಬ್ಬರು ಪ್ರೀತಿಸುವಾಗ, ಪಾಪದ ಮೇಲಿನ ಅವರ ದೃಷ್ಟಿಕೋನವು ಸ್ವಾರ್ಥಕ್ಕೆ ಸಂಬಂಧಿಸಿದವರಿಂದ ಭಿನ್ನವಾಗಿರುತ್ತದೆ. ಕ್ರಿಸ್ತನಲ್ಲಿ ಸಹೋದರ ಮತ್ತು ಸಹೋದರಿಯರು ಒಬ್ಬರಿಗೊಬ್ಬರು ಉಪದೇಶವ ಕೊಡಲು ನಿರಾಕರಿಸುವವರಾಗಿದ್ದಾರೆ. ಬದಲಾಗಿ, ಪಾಪಿಯನ್ನು ಆತನ ನಾಚಿಕೆಯಿಂದ ಹೊರತರಲು ಒಟ್ಟುಗೂಡುವವರಾಗಿದ್ದಾರೆ. ಅವರು ಆತನ ವಿರುದ್ಧ ತಿರುಗಲಾರರು; ಅವರು ಆತನ ಜೊತೆ ಇರುತ್ತಾರೆ. ನಂಬಿಕೆಯ ಈ ಬದಿಯಿಂದ ಈ ದೃಷ್ಟಿಕೋನವು ಭಿನ್ನವಾಗಿರುತ್ತದೆ.

"ಪ್ರೀತಿಯು ಎಲ್ಲಾ ಪಾಪಗಳನ್ನು ಮುಚ್ಚುತ್ತದೆ" ಎಂದು ಪೇತ್ರನು ಹೇಳುವಾಗ, ಕ್ರೈಸ್ತರು ಒಬ್ಬರ ಬಗೆಗೆ ಒಬ್ಬರು ಹೊಂದಿರುವ ಮನೋವೃತ್ತಿಯ ಬಗೆಗೆ ಆತನು ಮಾತನಾಡುತ್ತಿದ್ದಾನೆ. ಒಬ್ಬ ಸಹೋದರ ಅಥವಾ ಸಹೋದರಿಯು ಏನು ಮಾಡಬೇಕೆಂದು ಅವರು ನೋಡುತ್ತಿದ್ದಾರೆಯೋ ಅದರ ಮೇಲೆ ಯೋಗ್ಯವಾದ ಉದ್ದೇಶವನ್ನು ಇಡಲು ಅವರು ಉತ್ಸುಕರಾಗಿದ್ದಾರೆ. ಸಹೋದರ ಅಥವಾ ಸಹೋದರಿಯು ಮಾತುಗಳ ಮೇಲೆ ಕರುಣೆಯಿಂದ ನೋಡುವವರಾಗಿದ್ದಾರೆ, ಅದೇ ರೀತಿಯ ಮಾತುಗಳನ್ನು ಬೇರೆಯವರು ಮಾತನಾಡಿದ್ದಾದರೆ ಅವರ ಮೇಲೆ ರೇಗುವವರಾಗಿದ್ದಾರೆ. ಯೇಸು ಕ್ರಿಸ್ತನು ದೇವರ ಮಗನು, ಆತನು ಸತ್ತವರೊಳಗಿಂದ ಎದ್ದವನು, ಮತ್ತು ಆತನು ತಿರುಗಿ ಬರುವನು ಎಂದು ಇನ್ನೊಬ್ಬ ವ್ಯಕ್ತಿಯು ಒಂದು ಸಾರಿ ಅರಿಕೆ ಮಾಡಿದ್ದಾದರೆ, - ಯೇಸುವಿನಲ್ಲಿ ಒಂದು ಸಾರಿ

ಬಂದುತ್ವವನ್ನು ಹಂಚಿಕೊಂಡಿದ್ದಾದರೆ - ನಾವು ಆತನನ್ನು ಭಿನ್ನವಾಗಿ ನೋಡುತ್ತೇನೆ. ಆತನ ಉದ್ದೇಶಗಳನ್ನು ತೀರ್ಪು ಮಾಡುವಲ್ಲಿ ನಾನು ನಿಧಾನನಾಗುತ್ತೇನೆ. ಆತನ ಅರ್ಹತೆಯನ್ನು ನೋಡಲು ಮತ್ತು ಹೊಗಳಲು ಕ್ಷಿಪ್ರನಾಗುತ್ತೇನೆ. ಪೌಲನಾಗಲೀ ಅಥವಾ ಪೇತ್ರನಾಗಲೀ ಎಂದೂ ಈ ವಿಷಯವನ್ನು ಮಾಡಲು ದಣಿಯಲಿಲ್ಲ. "ಸಮಯವಿರಲಾಗಿ ಎಲ್ಲರಿಗೂ ಒಳ್ಳೆಯದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ" (ಗಲಾತ್ಯ 6:10); "ಪ್ರೀತಿಯು ತಾಳ್ಮೆಯುಳ್ಳದ್ದು, ಪ್ರೀತಿಯು ದಯೆ ತೋರಿಸುವದು ... ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ ..." (1 ಕೊರಿಂಥ 13:4, 5).

(3) *ಕ್ರಿಸ್ತೀಯ ದೃಷ್ಟಿಕೋನವು ಭಿನ್ನವಾಗಿರುತ್ತದೆ ಯಾಕೆಂದರೆ ಎಲ್ಲಾ ತರದ ಅಂತರಗಳನ್ನು ಹೊಂದಿದಾಗ್ಯೂ* ಕೂಡಾ ಒಬ್ಬರಿಗೊಬ್ಬರು ಆದರಿಸುವದನ್ನು ಕ್ರೈಸ್ತರು ಕಲಿತಿರುತ್ತಾರೆ. ನಾವು ಯಾವಾಗಲೂ ಒಂದೇ ಆಗಿರುವುದಿಲ್ಲ. ದೇವರು ವಿಭಿನ್ನವಾದ ವರಗಳನ್ನು ಕೊಡುತ್ತಾನೆ. ಪೇತ್ರನು ಹೀಗೆ ಬರೆಯುತ್ತಾನೆ,

> ನೀವೆಲ್ಲರೂ ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೇ ಮನೆವಾರ್ತೆಯರಾಗಿದ್ದು ಪ್ರತಿಯೊಬ್ಬನು ತಾನು ಹೊಂದಿದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ. ಒಬ್ಬನು ಬೋಧಿಸುವವನಾದರೆ ದೈವೋಕ್ತಿಗಳನ್ನು ನುಡಿಯುವವನಾಗಿ ಬೋಧಿಸಲಿ. ಒಬ್ಬನು ಸಭೆಯ ಸೇವೆಮಾಡುವವನಾದರೆ ದೇವರಿಂದ ಶಕ್ತಿಯನ್ನು ಹೊಂದಿದವನಾಗಿ ಮಾಡಲಿ ... (1 ಪೇತ್ರ 4:10, 11).

ನಮ್ಮಲ್ಲಿ ಎಲ್ಲರೂ ವಿಭಿನ್ನವಾದ ಸ್ಥಾನಗಳನ್ನು ಹೊಂದಿರುತ್ತೇವೆ. ಕೆಲವರು ಸ್ವಭಾವತಃ ಶಾಂತರಾಗಿರುತ್ತಾರೆ; ಇತರರು ಮಾತಾಳಿಗಳು ಆಗಿರುತ್ತಾರೆ. ಕೆಲವರು ರಾಭುವಂತಹ ನಿರ್ಧಾರಗಳನ್ನು ಕೊಡುವವರಾಗಿರುತ್ತಾರೆ; ಇತರರು ಸ್ಥಿರವಾಗಿರುವವರೂ ಮತ್ತು ವಿಶ್ವಾಸಾರಾರ್ಹರು ಆಗಿರುತ್ತಾರೆ. ಕ್ರೈಸ್ತರು ಕ್ರಿಸ್ತನಿಂದ ತಮಗೆ ಬಂದಿರುವ ದೃಷ್ಟಿಕೋನವನ್ನು ಹೊಂದಿರು ವಾಗ, ಅವರು ತಮ್ಮ ಜೊತೆ ವಿಶ್ವಾಸಿಗಳನ್ನು ಮಧುರವಾದ ಪ್ರೀತಿಯ ಜೊತೆ ಸೇರಿಸುವವ ರಾಗಿರುತ್ತಾರೆ. ಒಳ್ಳೆಯವನನ್ನಾಗಿ, ಆತನ ಅಥವಾ ಅವಳ ಜೀವಿತದಲ್ಲಿ ಆತ್ಮೀಕ ಫಲವನ್ನು ನೋಡಲು ಬಯಸುವವರಾಗಿ, ಒಬ್ಬರಿಗೊಬ್ಬರು ಕೊಡುವ ಶಿಷ್ಯತ್ವದ ವ್ಯವಹಾರವನ್ನು ಇರಿಸುವ ರೀತಿಯಿಂದ ಒಬ್ಬ ವ್ಯಕ್ತಿಯನ್ನು ತಿಳಿಯಬೇಕು. ಅದು ಗಣನೆಗೆ ಬಾರದಿರುವಂಥ ಪಾಪದಂಥದ್ದು ಅಲ್ಲ, ಅದು ನ್ಯೂನ್ಯತೆಗೆ ಹೊರತಾದ ಪ್ರೀತಿಸುವಿಕೆಯು ಆಗಿದೆ.

ಒಬ್ಬರಿಗೊಬ್ಬರಲ್ಲಿ ಭಿನ್ನತೆಯನ್ನು ಕಂಡುಕೊಂಡಿದ್ದಕ್ಕೆ ವಂದನೆಯನ್ನು ಹೇಳು ವವರೂ ಮತ್ತು ಅವರಿಗಿಂತಲೂ ಭಿನ್ನವಾದ ವರಗಳನ್ನು ಇತರರು ಹೊಂದಿರುವದನ್ನು ಗೌರವಿಸುವವರೂ ಆಗಿರಬೇಕೆಂದು ಹೊಸ ಒಡಂಬಡಿಕೆಯು ಪದೇ ಪದೇ ವಿಶ್ವಾಸಿಗಳಿಗೆ ಒತ್ತಾಯಿಸುವುದಾಗಿದೆ (ನೋಡಿರಿ 1 ಕೊರಿಂಥ 12:12, 13). ಪ್ರೀತಿಯು ನಮ್ಮಿಂದ ಅಸಾಧ್ಯವಾದದ್ದನ್ನು ಬಯಸಲಾರದು. ನಾವು ಆನಂದಿಸುವದೆಲ್ಲವೂ ಅದೇ ವ್ಯಕ್ತಿಯೊಡನೆ ಅವಶ್ಯವೆಂದೇನೂ ಇಲ್ಲ. ಕೆಲವಕ್ಕಿಂತಲೂ ಇತರರಿಗಿಂತಲೂ ಹೆಚ್ಚು ನಾವು ಸಾಮಾನ್ಯವಾ ಗಿದ್ದೇವೆ. ಕ್ರೈಸ್ತರು ದೋಷಿಗಳಾಗಿರುವದಿಲ್ಲ ಯಾಕೆಂದರೆ ಕೆಲವರು ಅವರಿಗೆ ವಿಶೇಷವಾಗಿ ಪ್ರೀಯರಾಗಿರುತ್ತಾರೆ, ಆದರೆ ಅದಕ್ಕಿಂತಲೂ ದೊಡ್ಡದಾಗಿರಬೇಕೆಂದು ಕ್ರಿಸ್ತನು ನಮ್ಮಿಂದ ಬಯಸುವವನಾಗಿದ್ದಾನೆ. ಎಲ್ಲಾ ಜನರನ್ನು ನಾವು ಗೌರವಿಸುವದನ್ನು ನಮ್ಮೆಲ್ಲ ಸಹೋದರ ಮತ್ತು ಸಹೋದರಿಯರನ್ನು ಕರುಣೆಯಿಂದ ನೋಡುವದನ್ನು ಮುಯ್ಯಿತೀರಿಸುವದರಲ್ಲಿ ಮತ್ತು ಟೀಕೆಮಾಡುವದರಲ್ಲಿ ನಿಧಾನರಾಗಿರುವದನ್ನು ಆತನು ಬಯಸುವವನಾಗಿದ್ದಾನೆ.

ಪೇತ್ರ ಮನದಾಳದ ಮಾತುಗಳು ಇಲ್ಲಿವೆ. ದೇವರ ಮಹಿಮೆಯು ನಮ್ಮ ಸ್ವಂತಕ್ಕಿಂತಲೂ ಬಲು ಪ್ರಮುಖವಾದದ್ದು ಎಂದು ನಾವು ನೆನಪಿಡಲೇಬೇಕು ಎಂದು ಆತನು ಹೇಳಿದ್ದಾನೆ. ನಮ್ಮ

ಭಾವನೆಗಳು ಗಾಸಿಯಾಗುವತ್ತ ನಾವು ಬದ್ಧರಾಗಬೇಕು. ನಾವು ಅದರ ಮೇಲಿರುವದನ್ನು ಪಡೆಯಬೇಕು. ಒಳ್ಳೆಯ ಮನುಷ್ಯ ಅಥವಾ ಒಳ್ಳೆಯ ಸ್ತ್ರೀ ಆಗಿರುವುದನ್ನು ನಾವು ಬಯಸದಿರುವ ಕೆಲವನ್ನು ಆ ವ್ಯಕ್ತಿಯು ಹೇಳಿದ್ದನ್ನು ನಮ್ಮಷ್ಟಕ್ಕೆ ನಾವು ನೆನಪಿಸಿಕೊಳ್ಳಬೇಕು. ಒಳ್ಳೆಯ ತನವು ನಮ್ಮ ಜೀವಿತದಲ್ಲಿ ಇರುತ್ತದೆ. ಕ್ರೈಸ್ತರು ಕಾರ್ಯಮಾಡುವದು "ಇದರಿಂದ ಎಲ್ಲಾದರಲ್ಲಿ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ ಉಂಟಾಗುವದು. ಯೇಸು ಕ್ರಿಸ್ತನಿಗೆ ಆಧಿಪತ್ಯವೂ ಘನಮಾನವು ಯುಗಯೂಗಾಂತರದಲ್ಲಿ ಇರುವವು ಆಮೆನ್" (1 ಪೇತ್ರ 4:11ಬಿ).

*ಮುಕ್ತಾಯ.* ಸಭೆಯು ನನ್ನ ಮತ್ತು ನಿನ್ನ ಬಗ್ಗೆ ಇರುವದಿಲ್ಲ. ಇದು ದೇವರ ಮತ್ತು ಆತನ ಮಹಿಮೆಯ ಬಗೆಗೆ ಇರುವದು ಆಗಿದೆ. ಯೇಸುವು ನಿನ್ನ ಮತ್ತು ನನ್ನ ಪಾಪಗಳನ್ನು ಶಿಲುಬೆಯ ದೆಸೆಯಿಂದ ನಿರ್ಲಕ್ಷಿಸಿದ್ದಾದರೆ, ನಾವು ಒಬ್ಬರಿಗೊಬ್ಬರ ಪಾಪಗಳನ್ನು ನಿರ್ಲಕ್ಷಿಸಬೇಕು. ನಮ್ಮ ಜೀವಿತದಲ್ಲಿ ಹೆಚ್ಚಾಗಿ ನಾವು ಸುಧಾರಿಸಬಹುದಾದ ಕೆಲಸ ಸಂಗತಿಗಳು ಅಲ್ಲಿವೆ. ಒಬ್ಬರಿಗೊಬ್ಬರು ದೋಷಗಳನ್ನು ತಾಳಿಕೊಳ್ಳುವದರ ಅರ್ಥವು ನಮ್ಮ ದೋಷಗಳ ಬಗೆಗೆ ಯಾರೊಬ್ಬರು ಏನನ್ನು ಹೇಳಬಾರದು ಎಂಬರ್ಥವಲ್ಲ. ಒಬ್ಬ ಸಹೋದರನು ಪ್ರೀತಿಯಲ್ಲಿ ಮತ್ತು ಗೌರವದಲ್ಲಿ ನಮ್ಮನ್ನು ತಲುಪಿದ್ದಾದರೆ ಮತ್ತು ನಮ್ಮ ಕ್ರಿಸ್ತೀಯ ಜೀವಿತದಲ್ಲಿ ಕೆಲ ಕ್ಷೇತ್ರಗಳಲ್ಲಿ ನಾವು ಎಲ್ಲಿ ಕೊರತೆಯನ್ನು ಹೊಂದಿದ್ದೇವೆಂದು ಹೇಳಿದ್ದಾದರೆ ನಾವು ಅದರಲ್ಲಿ ನಿಲ್ಲಬಹುದು. ಪ್ರೀತಿಯು ಎಲ್ಲಾ ಪಾಪಗಳನ್ನು ಮುಚ್ಚುತ್ತದೆ. ಎಂಬುದರ ಅರ್ಥವು ದೋಷವನ್ನು ಮುಟ್ಟುಹಾಕಲು ಕೆಲವರು ನಮ್ಮಿಂದ ಸಹಾಯವನ್ನು ಕೇಳಿದಾಗ ನಾವು ಎಲ್ಲಾ ಸಮಯದಲ್ಲಿ ಕುಪಿತರಾಗಿರಬೇಕು ಎಂದರ್ಥವಲ್ಲ.

---

ಟಿಪ್ಪಣಿಗಳು

[1]Wayne A. Grudem, *The First Epistle of Peter: An Introduction and Commentary,* Tyndale New Testament Commentaries, vol. 17 (Grand Rapids, Mich.: Wm. B. Eerdmans Publishing Co., 1988), 167. [2]ಮಧ್ಯ ಎರಡನೆಯ ಶತಮಾನದಲ್ಲಿಯ ಭಾಷಾಣಕಾರ ತನ್ನ ಜಗತ್ತಿನ ಸಿನಿಕ ತತ್ವಜ್ಞಾನಿ Aelius Aristides ಬಗ್ಗೆ ಸಿಡಿಸಿದನು ಮತ್ತು ನಂತರ ತನ್ನ ಗನ್ನನ್ನು ತುಲನಾತ್ಮಕ ಹೊಸಧರ್ಮ ಕ್ರೈಸ್ತತ್ವದತ್ತ ತಿರುಗಿಸಿದನು. ಆತನು ಸಿನಿಕನಿಗೆ "ದೇವದ್ರೋಹಿಗಳಾದ ಪಾಲೀಸ್ತೀನಲ್ಲಿನ ಜನರಿಗೆ ಅವರ ನಡತೆಯು ಬಲು ಹೋಲಿಕೆಯುಳ್ಳದ್ದಾಗಿತ್ತು. ಅವರು ಸಹ (ಅದು ಕ್ರೈಸ್ತರು) ಅವರಿಗಿಂತಲೂ ಮೇಲಿರುವದನ್ನು ಅವರು ಗುರುತಿಸಿಕೊಳ್ಳದೆ ಇರುವ ನಿಶ್ಚಿತವಾದ ಸೂಚನೆಯ ಮೂಲಕ ಅವರು ತಮ್ಮ ನಾಸ್ತಿಕತೆಯನ್ನು ಸಾಧಿಸಿದರು ಮತ್ತು ಅವರು ಗ್ರೀಕ್‌ರಿಂದ ಮತ್ತು ಒಳ್ಳೆಯ ಪ್ರತಿಯೊಂದರಿಂದ ತಮ್ಮನ್ನು ಬೇರ್ಪಡಿಸಿಕೊಂಡರು" ಎಂದು ಹೇಳಿದನು (Aelius Aristides *Orations* 46.) ಪೇತ್ರನಿಗೆ ನಿಕಟ ಸಮಕಾಲೀನ "ತಾವು ಮಾಡುವ ಅಪರಿಮಿತವಾದ ಪಟಿಂಗತನದಲ್ಲಿ ನೀವು ಸೇರದೇ ಇದ್ದದಕ್ಕಾಗಿ ಅವರು ಆಶ್ಚರ್ಯಪಟ್ಟು ನಿಮ್ಮನ್ನು ದೂಷಿಸುತ್ತಾರೆ" (1 ಪೇತ್ರ 4:4; NIV) ಎಂಬ ಪೇತ್ರನ ಸೂಚಿಸಿದ್ದರ ಮೂಲ ಕಾರಣಕ್ಕಾಗಿ ಕ್ರೈಸ್ತರ ಮೇಲೆ ಆರೋಪಗಳನ್ನು ಪ್ರೇರಿಸಿದರು. [3]Leon Morris, *The Biblical Doctrine of Judgment* (Grand Rapids, Mich.: Wm. B. Eerdmans Publishing Co., 1960), 72. [4]John Murray, *Principles of Conduct: Aspects of Biblical Ethics* (London: Tyndale Press, 1957), 72. [5]See comments on 1:13. [6]J. N. D. Kelly, *A Commentary on the Epistles of Peter and of Jude,* Black's New Testament Commentaries (London: Adam & Charles Black, 1969), 176. [7]ಇದು ಸರಿಯಾದ ಸಿದ್ಧಾಂತದ ಮೇಲೆ ಬೆಳಕನ್ನು ಚೆಲ್ಲುವಂತದ್ದಲ್ಲ. ಸರಿಯಾದ ಸಿದ್ಧಾಂತವು ಗಲಾತ್ಯದ ಕ್ರೈಸ್ತರಿಗೆ ಅವಶ್ಯವಾದದ್ದಾಗಿತ್ತು. 2 ಪೇತ್ರದಲ್ಲಿ ಸೂಚಿಸಿದಂತಹ ವಿಶ್ವಾಸಿಗಳಿಗೆ ಅವಶ್ಯವಾದದ್ದು ಸಹ ಇದಾಗಿದೆ. [8]Kelly supported this view. (Kelly, 178.) [9]ಇದು J. Ramsey Michaels ರವರು ಈ ಪರಿಚ್ಛೇದವನ್ನು ಅರಿತುಕೊಳ್ಳಲು ಸೂಚಿಸಿದ ಮಾರ್ಗವಾಗಿದೆ. (J. Ramsey Michaels, *1 Peter, Word Biblical Commentary,* vol. 49 [Waco, Tex.: Word Books, 1988], 247.) [10]Alan M. Stibbs and Andrew F. Walls, *The First Epistle General of Peter,* Tyndale New Testament Commentaries (Grand Rapids, Mich.: Wm. B. Eerdmans Publishing Co., 1959), 57.